ಸಂಪುಟ 15
ಸಂಚಿಕೆ 45

ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ರೂ. 2.00
14 ನವಂಬರ್ 1993

ಅಕ್ಟೋಬರ್ ಕ್ರಾಂತಿ ಎಂದೆಂದೂ ದಾರಿ ದೀಪವಾಗಿರುತ್ತದೆ

-ಸುರ್ಜಿತ್

ನವೆಂಬರ್ 7, 1917 ರಂದು ಮಹಾನ್ ಅಕ್ಟೋಬರ್ ಕ್ರಾಂತಿ ಹಚ್ಚಿದ ದಾರಿ ದೀಪ ಒಂದು ಸಮಾನತೆಯ ನ್ಯಾಯಬದ್ಧ ವ್ಯವಸ್ಥೆಯನ್ನು ಸ್ಥಾಪಿಸಲು ಮನುಷ್ಯನಿದ ಮನುಷ್ಯನ ಶೋಷಣೆ-ಯನ್ನು ಕೊನೆಗೊಳಿಸಲು ಹೋರಾಡುತ್ತಿ-ರುವ ಕ್ರಾಂತಿಕಾರಿಗಳ ದಾರಿಯನ್ನು ಬೆಳ-ಗುತ್ತಲೇ ಇರುತ್ತದೆ. ಅದರ ವಿರೋಧಿಗಳು ಎಷ್ಟೇ ಅಬ್ಬರದ ಪ್ರಚಾರ ನಡೆಸಿದರೂ ಇದು ಮಸುಕಾಗದು ಎಂದು ಸಿಪಿಐ(ಎಂ) ಪ್ರಧಾನ ಕಾರ್ಯದರ್ಶಿ ಕಾಂ. ಹರ್ಕಿಶನ್ ಸಿಂಗ್ ಸುರ್ಜಿತ್ ಹೇಳಿದ್ದಾರೆ.

ಕಮ್ಯುನಿಸ್ಟ್ ವಿರೋಧಿಗಳ, ಪ್ರತಿಗಾಮಿಗಳ ಭಯಂಕರ ಆಕ್ರಮಣಗಳೂ ಕೂಡಾ ಹೊಸ ಹಾದಿ ನಿರ್ಮಿಸಿದ, ಮೊದಲ ಸಮಾಜವಾದಿ ಪ್ರಭುತ್ವವನ್ನು ಸ್ಥಾಪಿಸಿದ ಆ ಮಹಾನ್ ಘಟನೆಯ ಮಹತ್ವವನ್ನು ಮಸುಕುಗೊಳಿಸಲು, ಮುಳುಗಿಸಿಬಿಡಲು ಸಾಧ್ಯವಿಲ್ಲ. ಕಲ್ಕತ್ತಾದಲ್ಲಿ ನಡೆದ ವಿಚಾರಸಂಕಿರಣ ತೀರ್ಮಾನಿಸಿರುವಂತೆ ಮಾರ್ಕ್ಸ್‌ವಾದ-ಲೆನಿನ್‌ವಾದದ ಸಾಮಂಜಸ್ಯ ಪ್ರಸ್ತುತತೆ ಕಮ್ಮಿಯಾಗಿಲ್ಲ. ಅದರ ಶತ್ರುಗಳು ಸಮಾಜವಾದ, ಕಮ್ಯುನಿಸಂ ಕುಸಿದಿದೆ ಎಂದು ಹೇಳಿಕೊಂಡರೂ ಅವು ಅಪ್ರಸ್ತುತ ಎಂದು ತೋರಿಸಿಕೊಡಲು ಅವರಿಗಾಗಿಲ್ಲ ಎಂದು ಅವರು ಸಿಪಿಐ(ಎಂ) ಕೇಂದ್ರ ಸಮಿತಿಯ ಪತ್ರಿಕೆ 'ಪೀಪಲ್ಸ್ ಡೆಮಾಕ್ರಸಿ'ಯಲ್ಲಿ ಅಕ್ಟೋಬರ್ ಕ್ರಾಂತಿಯ 76 ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ಬರೆದ ಲೇಖನದಲ್ಲಿ ಹೇಳಿದ್ದಾರೆ.

ಸಾಮ್ರಾಜ್ಯಶಾಹಿಗಳ ಅಪಪ್ರಚಾರದಲ್ಲಿ ಹೊಸತೇನೂ ಇಲ್ಲ

ಕಮ್ಯುನಿಸ್ಟ್ ಆಂದೋಲನದ ಇತಿಹಾಸದಲ್ಲಿ ವಿಶ್ವಾದ್ಯಂತ ಬಂಡವಾಳಶಾಹಿಗಳ, ಸಾಮ್ರಾಜ್ಯಶಾಹಿಗಳ ಹಲವಾರು ಆಕ್ರಮಣಗಳನ್ನು ಹೇಗೆ ಅದು ಎದುರಿಸಿದೆ, ಹಿಮ್ಮೆಟ್ಟಿಸಿದೆ ಎಂಬ ಘಟನೆಗಳಿಂದ ತುಂಬಿ ತುಳುಕುತ್ತಿದೆ. ಇಂತಹ ಪ್ರತಿಯೊಂದು ಆಕ್ರಮಣವೂ ಕಮ್ಯುನಿಸ್ಟರ ದೃಢ ವಿಶ್ವಾಸವನ್ನು ಮತ್ತಷ್ಟು ದೃಢಗೊಳಿಸಿದೆ, ಅಸಮಾನತೆಯನ್ನು ಹುಟ್ಟಿ ಹಾಕುವ ಶೋಷಕ ವ್ಯವಸ್ಥೆಯನ್ನು ಕೊನೆಗೊಳಿಸುವ ಅವರ ನಿರ್ಧಾರವನ್ನು ಬಲಪಡಿಸಿದೆ. ಕಾರ್ಲ್‌ಮಾರ್ಕ್ಸ್‌ರ ಕಾಲದಿಂದಲೂ ಕಂಡು ಬಂದ ಸಂಗತಿಯಿದು. ಈಗಿನ ಸಾಮ್ರಾಜ್ಯಶಾಹಿ-ಪ್ರೇರಿತ ಪ್ರಚಾರದಲ್ಲಿ ಹೊಸತೇನೂ ಇಲ್ಲ. ಕಮ್ಯುನಿಸ್ಟ್ ಸಿದ್ಧಾಂತ ಅಸಮರ್ಪಕ ಹೌದೋ ಅಲ್ಲವೋ, ಸಮಾಜವಾದವಂತೂ ಸತ್ತಿದೆ ಎಂಬ ಕೆಲವರ ಭವಿಷ್ಯವಾಣಿಗೆ ವ್ಯತಿರಿಕ್ತವಾಗಿ ವಿಶ್ವಾದ್ಯಂತ ಕಮ್ಯುನಿಸ್ಟರು ತಮ್ಮ ಆರಂಭದ ಆಘಾತದಿಂದ ಹೊರಬಂದು ಇಂತಹ ಸೋಲುಗಳಿಗೆ ಕಾರಣವೇನು ಎಂದು ವಿಚಾರ ಮಾಡಲು, ಅಧ್ಯಯನ ಮಾಡಲು ಆರಂಭಿಸಿದರು. ಇಂತಹ ವಿಶ್ಲೇಷಣೆಗಳಿಂದ ಅವರು ಕಂಡುಕೊಂಡ ತೀರ್ಮಾನ ತಪ್ಪುಗಳನ್ನು, ದೌರ್ಬಲ್ಯಗಳನ್ನು ಗುರುತಿಸಿಕೊಳ್ಳುತ್ತಲೇ ಮಾರ್ಕ್ಸ್‌ವಾದ-ಲೆನಿನ್‌ವಾದ ಅವರ ಬದ್ಧತೆಯನ್ನು ದ್ವಿಗುಣಗೊಳಿಸಿದೆ ಎಂದು ಸುರ್ಜಿತ್ ಹೇಳಿದ್ದಾರೆ.

ಮಹಾನ್ ಅಕ್ಟೋಬರ್ ಕ್ರಾಂತಿ ಯಶಸ್ವಿಯಾಗಿ ನಡೆದುದೇ ಮಾರ್ಕ್ಸ್‌ವಾದ- ಲೆನಿನ್‌ವಾದದ ವೈಜ್ಞಾನಿಕತೆಗೆ ಸಾಕ್ಷಿ. ಈ ಕ್ರಾಂತಿ ಹಾಗೂ ಅದರ ಪರಿಣಾಮವಾಗಿ ಮೂಡಿ ಬಂದ ಸೋವಿಯೆತ್ ಒಕ್ಕೂಟ ನಂತರ ಏಳು ದಶಕಗಳ ಕಾಲ ವಿಶ್ವದ ಘಟನೆಗಳ ಮೇಲೆ ಪ್ರಭಾವ ಬೀರಿತು. ವಿಶ್ವ ಕಾರ್ಮಿಕ ಆಂದೋಲನಕ್ಕೆ, ರಾಷ್ಟ್ರೀಯ ವಿಮೋಚನಾ ಆಂದೋಲನಗಳಿಗೆ, ಸಾಮಾಜಿಕ ಕ್ರಾಂತಿಗಳಿಗೆ ಸ್ಫೂರ್ತಿ ನೀಡಿತು. ವಿಶ್ವಶಾಂತಿಯ ರಕ್ಷಕನಾಗಿ ನಿಂತಿತು. ಸೋವಿಯೆತ್ ಒಕ್ಕೂಟ ತನ್ನ ನಾಗರಿಕರಿಗೆ ಒದಗಿಸಿದ ಅಭೂತಪೂರ್ವ ಹಕ್ಕುಗಳು, ಸೌಲಭ್ಯಗಳಿಂದಾಗಿ ಇತರ ದೇಶಗಳ ದುಡಿಯುವ ಜನಗಳ ಹೋರಾಟಕ್ಕೆ ಬಲದೊರೆಯಿತಲ್ಲದೆ, ಆ ದೇಶಗಳ ಬಂಡವಾಳಶಾಹಿಗಳೂ

ಪುಟ 8ಕ್ಕೆ

ಕಾವೇರಿ ಗಲಭೆ ಕುರಿತ ನ್ಯಾ. ಎನ್.ಡಿ. ವೆಂಕಟೇಶ್ ಆಯೋಗದ ವರದಿ

ವೈಫಲ್ಯವನ್ನು ಗುರುತಿಸಿದರೂ ಹೊಣೆಗಾರಿಕೆಯನ್ನು ಮರೆಮಾಚುವುದೇಕೆ?

ಕರ್ನಾಟಕ-ತಮಿಳುನಾಡು ನಡುವಿನ ಕಾವೇರಿ ಜಲವಿವಾದ ಚರ್ಚೆ ಮೂಲಕ ಬಗೆಹರಿಸಿಕೊಳ್ಳುವಲ್ಲಿ ವಿಫಲವಾದಾಗ, ಕಾವೇರಿ ಜಲವಿವಾದಕ್ಕೆ ಸಂಬಂಧಿಸಿದ ನ್ಯಾಯ ಮಂಡಳಿ ಕರ್ನಾಟಕ ಸರಕಾರ ತಮಿಳುನಾಡಿಗೆ ಮಂಡಳಿ ಕೊನೆ ತೀರ್ಪು ನೀಡುವವರೆಗೆ 205 ಟಿ.ಎಂ.ಸಿ. ನೀರನ್ನು ಪ್ರತಿವರ್ಷ ಬಿಡುಗಡೆ ಮಾಡಬೇಕೆಂದು ನೀಡಿದ ಮಧ್ಯಯಂತರ ತೀರ್ಪು ಹೊರಬಿದ್ದ ಕೂಡಲೇ ಬೆಂಗಳೂರು ಮಂಡ್ಯ ಮೊದಲಾದೆಡೆಗಳಲ್ಲಿ ತೀವ್ರ ಪ್ರತಿರೋಧ, ಹಿಂಸಾಚಾರ ಗೋಳೀಬಾರ್ ನಡೆಯಿತು. ಡಿಸೆಂಬರ್ 12, 13, 14 1991 ಬೆಂಗಳೂರಿನಲ್ಲಿ ನಡೆದ ಗೋಳೀಬಾರ್, ಹಿಂಸಾಚಾರಗಳ 23 ಮಂದಿ ಅಸುನೀಗಿ ಸಾರ್ವಜನಿಕ ಮತ್ತು ಖಾಸಗಿ ಆಸ್ತಿಪಾಸ್ತಿಗೆ ಕೋಟ್ಯಾವದಿ ರೂಪಾಯಿ ಹಾನಿಯಾಯಿತು. ತಮಿಳು ಜನರಿಗೆ ಅಪಾರ ನಷ್ಟವಾಯಿತು. ಆಡಳಿತೆಯ ನಿಷ್ಕ್ರಿಯತೆ ಪೋಲೀಸರ ದೌರ್ಜನ್ಯದಿಂದಾಗಿ ಅಲ್ಪಭಾಷಿಕರಿಗೆ ಅಪಾರ ಅನ್ಯಾಯ, ನಷ್ಟವಾಗಿದೆ, ಕನ್ನಡ ಸಂಘ ಸಂಸ್ಥೆಗಳ ಪ್ರಚೋದನೆ ಈ ಹಿಂಸಾಚಾರಕ್ಕೆ ಪ್ರಚೋದನೆ ನೀಡಿದೆ, ಇದರ ಕುರಿತು ನ್ಯಾಯಾಂಗ ತನಿಖೆ ನಡೆಯಬೇಕೆಂದು ಸಿಪಿಐ(ಎಂ) ಮತ್ತು ಇತರ ವಿರೋಧ ಪಕ್ಷಗಳು ಒತ್ತಾಯ ಮಾಡಿದ್ದವು. ಆ ಒತ್ತಾಯಕ್ಕೆ ಮಣಿದು ಅಂದಿನ ಬಂಗಾರಪ್ಪ ಸರಕಾರ 1992 ಪ್ರಾರಂಭದಲ್ಲಿ ನಿವೃತ್ತ ನ್ಯಾಯಮೂರ್ತಿ ಎನ್.ಡಿ. ವೆಂಕಟೇಶ್ ನೇತೃತ್ವದಲ್ಲಿ ತನಿಖಾ ಆಯೋಗ ರಚಿಸಿತ್ತು. ದಿನಾಂಕ ಅಕ್ಟೋಬರ್ 27, 1993 ರಂದು ಆಯೋಗ ತನ್ನ ವರದಿಯನ್ನು ಸರಕಾರಕ್ಕೆ ಸಲ್ಲಿದೆ.

ಕಾವೇರಿ ಜಲವಿವಾದದ ಹಿನ್ನೆಲೆಯಲ್ಲಿ ನಗರದಲ್ಲಿ ಹಿಂಸಾಚಾರ ಭುಗಿಲೇಳಬಹುದೆಂಬುದನ್ನು ಮುಂಗಂಡು, ಅವುಗಳನ್ನು ಸಕಾಲದಲ್ಲಿ ತಡೆಯಲು ಸಂಬಂಧ ಪಟ್ಟ ಅಧಿಕಾರಿಗಳು ವಿಫಲಗೊಂಡಿದ್ದಾರೆಂದು ಮಾತ್ರ ತನಿಖಾ ಆಯೋಗ ಪ್ರತಿಕ್ರಿಯಿಸಿದೆಯಲ್ಲದೆ ನಿರಪರಾಧಿಗಳ ಹತ್ಯೆಗೆ ಗೋಳೀಬಾರು ಮಾಡಿದವರ ಮೇಲಾಗಲೀ ಗಲಭೆಗಳಾಗ ಬಹುದೆಂದು ಊಹಿಸಲೂ ಅಸಮರ್ಥವಾದ ಮಂತ್ರಿಗಳಾಗಲೀ ಪೋಲೀಸ್ ಅಧಿಕಾರಿಗಳಾಗಲಿ ಜವಾಬ್ದಾರರೆಂದು ಹೇಳುವಲ್ಲಿ ಆಯೋಗ ವಿಫಲಗೊಂಡಿದೆ. ಪೋಲೀಸರು ತಮಿಳು ಕಾರ್ಮಿಕರ, ಬಡಜನರ ಮನೆಗಳಿಗೆ ಹೋಗಿ ದೌರ್ಜನ್ಯ ನಡೆಸಿದ್ದಾರೆಂದೂ ಹಾಗೆಯೇ ತಮಿಳರ ಮೇಲಿನ ದೌರ್ಜನ್ಯ ನಡೆದಾಗ ಪೋಲೀಸರು ಬರೇ ಪ್ರೇಕ್ಷಕರಾಗಿಯೇ ವರ್ತಿಸುತ್ತಿದ್ದರೆಂಬ ಅಂಶವನ್ನು ಸಿಪಿಐ(ಎಂ) ಪಕ್ಷ ಸರಕಾರದ ಗಮನಕ್ಕೆ ತಂದಿತ್ತು.

ಕಾನೂನು ಮತ್ತು ಸುವ್ಯವಸ್ಥೆಯ ಜವಾಬ್ದಾರಿ ಹೊಂದಿದ್ದ ಪೋಲೀಸು ಮಹಾನಿರ್ದೇಶಕ-ನಿರೀಕ್ಷಕ, ಗೃಹ ಖಾತೆ ಕಾರ್ಯದರ್ಶಿ, ಗೃಹ ಸಚಿವರು ಮತ್ತು ನಗರ ಪೋಲೀಸ್ ಕಮಿಶನರ್ ಜಲವಿವಾದದ ಕುರಿತು ಮಧ್ಯಂತರ ಆದೇಶ ಗಜೆಟ್‌ನಲ್ಲಿ ಪ್ರಕಟವಾದ ಕೂಡಲೇ ಮುಂದೆ ಬರಬಹುದಾದ ಪರಿಸ್ಥಿತಿಯನ್ನು ಊಹಿಸಿ ಕ್ರಮ ಕೈಗೊಳ್ಳಬೇಕಿತ್ತು. ಆದರೆ ಈ ಕಾರ್ಯದಲ್ಲಿ ಈ ನಾಲ್ವರೂ ವಿಫಲರಾಗಿದ್ದರೆಂದು ಮಾತ್ರ ತನ್ನ ವರದಿಯಲ್ಲಿ ಹೇಳಿ ತನಿಖಾ ವರದಿ ಜೀವ ಹಾನಿ, ಆಸ್ತಿಹಾನಿಯಂಥ ದಾರುಣ ಘಟನೆಯ ಮಹತ್ವವನ್ನೇ ಕಡೆಗಣಿಸಿದಂತಾಗಿದೆ.

ಪುಟ 8ಕ್ಕೆ

ಕಾಶ್ಮೀರ: ಅಮೇರಿಕಾದ ಸೊಕ್ಕಿನ ಪ್ರದರ್ಶನ

ಹಲ್ಲುಗಿಂಜುವ, ತಲೆಬಾಗುವ ರಾವ್ ಸರ್ಕಾರದ ಧೋರಣೆಯ ಫಲ

ಕಾಶ್ಮೀರದ ಕುರಿತಂತೆ ಅಮೇರಿಕಾದ ಮನಸ್ಸಿನಲ್ಲೇನಿದೆ ಎಂಬ ಬಗ್ಗೆ ಸಿಪಿಐ(ಎಂ) ಭಾರತ ಸರಕಾರವನ್ನು ಸದಾ ಎಚ್ಚರಿಸುತ್ತಲೇ ಬಂದಿತ್ತು. ಅದೀಗ ನಿಜವಾಗಿದೆ. ವಿಶ್ವಸಂಸ್ಥೆಯ ಮಹಾಸಭೆಯಲ್ಲಿ ಅಧ್ಯಕ್ಷಕ್ಲಿಂಟನ್‌ರ ಟಿಪ್ಪಣಿ ಈ ಬಗ್ಗೆ ಒಂದು ಸೂಚನೆ ನೀಡಿತ್ತು. ಈಗ ಅಮೇರಿಕಾದ ಅಧಿಕೃತ ವಕ್ತಾರರೊಬ್ಬರು ಕಾಶ್ಮೀರ ಭಾರತಕ್ಕೆ ಸೇರ್ಪಡೆಯಾಗಿರುವುದನ್ನೇ ಪ್ರಶ್ನಿಸಿದ್ದಾರೆ. ಕಾಶ್ಮೀರ ಕಣಿವೆ ವಿವಾದಗ್ರಸ್ತ ಪ್ರದೇಶ ಎಂದಿದ್ದಾರೆ. ಇದು ಭಾರತ-ಪಾಕಿಸ್ತಾನ ಸಂಬಂಧಗಳ ಸಂದರ್ಭದಲ್ಲಿ ಕಾಶ್ಮೀರ ಕುರಿತಂತೆ ಅಮೇರಿಕಾದ್ದು ನೆಚ್ಚಲಾಗದ ನಿಲುವು ಎಂಬುದನ್ನು ದೃಢಪಡಿಸಿದೆ ಎಂದು ಸಿಪಿಐ(ಎಂ) ಪೊಲಿಟ್ ಬ್ಯೂರೋ ಖಂಡಿಸಿದೆ. ಕಾಶ್ಮೀರದಲ್ಲಿ ಹಜರತ್ ಬಲ್ ದರ್ಗಾ ಬಿಕ್ಕಟ್ಟಿನ ಸೂಕ್ಷ್ಮ ಸಂದರ್ಭದಲ್ಲಿ ಇಂತಹಾ ಟಿಪ್ಪಣಿಗಳು ಬಂದಿರುವುದು ಅಷ್ಟೇ ಅನಿಷ್ಟಕಾರಿ ಎಂದು ಪಿ.ಬಿ. ಹೇಳಿದೆ.

ಶಿಮ್ಲಾ ಒಪ್ಪಂದ ದ್ವಿಪಕ್ಷೀಯ ಮಾತುಕತೆಗಳ ಮೂಲಕ ಸಮಸ್ಯೆಯ ಪರಿಹಾರಕ್ಕೆ ಒಂದು ಆಧಾರವಾಗಬಲ್ಲದು ಎಂಬ ನಿಲುವನ್ನು ಕೂಡಾ ಕ್ಲಿಂಟನ್ ಆಡಳಿತ ಕೈಬಿಟ್ಟಿದೆ. ಪ್ರತ್ಯೇಕತಾವಾದಿ-ಭಯೋತ್ಪಾದಕ ಚಟುವಟಿಕೆಗಳನ್ನು ಹೇಗೆ ಎದುರಿಸುವುದೆಂಬುದು ಭಾರತದ ಆಂತರಿಕ ವ್ಯವಹಾರ. ಕ್ಲಿಂಟನ್ ಆಡಳಿತ ಅದನ್ನೂ ಟೀಕಿಸಿದೆ ಎಂಬುದರತ್ತವೂ ಪಿ.ಬಿ. ಗಮನ ಸೆಳೆದಿದೆ.

"ಅಮೇರಿಕಾ ಸೊಕ್ಕಿನ ನಿಲುವನ್ನು ನಾವು ದೃಢವಾಗಿ ತಿರಸ್ಕರಿಸುತ್ತೇವೆ. ಇದು ಗ್ರೆನಡಾ, ಪನಾಮಾ, ಲಿಬ್ಯಾ, ಇರಾಕ್ ಹಾಗೂ ಸೋಮಾಲಿಯಾದಲ್ಲಿ ಕಂಡಿರು-ವಂತೆ ಇತರ ದೇಶಗಳ ಜನರ ಹಕ್ಕುಗಳನ್ನು ತುಳಿದು ಹಾಕುವಲ್ಲಿ ಏನೇನೂ ಹಿಂಜರಿಕೆ ತೋರದ ಅಮೇರಿಕಾದ ಗೋಸುಂಬೆ ನಿಲುವನ್ನು ಬಯಲಿಗೆಳೆದಿದೆ" ಎಂದು ಪಿ.ಬಿ. ತನ್ನ ಸಿಟ್ಟನ್ನು ವ್ಯಕ್ತಪಡಿಸಿದೆ.

ಅಮೇರಿಕಾದ ಈ ಟಿಪ್ಪಣಿಗಳ ಬಗ್ಗೆ ನರಸಿಹರಾವ್ ಸರಕಾರ ಪ್ರತಿಭಟನೆ ಸಲ್ಲಿಸಿದರಷ್ಟೇ ಸಾಲದು. ಆರ್ಥಿಕರಂಗದಲ್ಲಿ ಮತ್ತು ಇತರ ಎಲ್ಲಾ ರಂಗಗಳಲ್ಲಿ ಅಮೇರಿಕಾದ ಒತ್ತಡಗಳಿಗೆ ತಲೆ ಬಾಗುವ, ಹಲ್ಲುಗಿಂಜುವ ಈ ಸರ್ಕಾರದ ವಿನಾಶಕಾರೀ ಧೋರಣೆ ದೇಶದ ಹಿತಾಸಕ್ತಿಗಳಿಗೆ ಎಷ್ಟೊಂದು ಮಾರಕ ಎಂದೀಗ ಸಾಬೀತಾಗುತ್ತಿದೆ ಎಂದಿರುವ ಪೊಲಿಟ್‌ಬ್ಯೂರೋ ಅಮೇರಿಕಾದಿಂದ ಬರುವ ಇಂತಹ ಎಲ್ಲಾ ಒತ್ತಡಗಳನ್ನು ಪ್ರತಿರೋಧಿಸುವ ಒಂದು ದೃಢ ನಿಲುವನ್ನು ಭಾರತ ಸರಕಾರ ತಳೆಯಬೇಕು ಎಂದು ಆಗ್ರಹ ಪಡಿಸಿದೆ.

ಅಸಂಘಟಿತ ಕಾರ್ಮಿಕರ ಅನಿರ್ದಿಷ್ಟ ಹೋರಾಟಕ್ಕೆ ಕರೆ

- ಸಿಐಟಿಯು ರಾಜ್ಯ ಮಂಡಳಿ ನಿರ್ಣಯ

ಇದೇ ತಿಂಗಳು ನವೆಂಬರ್, 22 ರಿಂದ ವಿಧಾನಸೌಧದ ಎದುರು ಅನಿರ್ದಿಷ್ಟ ಅವಧಿಯ ಸಾಮೂಹಿಕ ಧರಣಿ ಸತ್ಯಾಗ್ರಹ ನಡೆಸಬೇಕೆಂದು ಅಕ್ಟೋಬರ್ 30-31, 1993 ರಂದು ಬೆಳಗಾವಿಯ ಇಂಡಾಲ ಕಾರ್ಖಾನೆಯ ಆವರಣದಲ್ಲಿ ನಡೆದ ಸಿಐಟಿಯು ರಾಜ್ಯ ಮಂಡಳಿ ಸಭೆ ನಿರ್ಣಯಿಸಿದೆ ಸುಮಾರು 2000 ಕಾರ್ಮಿಕರು ರಾಜ್ಯದ ವಿವಿಧೆಡೆಗಳಿಂದ ಬೆಂಗಳೂರಿಗೆ ಬಂದು ಈ ಕಾರ್ಯಕ್ರಮದಲ್ಲಿ ಭಾಗವಹಿಸುತ್ತಾರೆ, ಕೈಮಗ್ಗ ನೇಕಾರರು, ಬೀಡಿ ಕಾರ್ಮಿಕರು, ತೋಟ ಕಾರ್ಮಿಕರು ಹಾಗೆಯೇ ಇತರ ಕಾರ್ಮಿಕರು ರಾಜ್ಯದ ಇತರ ಜಿಲ್ಲೆಗಳಿಂದ ಬರಲಿದ್ದಾರೆ. ಅಲ್ಲದೆ ದ.ಕ. ದಿಂದ 75, ಬಳ್ಳಾರಿಯಿಂದ 100, ಧಾರವಾಡ, ಹುಬ್ಬಳ್ಳಿ, ಬೆಳಗಾವ, ಹರಿಹರ ದಿಂದ 400 ಶಿವಮೊಗ್ಗ, ಕೋಲಾರ, ತುಮಕೂರು, ಮಂಡ್ಯ ಮೈಸೂರು, ಬಿಜಾಪುರ, ಗುಲ್ಬರ್ಗಾ, ರಾಯಚೂರುಗಳಿಂದ ಕನಿಷ್ಟ ವೇತನ ಕಾಯಿದೆಗೊಳಪಡುವ 10000 ದುಡಿಮೆ ಕಾರ್ಮಿಕರು, ಹಾಗೆಯೇ ಚಿಕ್ಕಮಗಳೂರು, ಹಾಸನ ಕೊಡಗುಳಿಂದ 100 ಕ್ಕಿಂತಲೂ ಹೆಚ್ಚು ಪ್ಲಾಂಟೇಶನ್ ಕಾರ್ಮಿಕರು, ಈ ಧರಣಿಯಲ್ಲಿ ಪಾಲ್ಗೊಳ್ಳಲಿದ್ದಾರೆ, 22-11-1993 ರಂದು ಮುಂಜಾನೆ 10 ಗಂಟೆಗೆ ಕಬ್ಬನ್ ಪಾರ್ಕಿನಲ್ಲಿ ಎಲ್ಲರೂ ಸೇರಲಿದ್ದಾರೆ.

ಈ ಹೋರಾಟದ ಮುಖ್ಯ ಉದ್ದೇಶ ರಾಜ್ಯ ಸರಕಾರ ನಮ್ಮ ಅಸಂಘಟಿತ ಕಾರ್ಮಿಕರಿಗೆ 1,309 ಪಾಯಿಂಟಿಗೆ ರೂ. 1,800 ಕನಿಷ್ಟ ಕೂಲಿಕೊಡುವ ಪ್ರಕಟಣೆ ಹೊರಡಿಸಬೇಕು ಅಥವಾ ಈಗಾಗಲೇ ಸರಕಾರ ಸಿನೆಮಾ ಕಾರ್ಮಿಕರಿಗೆ ನಿಗದಿ ಪಡಿಸಿರುವ ರೂ. 46.64 ರಂತೆ ಕನಿಷ್ಟ ಕೂಲಿ ಕೊಡಲು ಒಪ್ಪಬೇಕು, ಸರಕಾರ ತಮ್ಮ ಬೇಡಿಕೆ ಒಪ್ಪುವವರೆಗೆ ಧರಣಿ ಮುಂದುವರಿಸಲಾಗುವುದು ಎಂದು ಸಿ.ಐ.ಟಿ.ಯು. ಹೇಳಿಕೆ ತಿಳಿಸಿದೆ.

ಧರಣಿಯಲ್ಲಿ ಭಾಗವಹಿಸುವವರೆಲ್ಲ ಹಾಸಿಗೆ-ಹೊದಿಕೆಗಳನ್ನು ತರಬೇಕು. ಬೆಂಗಳೂರು ನಗರದ ಕಾರ್ಮಿಕರು ಪ್ರತಿದಿನ ಬೇರೆ ಬೇರೆ ಭಾಗಗಳಲ್ಲಿ ಮುಷ್ಕರ

ಪುಟ 8ಕ್ಕೆ



ನವಂಬರ್ 3ರಂದು ರಾಜ್ಯದ ಅಭಿವೃದ್ಧಿ ಯೋಜನೆಗಳನ್ನು ಕೂಡಲೇ ಜಾರಿಗೊಳಿಸಬೇಕೆಂದು ಒತ್ತಾಯಿಸಿ ಡಿ.ವೈ.ಎಫ್.ಐ. ನೇತೃತ್ವದಲ್ಲಿ [illegible] ಜನರು ಬೆಂಗಳೂರಿನಲ್ಲಿ "ರೈಲು ತಡೆ" ಕಾರ್ಯಕ್ರಮ ನಡೆಸಿದರು. ಘೋಷಣೆಗಳನ್ನು ಕೂಗುತ್ತಿರುವ ಯುವಜನರು.

ಸುಳ್ಳು- ಮಹಾಸುಳ್ಳುಗಳಲ್ಲಿ ಸ್ಪರ್ಧೆಗಿಳಿದ ಕಾಂಗ್ರೆ, ಬಿಜೆಪಿ ಚುನಾವಣಾ ಪ್ರಣಾಳಿಕೆಗಳು

ದಿಲ್ಲಿಯೂ ಕೇಳಿದಂತೆ ಆಯ ರಾಜ್ಯಗಳ ವಿಧಾನಸಭೆಗಳಿಗೆ ಕಾಂಗ್ರೆಸ್ (ಐ) ಹಾಗೂ ಬಿಜೆಪಿಯ ಚುನಾವಣಾ ಘೋಷಣೆಗಳು ಹಾಗೂ ಧೋರಣೆ ಕುರಿತಾದ ಹೇಳಿಕೆಗಳು ಹೊಂದಿದ್ದವೆ. ಇವುಗಳಲ್ಲಿ ಹೊಸತೇನೂ ಇಲ್ಲ. ಅದೇ ಹಳೆಯ ಕಥನ. ಈ ಎರಡು ಪಕ್ಷಗಳೇ ಪ್ರಸ್ತುತ ಚುನಾವಣಾ ಪ್ರಚಾರಗಳಲ್ಲಿ ಪರಸ್ಪರ ದೂಷಿಸಿಕೊಳ್ಳುವುದೇ ಅಧಿಕಾರದ ಕುರ್ಚಿಯ ಹೊಸ ಹಿನ್ನೆಲೆ 'ಕಳಗ' ಏನಿದೆ? ಇವರ ನಡುವಿನ ಸ್ಪರ್ಧೆ ಇಷ್ಟೆ. ಮುಳ್ಳು ಅಂತ 'ಕುರ್ಚಿ' ಹೇಗೆ ಗಿಟ್ಟಿಸುವುದು ಎಂದು. ಅದಕ್ಕಾಗಿ ಎಲ್ಲಾ ರೀತಿಯ ತಂತ್ರಗಳ, ವಂಚನೆಗಳ ಪ್ರಯೋಗ.

* * * * * *

ಬಿಜೆಪಿಯ ಹೇಳಿಕೆಯನ್ನಂತೂ ಬಹು ಮಟ್ಟಿಗೆ ರಾಮಮಂದಿರವೇ ಆವರಿಸಿದೆ. ಅದು ... ಏಕೆಂದರೆ ಅದರ ಶಿರೋನಾಮವೇ "ರಾಮರಾಜ್ಯವತ್ತ" ಎಂದು, ತುಳಸಿದಾಸರ 'ರಾಮಚರಿತ ಮಾನಸ'ದ ಪಂಕ್ತಿಯಿಂದ ಆರಂಭವಾಗುತ್ತದೆ ಅದು. ಆದರೆ ಅವಕಾಶ ದೊರೆತಾಗ ಈ 'ರಾಮರಾಜ್ಯ'ವನ್ನು ಹೇಗೆ ಸಾಕಾರಗೊಳಿಸಲು ಯತ್ನಿಸಿದರು ಎಂಬ ಬಗ್ಗೆ ಉತ್ತರ ಪ್ರದೇಶದ ಉದಾಹರಣೆ ಈಗಾಗಲೇ 'ಏಕ್ಯರಂಗ'ದಲ್ಲಿ ... ಇಲ್ಲಿ ರಾಜಸ್ಥಾನದ ಕೆಲವು ಉದಾಹರಣೆಗಳನ್ನು ನೋಡಿ.

'ಹವಾಲ್ ಕೇಸ್ ರಾಜಕೀಯ'ದ ಬಿಜೆಪಿ ಮುಖಂಡರಿಗೆ ಹೆಸರಾದ ರಾಜ್ಯ ರಾಜಸ್ಥಾನ. ಇಲ್ಲಿಯ 'ರಾಮರಾಜ್ಯ' ಶುರುವಾದದ್ದೇ ಇದರಿಂದ. ಜನತಾದಳದ 26 ಎಂ.ಎಲ್.ಎಗಳ ಪಕ್ಷಾಂತರಕ್ಕೆ ಪ್ರಚೋದಿಸಿ, ಅವರಲ್ಲಿ 17 ಮಂದಿಗೆ ಮಂತ್ರಿಪದವಿಯನ್ನು ನೀಡಿ ಅಧಿಕಾರದ ಕುರ್ಚಿ ಹಿಡಿದ ಬಿಜೆಪಿ ಇನ್ನೇನು ತಾನೇ ಸಾಧಿಸೀತು?

"ಓಂಮತ್ವ ನೈತಿಕತೆ"ಯ ನಿಜರೂಪ ಬಿಜೆಪಿಯ ಬೇರೆ ರಾಜ್ಯಗಳಂತೆ ಇಲ್ಲೂ ಎದ್ದು ಕಾಣುತ್ತಿತ್ತು. ಬಿಜೆಪಿಯ ಮಂತ್ರಿಮಂಡಳದಲ್ಲಿದ್ದ ಮಂತ್ರಿಗಳ ಪ್ರತಾಪಗಳನ್ನು ನೋಡಿ.

- ಜಗತ್‌ಸಿಂಗ್ ದಯ್ಯಾ- ಸಣ್ಣ ಉಳಿತಾಯಗಳ ರಾಜ್ಯ ಮಂತ್ರಿ ಅಲ್ವಾರ್‌ನ ಕೋತ್‌ವಾಲಿ ಪೋಲೀಸ್ ಸ್ಟೇಶನ್ನಿನಲ್ಲಿ ಅಪಹರಣ ಮತ್ತು ಬೆದರಿಕೆಯ ಹಲವು ಕೇಸುಗಳು ದಾಖಲಾಗಿರುವ ವ್ಯಕ್ತಿ - ಮಂತ್ರಿಯಾದ ಮೇಲೂ ರಾಜಸ್ಥಾನದ ರಾಜಧಾನಿ ಜಯಪುರದಲ್ಲೇ ಮತ್ತೊಂದು ಕೇಸು ದಾಖಲಾದ ವ್ಯಕ್ತಿ.
- ದೇವೀಸಿಂಗ್ ಭಟಿ - ತನ್ನ ಸ್ವಂತ ಜಿಲ್ಲೆ ಬಿಕಾನೇರ್‌ನಲ್ಲಿ ಕ್ರಿಮಿನಲ್ ಪ್ರೊಸೀಜರ್ ಕೋಡ್ ಹಾಗೂ ಭಾರತೀಯ ದಂಡ ಸಂಹಿತೆಯ ವಿವಿಧ ಕಲಮುಗಳಡಿ ಕೇಸುಗಳನ್ನು ಹೊಂದಿರುವ ವ್ಯಕ್ತಿ- ಪಶುಸಂಗೋಪನೆ ಮಂತ್ರಿ.
- ಚುನಿಲಾಲ್ ಗರಾಸಿಯಾ- ಮಂತ್ರಿಯಾದ ಮೇಲೆ ಹುಡುಗಿಯನ್ನು ಚುಡಾಯಿಸಿದ ಆಪಾದನೆ ಹೊತ್ತು ಉದಯಪುರ ಕೋರ್ಟಿನಿಂದ ಆರೆಸ್ಟ್ ವಾರೆಂಟ್ ತಪ್ಪಿಸಲು ನಿರೀಕ್ಷಣಾ ಜಾಮೀನು ಪಡೆದಿರುವ ವ್ಯಕ್ತಿ. ಇಂತಹ ಆಪಾದನೆಯ ಕಾರಣ ಮಂತ್ರಿ ಪದವಿ ಬಿಟ್ಟು ಮುರಳೀ ಮನೋಹರ ಜೋಷಿಯವರ 'ಏಕತಾ ಯಾತ್ರೆ'ಯನ್ನು 'ಪವಿತ್ರ'ಗೊಳಿಸಿದಾತ.
- ಮೋಹನ್ ಮೇಘವಾಲ್- ಗ್ರಾಮೋದ್ಯೋಗ ರಾಜ್ಯ ಮಂತ್ರಿ. ಮಂತ್ರಿಯಾಗಿದ್ದಾಗಲೇ ಅರೆಸ್ಟ್ ವಾರೆಂಟ್ 'ಗಿಟ್ಟಿಸಿದ' ವ್ಯಕ್ತಿ.
- ಪುಷ್ಪಾ ಜೈನ್- ಪ್ರವಾಸಿ ಮಂತ್ರಿಣಿ - ಜಯಪುರದ ಒಂದು ಸಾರ್ವಜನಿಕ ಧರ್ಮಸಂಸ್ಥೆಯ ಆಸ್ತಿಗಳನ್ನು ನುಂಗಿಹಾಕಿರುವ ಆಪಾದನೆ ಹೊತ್ತಿರುವಾಕೆ.
- ಕಾಲುಲಾಲ್ ಗುರ್ಜರ್- ಗಣಿ ಮಂತ್ರಿ- ತನ್ನ ನಿಕಟ ಸಂಬಂಧಿಗಳಿಗೆ, ವ್ಯಾಪಾರದ ಪಾಲುದಾರರಿಗೆ ಗಣಿಗಳ ಕಾಂಟ್ರಾಕ್ಟನ್ನು ಕಾನೂನುಬಾಹಿರವಾಗಿ ಲೀಸ್ ಕೊಟ್ಟುದಕ್ಕೆ ಹೈಕೋರ್ಟಿನ ಮುಂದೆ ವೈಯುಕ್ತಿಕವಾಗಿ ಹಾಜರಾಗಬೇಕೆಂದು ಆದೇಶ ಪಡೆದ 'ಸಾಧನೆ'ಯ ವ್ಯಕ್ತಿ

ಈ ಪಟ್ಟಿ ಹೀಗೆ ಮುಂದುವರಿಯುತ್ತದೆ.

* * * * * *

ಆದ್ದರಿಂದಲೇ ಬಿಜೆಪಿ ಪ್ರಣಾಳಿಕೆ ತನ್ನ ಸರಕಾರಗಳ ಸಾಧನೆ ಬಗ್ಗೆ ಹೆಚ್ಚೇನೂ ಹೇಳದೆ.- ಜನಗಳ ನಿರೀಕ್ಷೆಗೆ ಹೋಲಿಸಿದರೆ ಇವೆಲ್ಲ ಅಲ್ಪ ಸಾಧನೆಗಳು ಎಂಬುದನ್ನು ಬಿಜೆಪಿ ಒಪ್ಪಿಕೊಳ್ಳುತ್ತದೆ ಎಂದಿದೆ. ಇದು ವಿನಯಶೀಲತೆಯ ಪ್ರದರ್ಶನವಲ್ಲ. ದೇಶದ ಸಂವಿಧಾನ, ಸುಪ್ರೀಂ ಕೋರ್ಟ್‌ಗಳನ್ನು ಧಿಕ್ಕರಿಸಿದ ಧಿಮಾಕಿನ ಪಕ್ಷದಲ್ಲಿ ವಿನಯಶೀಲತೆಯೇ? ಇದು ಕಟುವಾಸ್ತವತೆಯನ್ನು ಮರೆಮಾಚಲಾಗದ ಸ್ಥಿತಿ ಅಷ್ಟೆ.

* * * * * *

ಈ ಬಾರಿ ಬಿಜೆಪಿ ಪರವಾಗಿ ಯಾವ 'ಅಲೆ'ಯೂ ಇಲ್ಲ ಎಂದು ನವಂಬರ್ 2 ರಂದು ಜೋಧಪುರದಲ್ಲಿ ಹೇಳಿದ ಅಡ್ವಾಣಿಯವರಿಗೆ ಎರಡು ದಿನಗಳ ನಂತರ ದಿಲ್ಲಿಗೆ ಹೋದಾಗ 1990 ರ ವಿಧಾನಸಭಾ ಚುನಾವಣೆಗಳ, 1991ರ ಲೋಕಸಭಾ ಚುನಾವಣೆಗಳ ಕಾಲದಲ್ಲಿ ಇದ್ದುದಕ್ಕಿಂದ ಬಲವಾದ 'ಅಲೆ'

ಉತ್ತರ ಭಾರತದ ವಿಧಾನಸಭಾ ಚುನಾವಣೆಗಳು

ಕಂಡಿದೆ. ರಾಜಸ್ಥಾನ, ಹಿಮಾಚಲ ಪ್ರದೇಶ, ಮಧ್ಯಪ್ರದೇಶ ಮತ್ತು ಉತ್ತರ ಪ್ರದೇಶಗಳಲ್ಲೂ ತಮ್ಮ ಕಾರ್ಯಕರ್ತರಲ್ಲಿ ಮೂಡಿರುವ ಭಯ ನಿವಾರಿಸಲು ಬೇರೇನು ಹೇಳಿಯಾರು? ರಾಜಸ್ಥಾನದಲ್ಲಿ ಕಾಂಗ್ರೆ ಶೈಲಿಯಲ್ಲಿ "ಬಂಡಾಯ ಅಭ್ಯರ್ಥಿಗಳ ಉಚ್ಚಾಟನೆ, ಮಧ್ಯಪ್ರದೇಶ, ಉತ್ತರ ಪ್ರದೇಶಗಳಲ್ಲೂ ಇಂತಹ ಕ್ರಮಗಳ ಪುನರಾವರ್ತನೆ ಕಂಡ ಮೇಲೆ ಕಾಣಬಂದಿರುವ 'ಅಲೆ' ಇದು."

* * * * * *

"ಅಯೋಧ್ಯೆಗೆ ಚೋಟಾ ಜಾತ್ಯಾತೀತವಾದಿಗಳು ಬೆನ್ನು ತೋರಿದ್ದರಿಂದಲೇ ಸ್ವಾತಂತ್ರ್ಯ ನಂತರ ಭಾರತ ಮಿಂಚಿನ ವೇಗದಲ್ಲಿ ಮುಂದೆ ಸಾಗುತ್ತಿರುವ ಜಗತ್ತಿನಲ್ಲಿ ಹಿಂದುಳಿಕೆಯ ದೀಪದಂತಾಗಿದೆ" ಎಂದು ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ ಗಹನ "ವಿಶ್ಲೇಷಣೆ" ಮಾಡಿರುವ ಬಿಜೆಪಿ ಮಧ್ಯಪ್ರದೇಶ, ರಾಜಸ್ಥಾನದಂತ ಅತ್ಯಂತ ಹಿಂದುಳಿದ ರಾಜ್ಯಗಳಲ್ಲೇ ಮೊದಲು ತನ್ನ ಪ್ರಭಾವ ವಿಸ್ತರಿಸಿಕೊಂಡು ಅಧಿಕಾರಕ್ಕೆ ಬಂದು ಹಿಂದುಳಿಕೆಯನ್ನು ಜಾಗರೂಕತೆಯಿಂದ ಕಾಪಾಡಿಕೊಡಿರುವುದು, ಅದಕ್ಕಾಗಿ ಈಗ ಮತದಾರರ ಎದುರು ಮುಜುಗರ ಪಡುತ್ತಿರುವುದು ತಮಾಷೆಯೆನಿಸುವುದಿಲ್ಲವೆ?

* * * * * *

ಬಿಜೆಪಿಯ ಪ್ರಣಾಳಿಕೆಯ ಗೋಸುಂಬೆ ಹೆತನಕ್ಕೆ ಸರಿಸಾಟಿಯಾಗಿ ನಿಲ್ಲುವ ಪ್ರಣಾಳಿಕೆ ಕಾಂಗ್ರೆನದು- 1991 ರ ರಕ್ತಹೀನತೆಯಿಂದ ನರಳುತ್ತಿದ್ದ ಪ್ರಣಾಳಿಕೆಯ ಪುನರಾವರ್ತನೆ ಇದು. ಅಯೋಧ್ಯೆಯ ಬಗ್ಗೆಯಂತೂ ಬಿಜೆಪಿಯೊಡನೆ ಸ್ಪರ್ಧಿಸುವ ತವಕ ಎದ್ದುಕಾಣುತ್ತದೆ. ಮಸೀದಿ ನಾಶವನ್ನು ತಡೆಯಲು ಕೈಲಾಗದ ಪಕ್ಷ ಸುಪ್ರೀಂ ಕೋರ್ಟಿನ ಅಭಿಪ್ರಾಯ ಪಡೆದ ನಂತರ ದೇವಸ್ಥಾನ ಮತ್ತು ಮಸೀದಿ ಎರಡನ್ನು ಕಟ್ಟಲಾಗುತ್ತದೆ ಎಂದಿದೆ. ಎಲ್ಲಿ ಎಂದು ಮಾತ್ರ ಉದ್ದೇಶಪೂರ್ವಕವಾಗಿಯೇ ಹೇಳಿಲ್ಲ. ಹಿಂದೆಂದೂ ತನ್ನ ಪ್ರಣಾಳಿಕೆಯಲ್ಲಿ ಜಾತ್ಯಾತೀತೆಗೆ ಸಂಬಂಧಪಟ್ಟಂತೆ ಇಂತಹ ದುರ್ಬಲ ಹಾಗೂ ಮೋಸದ ಸಮರ್ಥನೆಯನ್ನು ಆ ಪಕ್ಷ ಮಾಡಿಕೊಳ್ಳದೇ ಕಾವ ಪ್ರಮೇಯ ಬಂದಿರಲಿಲ್ಲ.

* * * * * *

"ಕಾಂಗ್ರೆಸ್(ಐ)ನ ಆರ್ಥಿಕ ನೀತಿಗಳ ಅಡಿಗಲ್ಲು ವಾಸ್ತವವಾಗಿ ದೇಶದ ಸ್ವಾವಲಂಬನೆಯೇ" ಎಂಬ ಕಾಂಗ್ರೆನ ಪ್ರಣಾಳಿಕೆಯ ಮಹಾಸುಳ್ಳಿಗೆ ಸರಿಸಾಟಿಯಾಗಿ ನಿಲ್ಲುವಂತದ್ದು "ನಾಲ್ಕು ರಾಜ್ಯಗಳಲ್ಲಿ ನಮ್ಮ ಸರಕಾರಗಳಿಂದಾಗಿ ದಂಗೆ- ಮುಕ್ತ ಸನ್ನಿವೇಶ ಏರ್ಪಟಿತ್ತು." ಎಂಬ ಬಿಜೆಪಿ ಪ್ರಣಾಳಿಕೆಯ ಇನ್ನೊಂದು ಮಹಾ ಸುಳ್ಳು ಮಾತ್ರವೇ.

ಇಡೀ ದೇಶವನ್ನೇ ಅಲುಗಾಡಿಸಿದ ಭ್ರಷ್ಟಾಚಾರದ ಹಗರಣಗಳ ಬಗ್ಗೆ ಕಾಂಗ್ರೆ ಪ್ರಣಾಳಿಕೆಯಲ್ಲಿ ಚಕಾರವೂ ಇಲ್ಲ. ಏನೂ ನಡೆದಿಲ್ಲ ಎಂದು ಜನನಂಬ ಬೇಕೆಂದು ಅದು ಆಶಿಸುವಂತಿದೆ.

* * * * * *

"ಕಾಂಗ್ರೆಸ್ಸೇತರ ಸರಕಾರಗಳು ಮತ್ತೆ- ಮತ್ತೆ ಜನಗಳನ್ನು ವಂಚಿಸಿವೆ, ಆದ್ದರಿಂದ ಜನ ಮತ್ತೆ ಕಾಂಗ್ರೆಸ್ಸಿನತ್ತ ನೋಡುತ್ತಿದಾರೆ" ಎಂದು ಪ್ರಧಾನಮಂತ್ರಿಗಳು ಹಿಮಾಚಲ ಪ್ರದೇಶದ ಒಂದು ಸಭೆಯಲ್ಲಿ ಹೇಳಿದಾಗ ಜನಗಳು ಚಪ್ಪಾಳೆ ತಟ್ಟಬಹುದೆಂದು ನಿರೀಕ್ಷಿಸಿದರಂತೆ ಜನ ಮಾತ್ರ ಸುಮ್ಮನಿದ್ದರು. "ಡಂಕೆಲ್ ಪ್ರಸ್ತಾಪಗಳು ಭಾರತದ ರೈತರ ಪರವಾಗಿಯೇ ಇವೆ. ನೋಡಿ ಗ್ಯಾಟ್ ಮುಖ್ಯಸ್ಥರೇ ಅದನ್ನು ಹೇಳಿದ್ದಾರೆ" ಎಂಬ ಹಾಸ್ಯಾಸ್ಪದ ಮಾತುಗಳೂ ಪ್ರಧಾನಿಗಳ ಬಾಯಿಂದ ಹೊರಬಂತು.

* * * * * *

ಪ್ರಧಾನಿಗಳ ಈ ಸಭೆಯನ್ನು ಯಶಸ್ವಿಗೊಳಿಸಲು ಹಗಲಿರುಳು ದುಡಿದ ಕಾಂಗ್ರೆಸ್ಸಿಗರು ಈ ಸಭೆಯಲ್ಲಿ ಗೈರುಹಾಜರಾಗಿದ್ದರು ಎಂಬುದು ಕಾಂಗ್ರೆ "ಸಂಸ್ಕೃತಿಗೆ" ಅನುಗುಣವಾಗಿಯೇ ಇತ್ತು. ಅದರಲ್ಲೂ ಈಗ ಕಾಂಗ್ರೆ ಬಿಜೆಪಿಯಿಂದ ತೀವ್ರ ಸ್ಪರ್ಧೆ ಎದುರಿಸುತ್ತಿದೆ.

* * * * * *


ಒಟ್ಟಿನಲ್ಲಿ ಕಾಂಗ್ರೆ ಮತ್ತು ಬಿಜೆಪಿಯ ಚುನಾವಣಾ ಪ್ರಣಾಳಿಕೆಗಳು ಮತ್ತು ಚುನಾವಣಾ ಪ್ರಚಾರ ಇವೆರಡೂ ಜನಗಳ ಸಮಸ್ಯೆಗಳಿಗೆ ಏನೇನೂ ಉತ್ತರಗಳಿಲ್ಲದ, ದೇಶದ ಭವಿಷ್ಯದ ಪ್ರಗತಿಯ ಬಗ್ಗೆ ಯೋಜನೆಯೇ ಇಲ್ಲದ ಬಂಡವಾಳಶಾಹೀ, ಭೂಮಾಲಕರ ಪಕ್ಷಗಳು ಎಂಬುದನ್ನು ಮತ್ತೊಮ್ಮೆ ತೋರಿಸಿಕೊಡುತ್ತಿವೆ.

ಇತಿಹಾಸದ ಪುಟಗಳಿಂದ

ಚೀಣೀ ಕ್ರಾಂತಿಯ ಮತ್ತೊಬ್ಬ ಮುಂಚೂಣಿ ನೇತಾರ

ಚೌ-ಎನ್-ಲಾಯ್

ವಿಶ್ವ ಕಮ್ಯೂನಿಸ್ಟ್ ಮುಖಂಡರೊಡನೆ



ಕಾಂ. ಇ.ಎಂ.ಎಸ್.

6

ಸರ್ಕಾರದ ಕೆಲಸ ಕಾರ್ಯಗಳ ಬಗ್ಗೆ ಚೀಣೀ ಕಮ್ಯುನಿಸ್ಟ್ ಪಕ್ಷದ ಕಾಂಗ್ರೆಸ್‌ನಲ್ಲಿ ಚೌ-ಎನ್-ಲಾಯ್ ಮಂಡಿಸಿದ ವರದಿಯ ಕುರಿತು ಈ ಹಿಂದೆ ನಾನು ತಿಳಿಸಿದ್ದೇನೆ. ಆ ವಿಷಯಗಳ ಬಗ್ಗೆ ಈಗ ನಾನು ಹೇಳುವುದಿಲ್ಲ. ಆದರೆ ಅಂದು ನನ್ನನ್ನು ಚಿಂತಿಸುವಂತೆ ಮಾಡಿದ ವಿಷಯದ ಕುರಿತು ಹೇಳುವುದು ಒಳ್ಳೆಯದೆಂದು ನನ್ನ ಅಭಿಪ್ರಾಯ.

ಸೋವಿಯತ್ ಯೂನಿಯನ್, ಪೂರ್ವ ಯೂರೋಪ್‌ದೇಶಗಳು, ಚೀನಾ ಇವೆಲ್ಲವೂ ಸಮಾಜವಾದಿ ರಾಷ್ಟ್ರಗಳಾಗಿದ್ದುದರಿಂದ ಅವುಗಳೆಲ್ಲವುಗಳ ಬೆಳವಣಿಗೆ ಸಮಾನವಾಗಿಯೇ ಇದೆಯೆಂದು ಅಂದಿನ ನನ್ನ ಹಾಗಿದ್ದ ಹಲವರು ಅಭಿಪ್ರಾಯವಾಗಿತ್ತು. ಇದನ್ನು ತಿದ್ದುವ ದೃಷ್ಟಿಯಲ್ಲಿ ಚೌ-ಎನ್-ಲಾಯ್‌ರವರು ಮಂಡಿಸಿದ ವರದಿಯು ಕಣ್ಣೋಟವಾಗಿತ್ತು.

ಚೈನಾ ಹಿಂದುಳಿದ ರಾಷ್ಟ್ರವಾಗಿತ್ತು. ಇದನ್ನು ಮುಂದುವರಿದ ರಾಷ್ಟ್ರಗಳ ಜೊತೆಗೆ ಕೊಂಡೊಯ್ಯಲು ಹಲವಾರು ವರ್ಷಗಳೇ ಬೇಕಾಗುತ್ತದೆಂಬುದು ವರದಿಯ ಸಾರಾಂಶವಾಗಿತ್ತು.

ಇದಕ್ಕೆ ವಿರುದ್ಧವಾದ ಕಣ್ಣೋಟವನ್ನು ಹೊಂದಿದ್ದ ಮಾವೋರವರ ವರದಿಯು ಚೀನಾ "ವೇಗ ನೆಗೆತ"ದ ಪಾಲಿಸಿಯ ಆಧಾರದಲ್ಲಿ ಮುಂದುವರಿಯಬೇಕಾಗುತ್ತದೆಂಬ ಕಣ್ಣೋಟದಲ್ಲಿತ್ತು.

ಮೊದಲು ಸಮಾಜವಾದಿ ಸಾಮೂಹಿಕ ಸಮಾಜದ ನಿರ್ಮಾಣ ನಂತರ ಸಮತಾವಾದದ ಕಡೆಗೆ ಪರಿ



ವರ್ತನೆ ಎಂಬುದು ಮಾವೋರವರ ಸಿದ್ಧಾಂತವಾಗಿತ್ತು. ಇದಕ್ಕೆ ಅಡ್ಡ ನಿಲ್ಲುವ ಸಂಗಾತಿಗಳನ್ನು "ಬಂಡವಾಳಿಗರ ದಾರಿ" ಯವರೆಂದು ಕೂಗಿ ಕರೆದು ಅವಹೇಳನ ಮಾಡುತ್ತಿದ್ದರು. ಈ ಕಣ್ಣೋಟದಲ್ಲೇ ನಂತರ ಅವರು "ಸಾಂಸ್ಕೃತಿಕ ಕ್ರಾಂತಿ"ಯನ್ನು ನಡೆಸಿದರು. ಲಿಯೋ ಷಾವುಕಿ ಯಂತಹವರನ್ನು ಜೈಲಿಗೆ ಹಾಕಿದರು. ಮುಂದೆ ಷಾವುಕಿ ಜೈಲಿನಲ್ಲೇ ಸತ್ತು ಹೋದರು.

ಚೈನಾದ ಕಮ್ಯುನಿಸ್ಟ್ ಪಕ್ಷದ ಚರಿತ್ರೆಯಲ್ಲೇ ಅತ್ಯಂತ ಕಠಿಣವಾದ ಅವಧಿಯೆಂದರೆ ಈ "ಈ ಸಾಂಸ್ಕೃತಿಕ ಕ್ರಾಂತಿ"ಯ ಕಾಲವೆಂದು ಮುಂದೆ ಕಮ್ಯುನಿಸ್ಟ್ ಪಕ್ಷದ ನಾಯಕತ್ವವು ಅಂದಾಜು ಮಾಡಿದೆ. ಚೀನವು ಸಮಾಜವಾದಿ ಸಮೂಹ ನಿರ್ಮಾಣದ ಪ್ರಾಥಮಿಕ ಕಾಲಘಟ್ಟಕ್ಕೆ ಮಾತ್ರ ಮುಂದುವರಿಯಲಾಗಿದೆ ಎಂದು ಪಕ್ಷವು ತಿಳಿದುಕೊಂಡಿದೆ. ಸಮಾಜವಾದಿ ಸಮೂಹ ನಿರ್ಮಾಣ ಕಾಲಘಟ್ಟದಲ್ಲಿ ಚೀಣಾದ ಆರ್ಥಿಕ ಸ್ಥಿತಿ ಸುಧಾರಿಸಬೇಕಾದರೆ, ಜನರ ಜೀವನ ಮಟ್ಟ ಉತ್ತಮಗೊಳ್ಳಬೇಕಾದರೆ, ಮುಂದುವರಿದ ಬಂಡವಾಳಿಗ ದೇಶಗಳ ಜೊತೆ ನಿಲ್ಲುವಂತಾಗಬೇಕಾದರೆ 21 ನೇ ಶತಮಾನದ ಪ್ರಥಮಾರ್ಧ ಕೊನೆಗೊಳ್ಳಬೇಕೆಂದು ಪಕ್ಷವು ಅಭಿಪ್ರಾಯ ಪಟ್ಟಿತು. ಈ ಸ್ವವಿಮರ್ಶೆ ನಡೆಯುವುದಕ್ಕೆ ಮುಂಚೆಯೇ ಚೌ ಅವರು ನಿಧನ ಹೊಂದಿದ್ದರು. ಆದರೆ ಇಂತಹ ಸ್ವ ವಿಮರ್ಶೆಯ ಮೂಲಾಂಶಗಳೇ ಚೌ ಅವರು 8ನೇ ಪಕ್ಷದ ಕಾಂಗ್ರೆಸ್‌ನಲ್ಲಿ ಮಂಡಿಸದ ವರದಿಯಾಗಿತ್ತು.

ಲಿಯು-ಷಾವೊಕಿ, ಡೆಂಗ್-ಝಿಯೋ-ಪಿಂಗ್‌ರವರನ್ನು ಕರೆದ ರೀತಿಯಲ್ಲಿ ಅಂದಿನ ಪಕ್ಷವು ಚೌ ಅವರನ್ನು ನೇರವಾಗಿ "ಬಂಡವಾಳಿಗರ ದಾರಿ"ಯವರೆಂದು ಕರೆಯಲಿಲ್ಲ, ಯಾವ ಶಿಕ್ಷೆಯನ್ನೂ ಕೊಡಲಿಲ್ಲ. 1949 ರ ಕ್ರಾಂತಿಯಾದಾಗಿನಿಂದ ಹಿಡಿದು ತಾವು ಸಾಯುವವರೆಗೂ ಚೌ ಅವರೇ ಪ್ರಧಾನ ಮಂತ್ರಿಯಾಗಿದ್ದರು. ಆದರೆ ನೇರವಾಗಿ ಇವರ ವಿರುದ್ಧ ಟೀಕೆಗಳಿಲ್ಲದಿದ್ದರೂ ಪರೋಕ್ಷವಾಗಿ ಪಕ್ಷದ ಪತ್ರಿಕೆಗಳಲ್ಲಿ ಟೀಕೆಗಳನ್ನು ಹೊತ್ತ ಲೇಖನಗಳು ಪ್ರಕಟಗೊಂಡಿದ್ದವು.

ಆದರೆ ಚೈನಾದಲ್ಲಿ ಸಮಾಜವಾದಿ ಸಮೂಹ ನಿರ್ಮಾಣ ಹಂತ ಹಂತವಾಗೇ ನಡೆಯುತ್ತದೆಂಬ ತಮ್ಮ ವಾದದಲ್ಲೇ ಇವರು ಗಟ್ಟಿಯಾಗಿ ನಿಂತಿದ್ದರು. ಈ ಕಣ್ಣೋಟವೇ 8ನೇ ಕಾಂಗ್ರೆಸ್‌ನಲ್ಲಿ ಇವರು ಮಂಡಿಸಿದ ವರದಿಯ ಸೈದ್ಧಾಂತಿಕ ತಳಹದಿ. ಕಾಂಗ್ರೆಸ್ ನಡೆಯುವುದಕ್ಕೆ ಮುಂಚೆ ಅರ್ಧಗಂಟೆ ಕಾಲ ಮಾತ್ರ ಚೌ ಜೊತೆ ಮಾತನಾಡುವ ಸಂದರ್ಭ ನನಗೆ ಸಿಕ್ಕಿತು. ನಾನು ಬೀಜಿಂಗ್‌ಗೆ ಹೋಗುವುದಕ್ಕೆ ಮುಂಚೆ ನಮ್ಮ ಸಂದೇಶವನ್ನು ತಲುಪಿಸಲು ಪಕ್ಷದ ಕಾರ್ಯದರ್ಶಿ ಕಾಂ. ಅಜಯಘೋಷ್‌ರವರು ನನಗೆ ನಿರ್ದೇಶನ ಕೊಟ್ಟಿದ್ದರು. ಅದನ್ನನುಸರಿಸಿ ನಾನು ಚೌ ಅವರನ್ನು ಕಂಡು ಮಾತನಾಡಿದೆ.

ಚೀಣೀ ಪಕ್ಷದ ಕಾಂಗ್ರೆಸ್ ಮುಗಿದ ಕೆಲವೇ ತಿಂಗಳು ಕಳೆದ ನಂತರ ಪ್ರಧಾನ ಮಂತ್ರಿಯಾದ ಚೌರವರು ಸ್ವತಂತ್ರ ಭಾರತಕ್ಕೆ ಭೇಟಿ ಕೊಡುವವರಿದ್ದರು. ಅದು ಭಾರತದಲ್ಲಿ ಎರಡನೇ ಸಾರ್ವತ್ರಿಕ ಚುನಾವಣೆಗಳು ನಡೆಯುವ ಸಂದರ್ಭವಾಗಿತ್ತು. ಆಗ ತಮ್ಮ ಭಾರತದ ಭೇಟಿಯನ್ನು ಸಾರ್ವಜನಿಕ ಚುನಾವಣೆ ಮುಗಿಯುವವರೆಗೆ ಮುಂದೂಡಬೇಕೆಂಬ ಅಜಯ್ ಘೋಷ್‌ರವರ ಅಪೇಕ್ಷೆಯನ್ನು ನಾನು ಚೌರವರಿಗೆ ತಲುಪಿಸಿದೆ.

ಈ ಅಪೇಕ್ಷೆಗೆ ಒಂದು ರಾಜಕೀಯ ಹಿನ್ನೆಲೆಯಿತ್ತು. 1955 ರಲ್ಲಿ ಆಂಧ್ರದಲ್ಲಿ ನಡೆದ ಚುನಾವಣೆಗೆ ಸ್ವಲ್ಪ ಹಿಂದೆಯಷ್ಟೇ ಸೋವಿಯತ್ ಮುಖಂಡರಾದ ಕ್ರುಶ್ಚೇವ್ ಮತ್ತು ಬುಲ್ಗಾನಿನ್‌ರವರು ಭಾರತಕ್ಕೆ ಭೇಟಿ ನೀಡಿದ್ದರು. ಆ ಸಂದರ್ಭದಲ್ಲಿ ನೆಹರೂ ಸರ್ಕಾರದ ವಿದೇಶಾಂಗ ನೀತಿ, ಆರ್ಥಿಕ ನೀತಿ ಹಾಗೂ ಕೈಗಾರಿಕಾ ನೀತಿಗಳನ್ನು ಕೊಂಡಾಡಿ ಇವರು ಮಾತನಾಡಿದ್ದರು. ಇವರ ಭಾಷಣಗಳನ್ನೇ ಕಾಂಗ್ರೆಸ್‌ನವರು ಆಂಧ್ರದ ಚುನಾವಣಾ ಪ್ರಚಾರಕ್ಕೆ ವ್ಯಾಪಕವಾಗಿ ಬಳಸಿದರು. ಅದಕ್ಕೆ ಕಾಂಗ್ರೆಸ್‌ನವರಿಗೆ ಫಲವೂ ಸಿಕ್ಕಿತು.

ಓಟಿನ ಸಂಖ್ಯೆಯಲ್ಲಿ ಪರವಾಗಿಲ್ಲವೆಂದರೂ ಸೀಟಿನ ಸಂಖ್ಯೆಯಲ್ಲಿ ಆಂಧ್ರದ ನಮ್ಮ ಪಕ್ಷವು ದಯನೀಯವಾದ ಸೋಲನ್ನನುಭವಿಸಿತು. ಈ ಸೋಲಿಗೆ ಸೋವಿಯತ್ ಮುಖಂಡರ ಭೇಟಿಯ ಭಾಷಣಗಳೇ ಪ್ರಧಾನ ಕಾರಣವೆಂದು ಪಕ್ಷವು ಅಂದಾಜು ಮಾಡಿತು.

ಇಂತಹುದೇ ಪರಿಸ್ಥಿತಿ ಚೌ-ಎನ್-ಲಾಯ್‌ರವರ ಭೇಟಿಯ ನಂತರ ಉಂಟಾಗಬಹುದೆಂಬ ಅನುಮಾನ ತುಂಬಿದ ಭಯ ನಮಗೆ ಕಾಡುತ್ತಿತ್ತು. ಆಂಧ್ರದ ಚುನಾವಣೆಗೆ ಮುಂಚೆ ಸೋವಿಯತ್ ಮುಖಂಡರ ಭೇಟಿಯಾಗಿದ್ದರೆ, ಎರಡನೇ ಸಾರ್ವತ್ರಿಕ ಚುನಾವಣೆಗೆ ಮುಂಚೆ ಚೌರವರ ಭೇಟಿಯಾಗುತ್ತಿತ್ತು. ಆದ್ದರಿಂದಲೇ ಪಕ್ಷವು ಚೌರವರ ಭೇಟಿಯನ್ನು ಮುಂದಕ್ಕೆ ಹಾಕಬೇಕೆಂಬ ತೀರ್ಮಾನ ಮಾಡಿ ಕಳುಹಿಸಿಕೊಟ್ಟಿತು.

ಈ ವಿಷಯಗಳನ್ನೆಲ್ಲಾ ನಾನು ಚೌರವರಿಗೆ ವಿಷದವಾಗಿ ವಿವರ ಮಾಡಿದೆನು. ಆದರೆ ನಾನು ಮಂಡಿಸಿದ ವಾದಗಳನ್ನೆಲ್ಲಾ ಅವರು ತಳ್ಳಿ ಹಾಕಿದರು. ತಮ್ಮ ಭಾರತದ ಭೇಟಿಯು ಚುನಾವಣೆಯಲ್ಲಿ ಯಾವುದೇ ರೀತಿ ಭಾದಿಸುವುದಿಲ್ಲ, ಬದಲಿಗೆ ನಮಗೆ ಸಹಾಯವಾಗುತ್ತದೆಂದು ಅವರು ಅಭಿಪ್ರಾಯ ಪಟ್ಟರು. ಹೀಗಾಗಿ ಅಂತರರಾಷ್ಟ್ರೀಯ ಕಮ್ಯುನಿಸ್ಟ್ ಮುಖಂಡರ ಜೊತೆ ನಾನು ನಡೆಸಿದ ಪ್ರಥಮ ಅಭಿಪ್ರಾಯ ವಿನಿಮಯದ ಸಂಗತಿಯು ಪರಾಜಯದಲ್ಲೇ ಪ್ರಾರಂಭವಾಗಿತ್ತು.

ಆದರೆ ಇಂದು ಹಿಂದಿರುಗಿ ನೋಡಿದರೆ ಚೌರವರ ಅಭಿಪ್ರಾಯದಲ್ಲಿ ಸತ್ಯಾಂಶವಿಲ್ಲವೆಂದು ಹೇಳಲಿಕ್ಕಾಗದು, ಚೌರವರು ಭಾರತದ ಸಂದರ್ಶನದ ನಂತರ

ಪುಟ 8ಕ್ಕೆ



ಅಸಂಘಟಿತ ಕಾರ್ಮಿಕರ ಹೋರಾಟ ಏಕೆ?

-- ವಿ.ಜೆ.ಕೆ. ನಾಯರ್

ತಮ್ಮ ಜೀವನವನ್ನು ತಾವೇ ನಿರ್ಧರಿಸಿ ಸುತ್ತಲಿನ ಜಗತ್ತನ್ನು ತಮಗೆ ಅನುಕೂಲವಾಗುವಂತೆ ರೂಪಿಸಿಕೊಳ್ಳಲು ಅನುವು ಮಾಡಿಕೊಡುವ ಜನಸಾಮಾನ್ಯರ ಹೋರಾಟದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ಹೋರಾಟ ಒಂದು ಪ್ರಮುಖ ಹೋರಾಟವಾಗಿ ಮೂಡಿಬರುತ್ತಿದೆ.

ನಮ್ಮ ರಾಜ್ಯದಲ್ಲಿ ಸಿಐಟಿಯು ಅಸಂಘಟಿತ ವಲಯದ ಕಾರ್ಮಿಕರ ವೇದಿಕೆಗಳನ್ನು ಸರಕಾರ ಒಪ್ಪಿಕೊಳ್ಳುವಂತೆ ಒತ್ತಾಯ ತರಲು ಒಂದು ದೊಡ್ಡ ಕಾರ್ಯಾಚರಣೆಗಿಳಿಯಲು ಉದ್ಯುಕ್ತವಾಗಿದೆ. ಈ ಹೋರಾಟ ಜಯಶಾಲಿಯಾಗುವವರೆಗೂ ಅದನ್ನು ನಡೆಸಲು ತಯಾರಿ ನಡೆಸುತ್ತಿದೆ.

ಈ ಹೋರಾಟಕ್ಕೆ ಸಂಬಂಧಪಟ್ಟಂತೆ ಅಗತ್ಯ ಮಾಹಿತಿಗಳನ್ನು ಒದಗಿಸುವ

ಸಿಐಟಿಯು ರಾಜ್ಯ ಕಾರ್ಯದರ್ಶಿ ಕಾಂ. ವಿ.ಜೆ.ಕೆ. ನಾಯರ್‌ರವರ ಲೇಖನ.

ಹೆಚ್ಚುತ್ತಿರುವ ಅಸಂಘಟಿತ ಕಾರ್ಮಿಕರ ಸಂಖ್ಯೆ

ಕಳೆದ ಮೂರು ಜನಗಣತಿ ವರದಿಗಳಲ್ಲಿ ದುಡಿಯುವ ಜನಸಂಖ್ಯೆಯ ವರ್ಗೀಕರಣವನ್ನು ನೋಡಿದಾಗ ಇದರಲ್ಲಿ ದೇಸಾಯಗಾರರ ಸಂಖ್ಯೆ ಕಮ್ಮಿಯಾಗುತ್ತಾ ಬಂದಿರುವುದು ಕಾಣುತ್ತದೆ. ಅದು 1971 ರಲ್ಲಿ ಶೇ.42.9 ಇದ್ದದ್ದು 1981 ರಲ್ಲಿ ಶೇ. 41.5 ಕ್ಕಿಳಿದು 1991 ರಲ್ಲಿ 38.4 ಶೇ.ಕ್ಕಿಳಿದಿದೆ. ಅಂದರೆ ದೇಶದ ಜನಸಂಖ್ಯೆಯಲ್ಲಿ ಸ್ವಂತ ಭೂಮಿಯಿದ್ದು ಸ್ವತಂತ್ರವಾಗಿ ದೇಸಾಯ ಮಾಡುವವರ ಪ್ರಮಾಣ ಇಳಿಮುಖವಾಗಿದೆ. ಅದೇ ವೇಳೆಗೆ ಕೃಷಿಕೂಲಿಕಾರರ ಪ್ರಮಾಣ 1971 ರಲ್ಲಿ ಶೇ. 26.9 ಇದ್ದದ್ದು 1981ರಲ್ಲಿ 25.1 ಇಳಿದಿದ್ದರೂ 1991ರ ವೇಳೆಗೆ ಶೇ. 26.5 ಕ್ಕೆ ಏರಿದೆ. ಅಂದರೆ ಸಮಾಜದ ಈ ಅತ್ಯಂತ ಶೋಷಿತ ವರ್ಗದ ಜನಗಳ ಸಂಖ್ಯೆ ಹೆಚ್ಚುತ್ತಿದೆ. ಆದರೆ ಒಟ್ಟು ಸಮಾಜದಲ್ಲಿ ಅವರ ಪ್ರಮಾಣ ಕಳೆದೆರಡು ದಶಕಗಳಲ್ಲಿ ಸುಮಾರಾಗಿ ಹಾಗಿಯೇ ಉಳಿದಿದೆ.

ಇನ್ನು ಗೃಹ ಉದ್ಯಮಗಳಲ್ಲಿ ತೊಡಗಿರುವವರ ಸಂಖ್ಯೆ ಸುಮಾರಾಗಿ ಸ್ಥಿರವಾಗಿದೆ. 1971,1981 ಹಾಗೂ1991 ರಲ್ಲಿ ಜನಗಣತಿ ವರದಿಗಳಲ್ಲಿ ಇದು ಅನುಕ್ರಮವಾಗಿ ಶೇ. 3.6, 3.4 ಹಾಗೂ 3.7. ಅದೇ ವೇಳೆಗೆ ಈ ವರದಿಗಳಲ್ಲಿ "ಇತರ ಕೆಲಸಗಾರರು" ಎಂಬ ಶಿರೋನಾಮೆಯಡಿ ಬರುವ ಜನರ ಪ್ರಮಾಣ ಸತತವಾಗಿ ಏರುತ್ತಿದೆ. ಅದು ಅನುಕ್ರಮವಾಗಿ ಶೇ. 26.6 , 30 ಮತ್ತು 30.4 ಆಗಿದೆ. ಇವರಲ್ಲಿ ಸಂಘಟಿತ ವಲಯದ ಉದ್ದಿಮೆಗಳಲ್ಲಿ ಕೆಲಸ ಮಾಡುವವರೂ ಬರುತ್ತಾರೆ. "ಇತರ ಕೆಲಸಗಾರರ" ಸಂಖ್ಯೆಯಲ್ಲಿ ಸಂಘಟಿತ ಉದ್ದಿಮೆಗಳಲ್ಲಿ ಕೆಲಸ ಮಾಡುವವರ ಸಂಖ್ಯೆಯನ್ನು ಕಳೆದರೆ ಉಳಿದ ಸಂಖ್ಯೆ ಸರಿಸುಮಾರಾಗಿ ಅಸಂಘಟಿತ ವಲಯದಲ್ಲಿ ಕೆಲಸ ಮಾಡುತ್ತಿರುವ ಸಂಖ್ಯೆಯನ್ನು ಪ್ರತಿನಿಧಿಸುತ್ತದೆ ಎಂದು ಹೇಳಬಹುದು. ಕಳೆದ ಮೂರು ಜನಗಣತಿ ವರದಿಗಳಲ್ಲಿ ಈ ಬಗ್ಗೆ ಬರುವ ಅಂಕೆ-ಸಂಖ್ಯೆಗಳು ಹೀಗಿವೆ.

ಕೋಷ್ಟಕ ನೋಡಿ

ಅಂದರೆ ಒಟ್ಟು ದುಡಿಯುವ ಜನಸಂಖ್ಯೆಯಲ್ಲಿ ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವವರ ಸಂಖ್ಯೆ ಕಳೆದ ಮೂರು ದಶಕಗಳಲ್ಲಿ 21 ಶೇ. 23 ಶೇ. ಕ್ಕೇರಿ ಈಗ ಶೇ. 25 ಕ್ಕೇರಿದೆ. ಬೇಸಾಯಗಾರರು ತಮ್ಮ ಸ್ವಾತಂತ್ರ್ಯವನ್ನು ಕಳಕೊಳ್ಳುತ್ತಿರುವ ಎರಡು ಪಟ್ಟು ವೇಗದಲ್ಲಿ ಸ್ವತಂತ್ರ ಉತ್ಪಾದಕರು ಅಸಂಘಟಿತ ವಲಯದ ಕಾರ್ಮಿಕರಾಗಿ ಬದಲಾಗುತ್ತಿದ್ದಾರೆ ಎಂಬುದನ್ನು ಇದು ತೋರಿಸುತ್ತದೆ.

ಅಸಂಘಟಿತ ವಲಯದ ಕಾರ್ಮಿಕರ ದುಃಸ್ಥಿತಿ

ವಿಶ್ವ ಸಂಸ್ಥೆ ಅಭಿವೃದ್ಧಿ ಕಾರ್ಯಕ್ರಮ (ಯು.ಎನ್.ಡಿ.ಪಿ.) ಸಂಸ್ಥೆ 'ಮಾನವ ಅಭಿವೃದ್ಧಿ' ಯನ್ನು ಬಿಂಬಿಸಲು ಒಂದು ಸೂಚ್ಯಂಕವನ್ನು ಸಿದ್ಧಗೊಳಿಸಿ ಪ್ರಕಟಿಸುತ್ತಿದೆ. ಈ ಸೂಚ್ಯಂಕದಲ್ಲಿ ಮೂರು ಮುಖ್ಯ ಭಾಗಗಳು- ಸರಾಸರಿ ಆಯುಷ್ಯ ಜ್ಞಾನ ಅಥವಾ ಶಿಕ್ಷಣದ ಮಟ್ಟ ಹಾಗೂ ರಾಷ್ಟ್ರೀಯ ಮತ್ತು ತಲಾ ಆದಾಯ. 1970 ರಲ್ಲಿ ಈ ಸೂಚ್ಯಂಕವನ್ನು ಮೊದಲು ಪ್ರಕಟಿಸಿದ್ದಾಗ ಭಾರತದ ಸೂಚ್ಯಂಕ 0.258 ಇತ್ತು. ಈ ಸೂಚ್ಯಂಕದ ಪ್ರಕಾರ 110 ದೇಶಗಳಲ್ಲಿ ಭಾರತ 79 ನೇ ಸ್ಥಾನದಲ್ಲಿತ್ತು. ಮೊದಲ ಸ್ಥಾನ ಪಡೆದಿದ್ದ ಸ್ವೀಡನ್ನಿನ ಸೂಚ್ಯಂಕ .873 ಆಗಿತ್ತು. 1990 ರಲ್ಲಿ ಮತ್ತೆ ಈ ಸೂಚ್ಯಂಕವನ್ನು ಪ್ರಕಟಿಸಿದಾಗ ಭಾರತದ ಸೂಚ್ಯಂಕ ಸ್ವಲ್ಪ ಹೆಚ್ಚು 0.29 7 ಆಗಿದೆ. ಆದರೆ ಈ ಪ್ರಕಾರ ಭಾರತದ ಸ್ಥಾನ 160 ದೇಶಗಳಲ್ಲಿ 121 ನೇಯದರಲ್ಲೇ ಇದೆ. ಈ ಬಾರಿ ಮೊದಲಸ್ಥಾನ ಕೆನಡಾಕ್ಕೆ ದೊರೆತಿದೆ. (ಸೂಚ್ಯಂಕ 0.982) 0.981 ಸೂಚ್ಯಂಕ ಪಡೆದ ಜಪಾನ್ ಎರಡನೇ ಸ್ಥಾನ ಪಡೆದಿದೆ. 1970ರಲ್ಲಿ ಈ ದೇಶಗಳ ಸೂಚ್ಯಂಕ ಅನುಕ್ರಮವಾಗಿ 0.860 ಹಾಗೂ 0.853 ಇತ್ತು. ಅಂದರೆ ಮುಂದುವರಿದ ದೇಶಗಳು ಈ ದಿಸೆಯಲ್ಲಿ 20 ವರ್ಷಗಳಲ್ಲೂ ಶೇ. 12 ರಷ್ಟು ಮುಂದುವರಿದಿದ್ದಾರೆ. ನಾವು ಕೇವಲ 3.9 ಶೇ. ಮುನ್ನಡೆ ಸಾಧಿಸಿದ್ದೇವೆ. ಇದು ನಮ್ಮ ಜನಸಂಖ್ಯೆಯ ಬಹುಪಾಲು ಅಸಂಘಟಿತ ವಲಯದಲ್ಲಿ ದುಡಿಯುತ್ತಿರುವ ನಮ್ಮ ಜನಗಳ ದುಸ್ಥಿತಿಯನ್ನು ತೋರಿಸುತ್ತದೆ.

ಕಾರ್ಮಿಕರಲ್ಲಿ 80 ಶೇ. ರಷ್ಟು (ಕೃಷಿ ಕಾರ್ಮಿಕರನ್ನು ಬಿಟ್ಟು) ಅಸಂಘಟಿತ ವಲಯದಲ್ಲಿದ್ದು ಅವರ ಸಂಬಳದ ಮಟ್ಟ ಕನಿಷ್ಠ ಬದುಕಿನ ಮಟ್ಟಕ್ಕಿಂತಲೂ ಕಡಿಮೆ ಇರುವುದರಿಂದ ಅವರು ಬಡತನದ ರೇಖೆಯ ಕೆಳಗೆ ಬದುಕುತ್ತಿದ್ದಾರೆ. ಈ ಜನಗಳ ಜೀವನ ಪರಿಸ್ಥಿತಿ ಸುಧಾರಿಸದೆ ದೇಶ ಕೂಡಾ ಯಾವುದೇ ಮುನ್ನಡೆ ಕಾಣದು. ಹೆಚ್ಚಿನ ಉತ್ಪಾದನೆ, ಹೆಚ್ಚಿನ ಬಳಕೆ ಇದರಿಂದಷ್ಟೇ ವೇತನಮಟ್ಟ ಏರಿ ಅದಕ್ಕನುಗುಣವಾಗಿ ಸಾಂಸ್ಕೃತಿಕ ಮಟ್ಟ ಏರಲು ಸಾಧ್ಯ.

ಒಂದು ದೇಶ, ಅಥವಾ ಆ ದೇಶದೊಳಗಿನ ಒಂದು [illegible] ತಲಾ ಆದಾಯ ಹೆಚ್ಚಿರಬಹುದು. ಆದರೆ ಆದಾಯದ ಸರಿಯಾದ ಹಂಚಿಕೆ [illegible] ಆದಾಯದ ಹೆಚ್ಚಿನ [illegible] ಕೆಳಗಿರುವವರು [illegible] ಕೇರಳ ಮತ್ತು ಕರ್ನಾಟಕದ [illegible] ಳನ್ನೇ ಹೋಲಿಸಿ [illegible]

ವರ್ಷ	ಒಟ್ಟು ಇತರ ಕೆಲಸಗಾರರು (ಕೋಟಿ ಸಂಖ್ಯೆಯಲ್ಲಿ)	ಸಂಘಟಿತ ವಲಯದಲ್ಲಿ ದುಡಿಯುವವರ ಸಂಖ್ಯೆ	ಉಳಿದ ಕೆಲಸಗಾರರ ಸಂಖ್ಯೆ (ಅಸಂಘಟಿತ ವಲಯದ [illegible] (ಇ[illegible] ಸರಿಸು[illegible] ಸಂಖ್ಯೆ)	[illegible]
1971	4.66	1.073	3.587	[illegible]
1981	6.62	1.548	5.072	[illegible]
1991	8.75	1.897	6.853	[illegible]

(ಆಧಾರ: ಟಾಟಾ ಸರ್ವಿಸಸ್ ಪ್ರಕಟಿಸಿರುವ Statistical Outline of India 1992-93)

'ಹಿಂದೂ ವೋಟ್ ಬ್ಯಾಂಕ್'-ವಿಹೆಚ್‌ಪಿ ತಂತ್ರ ಈಗ ಬಯಲಾಗಿದೆ

- ಗೌತಮ್ ದೇವ್

ಯಾವ ಉದಾತ್ತ ಆಶಯಕ್ಕಾಗಿ ಮಹಾತ್ಮಾ ಗಾಂಧೀಜಿಯವರು ತಮ್ಮ ಪ್ರಾಣ ತೆತ್ತರೊ ಆ ಆಶಯ 'ಕೋಮು ಸೌಹಾರ್ದತೆ'ಗಾಗಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಕರ್ನಾಟಕ ರಾಜ್ಯ ಸಮಿತಿಯು ಮಹಾತ್ಮಾ ಗಾಂಧೀಜಿಯವರ ಜನ್ಮದಿನಾಚರಣೆಯ ಹಿನ್ನೆಲೆಯಲ್ಲಿ ದಿನಾಂಕ 30-10-1993 ರಂದು ಬೆಂಗಳೂರಿನಲ್ಲಿ ರಾಜ್ಯ ಮಟ್ಟದ ವಿಚಾರ ಸಂಕಿರಣವೊಂದನ್ನು ಸಂಘಟಿಸಿತ್ತು.

ಈ ವಿಚಾರ ಸಂಕಿರಣದಲ್ಲಿ ಎಸ್.ಎಫ್.ಐ. ಮಾಜಿ ನಾಯಕರು, ಪಶ್ಚಿಮ ಬಂಗಾಳದ ಎಡರಂಗ ಸರ್ಕಾರದ ಪ್ರಾಥಮಿಕ ಆರೋಗ್ಯ ಇಂಜಿನೀಯರಿಂಗ್ ಮತ್ತು ಹೌಸಿಂಗ್ ಸಚಿವರಾದ ಕಾಂ. ಗೌತಮ್ ದೇವ್, ಕರ್ನಾಟಕ ಸರ್ಕಾರದ ಉನ್ನತ ಶಿಕ್ಷಣ ಸಚಿವರಾದ ಎಸ್.ಎಂ. ಯಾಹ್ಯ ಹಾಗೂ ಖ್ಯಾತ ಬಂಡಾಯ ಸಾಹಿತಿ, ಕರ್ನಾಟಕ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಶ್ರೀ ಬರಗೂರು ರಾಮಚಂದ್ರಪ್ಪ ಅವರುಗಳು ಮಾತನಾಡಿದರು.

ಶ್ರೀ ಗೌತಮ್ ದೇವ್ ಅವರು ಮಾತನಾಡುತ್ತಾ ಕೋಮು ಸೌಹಾರ್ದತೆಗಾಗಿ ದುಡಿದ ಮಹಾತ್ಮಾ ಗಾಂಧಿಯವರನ್ನು ಕೋಮುವಾದಿ ಆರೆಸ್ಸೆಸ್‌ನವರು ಕೊಂದರು. ಇಂದು ದೇಶ ಕೋಮು ಆಧಾರದಲ್ಲಿ ಧ್ರುವೀಕರಣಗೊಳ್ಳುತ್ತಿದೆ. 'ರಾಮ'ನನ್ನು ಚುನಾವಣಾ ರಾಜಕೀಯಕ್ಕಾಗಿ ಬಳಸಿಕೊಳ್ಳಲಾಗುತ್ತಿದೆ. ಇಂತಹ ಗಂಭೀರ ಸನ್ನಿವೇಶದಲ್ಲಿ ಕೇಂದ್ರದ ಕಾಂಗ್ರೆಸ್ ಸರಕಾರವು ಜಾತ್ಯಾತೀತ ಮೌಲ್ಯಗಳೊಂದಿಗೆ ದೃಢವಾಗಿ ನಿಲ್ಲದೆ, ಕೋಮುವಾದಿ ಶಕ್ತಿಗಳ ಜೊತೆ ರಾಜಿ ಮಾಡಿಕೊಳ್ಳುತ್ತಿದೆ ಎಂದು ಅವರು ಟೀಕಿಸಿದರು.

ಈಗ 'ಹಿಂದೂ ವೋಟ್ ಬ್ಯಾಂಕ್' ನಿರ್ಮಾಣವಾಗಿದೆ ಎಂದು ಇತ್ತೀಚೆಗೆ ವಿ.ಹೆಚ್.ಪಿ. ನಾಯಕರು ಹೇಳಿಕೆ ನೀಡುವುದು ಕೋಮುವಾದಿಗಳ ನಿಜವಾದ ಆಸಕ್ತಿ ಏನು ಎಂಬುದನ್ನು ತೋರಿಸುತ್ತದೆ ಎಂದ ಗೌತಮ್, ಸ್ವಾತಂತ್ರ್ಯ ಸಂದರ್ಭದಲ್ಲಿ ಕೋಮು ಆಧಾರದಲ್ಲಿ ಭಾರತದ ವಿಭಜನೆಯಾಯಿತು. ಹಿಂದೂ ರಾಷ್ಟ್ರ, ಮುಸ್ಲಿಂ ರಾಷ್ಟ್ರವೆಂಬ ಜನರ ಕಲ್ಪನೆಯಂತೆ ಪಾಕಿಸ್ತಾನ ಮುಸ್ಲಿಂ ರಾಷ್ಟ್ರವಾಯಿತು. ಆದರೆ ಭಾರತದ ಜನ ಕಲ್ಪನೆಯನ್ನು ತಿರಸ್ಕರಿಸಿದರು.

ಮುಸ್ಲಿಮರೇ ಬಹುಸಂಖ್ಯಾತರಾಗಿರುವ ಕಾಶ್ಮೀರದಲ್ಲಿ ಹಿಂದಿನಿಂದಲೂ ಇಲ್ಲದ ಕೋಮು ಗಲಭೆಗಳು 5-6 ವರ್ಷಗಳಿಂದ ಮಾತ್ರ ಏಕೆ ನಡೆಯುತ್ತಿವೆ ಎಂದು ಅವರು ಪ್ರಶ್ನಿಸಿದರು.

ಹಲವು ಭಿನ್ನಾಭಿಪ್ರಾಯಗಳಿದ್ದರೂ ಕೋಮುವಾದಿ ವಿರೋಧಿ ಹೋರಾಟದಲ್ಲಿ ಎಲ್ಲರೂ ಒಂದಾಗಿ ಹೋರಾಟ ಮಾಡಬೇಕಿದೆ. ದೇಶ ಒಡೆದು ಚೂರಾದರೆ ಚುನಾವಣೆ, ಅಧಿಕಾರದ ಪ್ರಶ್ನೆಯೇ ಇಲ್ಲ ಎಂದು ಕಾಂಗ್ರೆಸ್‌ನ್ನು ಅವರು ಎಚ್ಚರಿಸಿದ ಅವರು ಡಿಸೆಂಬರ್ 6 ಘಟನೆಗಳ ನಂತರ ಅಂತರ ರಾಷ್ಟ್ರೀಯ ಮಟ್ಟದಲ್ಲಿ ಭಾರತದ ಘನತೆಗೆ ಧಕ್ಕೆಯಾಗಿದೆ ಎಂದು ಅವರು ವಿಷಾಧಿಸಿದರು.

ನಂತರ ಮಾತನಾಡಿದ ಶ್ರೀ ಎಸ್.ಎಂ. ಯಾಹ್ಯ ಅವರು ಜಾತಿ, ಧರ್ಮಗಳ ಆಧಾರದಲ್ಲಿ ಜನರನ್ನು ಒಡೆಯುವುದು ಅನಾಗರಿಕತೆ ಎಂದರು. ಭಾರತದ ಪ್ರಾಚೀನ ಪರಂಪರೆಯು ಯಾವುದೇ ಒಂದು ಜಾತಿ ಯಾವುದೇ ಒಂದು ಧರ್ಮ, ಒಂದು ವರ್ಗವಿದ್ದಲ್ಲ ಅದು ಎಲ್ಲ ಭಾರತೀಯರಿಗೂ ಸೇರಿದ್ದು ಎಂದರು. ಶಿಕ್ಷಣ ಸಂಸ್ಥೆಗಳು ಜಾತೀಯ ಮತೀಯ ಸಂಸ್ಥೆಗಳ ಹಿಡಿತದಲ್ಲಿರುವುದಕ್ಕೆ ಅವರು ವಿಷಾಧಿಸಿದರು. ಅವರು ಬಹುಸಂಖ್ಯಾತರ ಕೋಮುವಾದ ಹಾಗೂ ಅಲ್ಪಸಂಖ್ಯಾತರ ಕೋಮುವಾದ ಎರಡನ್ನೂ ಖಂಡಿಸಿದರು.

ಶ್ರೀ ಬರಗೂರು ರಾಮಚಂದ್ರಪ್ಪ ಅವರು ಮಾತನಾಡುತ್ತಾ ಎಡ ಪಕ್ಷಗಳಲ್ಲಿ ಹೊರತುಪಡಿಸಿ ಎಲ್ಲ ಪಕ್ಷಗಳಲ್ಲೂ ಕೋಮುವಾದಿಗಳಿದ್ದಾರೆ, ನಮ್ಮ ಇಂದಿನ ಕೋಮುವಾದಿ ವಿರೋಧಿ ಹೋರಾಟವು ಒಂದು ರಾಜಕೀಯ ಪಕ್ಷದ ವಿರುದ್ಧದ ಹೋರಾಟಕ್ಕೆ ಸೀಮಿತವಾಗದೆ ಕೋಮುವಾದಿ ಮನೋಭಾವವನ್ನು ಎಲ್ಲ ನೆಲೆಗಳಲ್ಲಿ ಪ್ರತಿಭಟಿಸಬೇಕೆಂದರು.

ಕೋಮುವಾದದ ಮೂಲ ಬೀಜ ಬಹಳ ಜನ ತಿಳಿದಂತೆ ಬ್ರಿಟಿಷರ ಕಾಲದಲ್ಲಲ್ಲ. ಬದಲಿಗೆ ಅದು, ಸಮಾಜವನ್ನು ವಿಭಾಗಗಳಾಗಿ ವಿಂಗಡಿಸಿದ ವರ್ಣಾಶ್ರಮದ ಧರ್ಮದಲ್ಲಿದೆ ಎಂದು ಅವರು ವರ್ಣಾಶ್ರಮ ಧರ್ಮದ ಫ್ಯಾಸಿಸ್ಟ್ ಮನೋಧರ್ಮವು ಆಧುನೀಕರಣಗೊಂಡಿದೆ ಎಂದು ತಿಳಿಸಿದರು.

ಪ್ರತಿಗಾಮಿಗಳಲ್ಲಿರುವ ಒಗ್ಗಟ್ಟು ಪ್ರಗತಿಪರರಲ್ಲಿಲ್ಲ ಎಂದ ಅವರು ಕೋಮುವಾದದ ವಿರುದ್ಧ ಎಲ್ಲ ಪ್ರಗತಿ ಪರರು ಒಂದು ಗೂಡಲು ಕರೆ ನೀಡಿದರು. ಬಹುಭಾಷಾ ಪಂಡಿತರಾದ ಪ್ರಧಾನಿಗಳ ಕೋಮುವಾದಿಗಳ ಬಗೆಗಿನ ಮೌನವನ್ನು, ನಿಷ್ಕ್ರೀಯತೆಯನ್ನು ಅವರು ಟೀಕಿಸಿದರು.

ಆರ್ಥಿಕ-ಸಾಮಾಜಿಕ ಸುಧಾರಣೆಯ ಮೂಲಕ ಸಮಾಜದಲ್ಲಿ ಆತಂಕ ಹಾಗೂ ಅಭದ್ರತೆಯ ಪರಿಸ್ಥಿತಿಗಳನ್ನು ನಿವಾರಿಸಿ ಸಮಾನತೆಯನ್ನು ಸಾಧಿಸುವ ಮೂಲಕ ಕೋಮುವಾದವನ್ನು ಪ್ರತಿರೋಧಿಸಬೇಕಿದೆ ಎಂದು ಅವರು ತಿಳಿಸಿದರು.

ಇದಕ್ಕೆ ಮುಂಚೆ ಅವರು ಇದೇ ಸಂದರ್ಭದಲ್ಲಿ ಕೋಮು ಸೌಹಾರ್ದತೆಯ ಆಶಯದೊಂದಿಗೆ ತರಲಾದ ದೇಶದ ಖ್ಯಾತ ಬುದ್ಧಿಜೀವಿಗಳ ಲೇಖನಗಳು, ಹಾಗೂ ಕವನಗಳನ್ನೊಳಗೊಂಡ 'ಸೌಹಾರ್ದ' ಸ್ಮರಣ ಸಂಚಿಕೆಯನ್ನು ಬಿಡುಗಡೆ ಮಾಡಿದರು.

ಎಸ್.ಎಫ್.ಐ ನ ರಾಜ್ಯಾಧ್ಯಕ್ಷರಾದ ಕಾಂ. ಜಿ.ಸಿ. ಬಯ್ಯಾರೆಡ್ಡಿಯವರ ಅಧ್ಯಕ್ಷತೆಯಲ್ಲಿ ನಡೆದ ವಿಚಾರ ಸಂಕಿರಣದಲ್ಲಿ ಎಸ್.ಎಫ್.ಐನ ಅಖಿಲ ಭಾರತದ ಸಹ ಕಾರ್ಯದರ್ಶಿ ಕಾಂ. ಬ್ರತಿನ್ ಸೇನ್ ಗುಪ್ತಾ ಅವರು ಹಾಜರಿದ್ದರು. ಕೇರಳದ ಪ್ರಗತಿಪರ ಕವಿ ಕಡಂಬನಟ್ಟಿ ರಾಮಕೃಷ್ಣನ್ ಅವರು ತಮ್ಮ ಕವನಗಳನ್ನು ಓದಿದರು. ಕಾರ್ಯಕ್ರಮದ ಸ್ವಾಗತವನ್ನು ಎಸ್.ಎಫ್.ಐ ರಾಜ್ಯ ಕಾರ್ಯದರ್ಶಿ ಶಾಂತಾರಾಮ್ ಎಸ್.ನಾಯಕ್ ನೆರವೇರಿಸಿದರು. ಆರ್. ರಾಮಕೃಷ್ಣ ಬೆಂಗಳೂರು ಜಿಲ್ಲಾ ಕಾರ್ಯದರ್ಶಿ ಅವರು ವಂದನೆ ಸಲ್ಲಿಸಿದರು.

ಕಾಶ್ಮೀರ- ಅಮೇರಿಕಾದ ನಿಲುವನ್ನು ಖಂಡಿಸಿ ಸಾಮ್ರಾಜ್ಯಶಾಹಿ ಅಮೇರಿಕಾದ ಭೂತದಹನ

ಬೆಂಗಳೂರು: ಕಾಶ್ಮೀರ ವಿವಾದಕ್ಕೆ ಸಂಬಂಧಿಸಿದಂತೆ 'ಶಿಮ್ಲಾ' ಒಪ್ಪಂದ ಪರಿಹಾರಕ್ಕೆ ಆಧಾರವಲ್ಲ. ಕಾಶ್ಮೀರ ಭಾರತದ ಅವಿಭಾಜ್ಯ ಅಂಗವಲ್ಲ ಎಂಬ ಅಮೇರಿಕಾದ ಹೊಸ ನಿಲುವನ್ನು ಖಂಡಿಸಿ ಭಾರತ ವಿದ್ಯಾರ್ಥಿ ಫಡರೇಷನ್ (ಎಸ್.ಎಫ್.ಐ), ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್ (ಡಿ.ವೈ.ಎಫ್.ಐ) ನ ಬೆಂಗಳೂರು ಜಿಲ್ಲಾ ಸಮಿತಿಗಳು ಜಂಟಿಯಾಗಿ ನವೆಂಬರ್ ಒಂದರಂದು ನಗರದ ಮೈಸೂರು ಬ್ಯಾಂಕ್ ಸರ್ಕಲ್‌ನಲ್ಲಿ ಪ್ರತಿಭಟನಾ ಪ್ರದರ್ಶನವನ್ನು ಹಾಗೂ ಸಾಮ್ರಾಜ್ಯಶಾಹಿ ಅಮೇರಿಕಾದ ಭೂತ ದಹನ ಕಾರ್ಯಕ್ರಮವನ್ನು ಸಂಘಟಿಸಿದ್ದವು.

ಈ ಸಂದರ್ಭದಲ್ಲಿ ಮಾತನಾಡಿದ ಎಸ್.ಎಫ್.ಐ. ರಾಜ್ಯ ಕಾರ್ಯದರ್ಶಿ ಶಾಂತಾರಾಮ್ ಎಸ್.ನಾಯಕ್ ಅವರು ಭಾರತದ ಆಂತರಿಕ ವ್ಯವಹಾರಗಳಲ್ಲಿ ತಲೆ ಹಾಕುವ ಅಮೇರಿಕಾದ ಉದ್ಧಟತನವನ್ನು ಖಂಡಿಸಿದರು. ಅಮೇರಿಕಾದ ಈ ಸಾಮ್ರಾಜ್ಯಶಾಹಿ ಧೋರಣೆ ಹಾಗೂ ದೇಶದ ಐಕ್ಯತೆ ಸಮಗ್ರತೆಗಾಗಿ ವ್ಯಾಪಕ ಹೋರಾಟಕ್ಕೆ ವಿದ್ಯಾರ್ಥಿ ಯುವಜನರಿಗೆ ಕರೆ ನೀಡಿದ ಅವರು ಕಾಶ್ಮೀರ ಭಾರತದ ಅವಿಭಾಜ್ಯ ಅಂಗ ಎಂದು ಘೋಷಿಸಿದರು.

ನಂತರ ಮಾತನಾಡಿದ ಡಿ.ವೈ. ಎಫ್.ಐನ ರಾಜ್ಯ ಕಾರ್ಯದರ್ಶಿ ಎಸ್.ವೈ. ಗುರುಶಾಂತ್ ಅವರು ಅಮೇರಿಕಾದ ಈ ನಿಲುವನ್ನು ತೀವ್ರವಾಗಿ ಖಂಡಿಸಿದರು. ಅಂತರರಾಷ್ಟ್ರೀಯ ರಂಗದಲ್ಲಿ ಸೋವಿಯೆಟ್ ರಷ್ಯಾದ ಕುಸಿತದಿಂದ ಏಕೈಕ ಸೂಪರ್ ಪವರ್ ಆಗಿರುವ ಅಮೇರಿಕಾವು [illegible] ಳಿಗೆ ಅನು[illegible] ಕೈಗಾರಿಕಾ [illegible] ಸ್ವಾತಂತ್ರ್ಯ [illegible] ಡಂಕೆಲ್ [illegible] ಕೊಳ್ಳುವಂತೆ [illegible] ನಿಲುವನ್ನು [illegible] ಭಾರತದ [illegible] ಯುತ್ತಿರುವ [illegible] ವಾದಿ ಶಕ್ತಿಗಳ [illegible] ಪರಿಸ್ಥಿತಿಯನ್ನು [illegible] ದಲೂ ಈ [illegible] ದಿದೆ ಎಂದು [illegible]

ಈ [illegible] ಸ್ಥಾನ ಸಂತೋ[illegible] ತಿಲ್ಲಾ. [illegible] ಪರವಾಗಿ [illegible] ಹೊರತು [illegible] ಜಗತ್ತನ್ನು [illegible] ಮುನ್ನಡೆ[illegible] ವುದು ಎಂ[illegible]

ಅಮೇ[illegible] ಜ್ಯಶಾಹಿ [illegible] ಯುವ[illegible] ದರು. [illegible] ವನ್ನು [illegible] ಕಾ. ಜಿ.ಸಿ. [illegible] ಮಾಡಿದರು. [illegible] ಎಫ್.ಐ. ನ [illegible] ದರ್ಶಿ ಕಾಂ. [illegible] ದರು. ಎಸ್. [illegible] ಎಂ.ಎಸ್. [illegible] ದರು.

ತತ್ವಜ್ಞಾನಿ ಮತ್ತು ಸಮಾಜ

ಬುದ್ಧ, ಶಂಕರರಿಂದ ವಿವೇಕಾನಂದರವರೆಗೆ

ಇ.ಎಂ.ಎಸ್.

"ಒಬ್ಬ ತತ್ವಜ್ಞಾನಿಯನ್ನು ಮತ್ತು ಆತನ ವಿಚಾರಧಾರೆಯನ್ನು ಸರಿಯಾಗಿಅರ್ಥಮಾಡಿಕೊಳ್ಳಲು ಕೇವಲ ಅವನ ಕೃತಿಗಳನ್ನು ಕೂಲಂಕುಷವಾಗಿ ಅಭ್ಯಸಿಸಿದರಷ್ಟೇ ಸಾಲದು, ಅದರ ಜೊತೆಗೇ ಆ ತತ್ವಜ್ಞಾನಿ ಬದುಕಿದ್ದ, ಕೃತಿಗಳನ್ನು ರಚಿಸಿದ ಸಾಮಾಜಿಕ, ರಾಜಕೀಯ, ಆರ್ಥಿಕ, ಸಾಂಸ್ಕೃತಿಕ, ಪರಿಸರವನ್ನು ಪರಿಶೀಲಿಸಬೇಕು" ಇದು ಇತ್ತೀಚೆಗೆ ಕೇರಳದ ಕಲ್ಲಿಕೋಟೆ ವಿಶ್ವವಿದ್ಯಾಲಯ ಏರ್ಪಡಿಸಿದ್ದ "ಸ್ವಾಮಿ ವಿವೇಕಾನಂದರ ತತ್ವಗಳ ಪ್ರಸ್ತುತತೆ" ಎಂಬ ವಿಚಾರಸಂಕಿರಣದಲ್ಲಿ ಭಾಗವಹಿಸುತ್ತಾ ಭಾರತದ ಹಿರಿಯ ಮಾರ್ಕ್ಸ್‌ವಾದಿ ಚಿಂತಕ ಹಾಗೂ ಸಿಪಿಐ(ಎಂ)ನ ಹಿರಿಯ ಮುತ್ಸದ್ದಿ ಇ.ಎಂ.ಎಸ್. ಒತ್ತಿ ಹೇಳಿದ ಮೂಲಭೂತ ಅಂಶ. ಇದರ ಆಧಾರದ ಮೇಲೆ ಬುದ್ಧ, ಶಂಕರರ ತತ್ವಗಳನ್ನು ಸ್ಥೂಲವಾಗಿ ಪರಿಶೀಲಿಸುತ್ತ ಶಂಕರರು ಜಾತಿ ಸಮಾಜವನ್ನು ಬಲಪಡಿಸಲು ಬೋಧಿಸಿದ ವೇದಾಂತ ತತ್ವವನ್ನು ವಿವೇಕಾನಂದರು ಜಾತಿ ಸಮಾಜದ ನಿರ್ಮೂಲನಕ್ಕೆ ಜನರನ್ನು ಸಂಘಟಿಸಲು ಉಪಯೋಗಿಸಿಕೊಂಡರು ಎನ್ನುತ್ತಾರೆ ಇ.ಎಂ.ಎಸ್.

ಸ್ವಾಮಿ ವಿವೇಕಾನಂದರ ಅಮೇರಿಕಾ ಭೇಟಿಯ ಮತ್ತು ಚಿಕಾಗೋದಲ್ಲಿ ಅವರ ಐತಿಹಾಸಿಕ ಉಪನ್ಯಾಸದ ಶತಮಾನೋತ್ಸವವನ್ನು ಭಾರತದಾದ್ಯಂತ ತುಂಬಾ ವಿಜೃಂಭಣೆಯಿಂದ ಆಚರಿಸಲಾಗುತ್ತಿದೆ. ತಾವು ಹಿಂದೂ ತತ್ವದ ಮಹಾನಡೆಯನ್ನು ಎತ್ತಿ ಹಿಡಿಯುವಲ್ಲಿ ಸ್ವಾಮಿಜಿಯ ಅನುಯಾಯಿಗಳಾಗಿದ್ದೇವೆ ಎಂದು ಪ್ರತಿಪಾದಿಸಲು ಹಿಂದುತ್ವ ರಾಜಕೀಯದ ವಕ್ತಾರರು ಈ ಅವಕಾಶವನ್ನು ಚೆನ್ನಾಗಿ ಉಪಯೋಗಿಸಿಕೊಳ್ಳುತ್ತಿದ್ದಾರೆ. ಸ್ವಾಮಿಜಿಯನ್ನು 19 ನೇ ಶತಮಾನದ ಭಾರತದ ಪುನರುಜ್ಜೀವನ ಚಳುವಳಿಯ ನೇತಾರರಲ್ಲೊಬ್ಬರೆಂದು ಪರಿಗಣಿಸುವ ತತ್ವಜ್ಞಾನಿಗಳು ಮತ್ತು ರಾಜಕೀಯ ಚಿಂತಕರು ಹಿಂದುತ್ವವಾದಿಗಳ ಈ ಪ್ರಯತ್ನವನ್ನು ಪ್ರಬಲವಾಗಿ ವಿರೋಧಿಸಿದ್ದಾರೆ. ಒಬ್ಬ ತತ್ವಜ್ಞಾನಿಯನ್ನು ಮತ್ತು ಅವನ ಕೊಡುಗೆಗಳನ್ನು ಸರಿಯಾದ ರೀತಿಯಲ್ಲಿ ಅರ್ಥಮಾಡಿಕೊಳ್ಳಲು ಕೇವಲ ಅವನ ವಿಚಾರಗಳನ್ನು ಕೂಲಂಕುಶವಾಗಿ ಅಭ್ಯಸಿಸಿ ಅವುಗಳನ್ನು ಅರ್ಥೈಸಿದರೆ ಸಾಲದು, ಅದರ ಜೊತೆಗೆ ಆ ವ್ಯಕ್ತಿಯ ಜೀವಿತ ಕಾಲದ ಸಾಮಾಜಿಕ, ಆರ್ಥಿಕ ಮತ್ತು ಸಾಂಸ್ಕೃತಿಕ ಪರಿಸ್ಥಿತಿಯನ್ನೂ ಪರೀಕ್ಷಿಸಬೇಕು.

ರಾಜಾರಾಂ ಮೋಹನ್‌ರಾಯ್‌ರಂಥರವರು ಆರಂಭಿಸಿದ ಮಹಾನ್ ಪುನರುಜ್ಜೀವನದ ಫಲವಾದ ವಿವೇಕಾನಂದರು ಭಾರತದ ಆಧುನಿಕ ಪುನರುಜ್ಜೀವನದ ಬೆಳವಣಿಗೆಗೆ ಸಹಾಯವಾಗುವ ರೀತಿಯಲ್ಲಿ ತಮ್ಮ ವೇದಾಂತ ತತ್ವವನ್ನು ಅರ್ಥೈಸಿದರು. ಆದ್ದರಿಂದಲೇ ಕಲ್ಲಿಕೋಟೆ ವಿಚಾರ ಸಂಕಿರಣದ ನನ್ನ ಪ್ರಬಂಧಕ್ಕೆ 'ಭಾರತದ ಪುನರುಜ್ಜೀವನದ ತತ್ವಜ್ಞಾನಿ' ಎಂದು ತಲೆ ಬರಹ ಕೊಟ್ಟಿದ್ದೆ.

ಪ್ರತಿಯೊಬ್ಬ ತತ್ವಜ್ಞಾನಿಯೂ (ಸಮಾಜದಲ್ಲಿ ಮತ್ತು ರಾಜಕೀಯದಲ್ಲಿ ನಡೆಯುವ ನೀರಸವಾದ ಬಡಿದಾಟಗಳಿಂದ ದೂರ ಇದ್ದೇವೆಂದುಕೊಂಡ ತತ್ವಜ್ಞಾನಿಗಳೂ ಕೂಡಾ) ಅರಿವಿದ್ದೋ, ಇಲ್ಲದೆಯೋ, ತನ್ನ ಸುತ್ತಲಿನ ಸಾಮಾಜಿಕ, ರಾಜಕೀಯ ಪರಿಸರವನ್ನು ಪ್ರತಿಬಿಂಬಿಸುತ್ತಾನೆ. ಮತ್ತು ಅದನ್ನು ತಾತ್ವಿಕವಾಗಿ ವ್ಯಾಖ್ಯಾನಿಸುತ್ತಾನೆ. ಇದನ್ನು ಸ್ಪಷ್ಟಪಡಿಸುವ ಸಲುವಾಗಿಯೇ ನನ್ನ ಪ್ರಬಂಧದಲ್ಲಿ ಪ್ರಾಚೀನ ಭಾರತದ ತತ್ವಜ್ಞಾನಿಗಳಾದ ಬುದ್ಧ ಮತ್ತು ಶಂಕರಾಚಾರ್ಯರನ್ನು ವಿವೇಕಾನಂದರ ಜೊತೆಗೆ ಹೋಲಿಸಿದ್ದೆ. ಕಾರ್ಲ್‌ಮಾರ್ಕ್ಸ್ ಜರ್ಮನ್ ತತ್ವಜ್ಞಾನಿ ಫ್ಯೂಯೆರ್‌ಬಾಕ್ ಕುರಿತು ಬರೆದ ತನ್ನ ಚಿರಪರಿಚಿತ ಪ್ರಬಂಧದಲ್ಲಿ ಬಹುಕ್ಲಿಷ್ಟ ತತ್ವಜ್ಞಾನಿಯೂ ಕೂಡಾ ತನ್ನ ತತ್ವಗಳ ಮೂಲಕ ತನ್ನ ಸುತ್ತಲಿನ ರಾಜಕೀಯ-ಸಾಮಾಜಿಕ ಪರಿಸರವನ್ನು ಪ್ರತಿಬಿಂಬಿಸುತ್ತಾನೆ. ತಾತ್ವಿಕವಾಗಿ ಅದನ್ನು ವ್ಯಾಖ್ಯಾನಿಸಲು ಪ್ರಯತ್ನ ಪಡುತ್ತಾನೆಂಬ ನಿರ್ಣಯಕ್ಕೆ ಬಂದಿದ್ದರು.



ಬುದ್ಧ: ಅಳಿಯುತ್ತಿದ್ದ ಸಮಾಜದ ರಕ್ಷಕ

ಬುದ್ಧನು ಹಳೆಯ ಬುಡಕಟ್ಟು ಸಮಾಜವು ಅವಸಾನವಾಗಿ ಹೊಸ ಜಾತಿಪದ್ಧತಿಯ ಸಮಾಜ ಉದಯಿಸುತ್ತಿದ್ದ ಕಾಲದಲ್ಲಿ ಜೀವಿಸಿದ್ದನು. ತಮ್ಮ ಸಾಮಾಜಿಕ ಜೀವನ ಮತ್ತು ಸಾಂಸ್ಕೃತಿಕ ಪರಂಪರೆಯಿಂದ ವಂಚಿಸಲ್ಪಟ್ಟ ಲಕ್ಷಾಂತರ ಜನರ ಬಗ್ಗೆ ಅವನಿಗೆ ಅನುಕಂಪವಿತ್ತು. ನವಸಮಾಜದ ಅತ್ಯುನ್ನತ ವರ್ಗದಲ್ಲಿ ಜನಿಸಿಯೂ ಕೂಡಾ ಅವನು ತಮ್ಮ ಜೀವನ ಮತ್ತು ಸಂಸ್ಕೃತಿಯನ್ನು ಕಳೆದುಕೊಂಡವರ ಬಗ್ಗೆ ಉದಾತ್ತ ಮನೋಭಾವವನ್ನು ಹೊಂದಿದವನಾಗಿದ್ದನು. ಈ ರೀತಿಯಲ್ಲಿ ಅವನು ಉದಯಿಸುತ್ತಿದ್ದ ನವೀನ ಪದ್ಧತಿಯ ವಿರುದ್ಧ ಹೋರಾಡುವ ಬಂಡಾಯಗಾರನೂ ಮತ್ತು ಶೀಘ್ರ ಪತನಗೊಳ್ಳುತ್ತಿದ್ದ ಪ್ರಾಚೀನ ಪದ್ಧತಿಯ ರಕ್ಷಕನೂ ಆಗಿದ್ದನು.

ವೇದಕಾಲದ ಬ್ರಾಹ್ಮಣ ಸಮಾಜದ ಆಧ್ಯಾತ್ಮಿಕವಾದವನ್ನು ಮತ್ತು ಭಾವವಾದವನ್ನು ವಿರೋಧಿಸುತ್ತಿದ್ದ ಬುದ್ಧನ ತತ್ವದ ಮೂಲಸೆಲೆಯೇ ಇದಾಗಿದೆ. ತನ್ನ ಪ್ರಾಪಂಚಿಕವಾದ ಮತ್ತು ನಿರೀಶ್ವರವಾದದಿಂದ ತನ್ನ ವಿರೋಧಿಗಳಿಂದ ದೂಷಣೆಗೊಳಗಾದ ಬುದ್ಧನು, ಬುಡಕಟ್ಟು ಸಮಾಜದ ಅವನತಿಯ ಪ್ರಕ್ರಿಯೆಯಲ್ಲಿ ನರಳುತ್ತಿರುವವರ ಪರವಾಗಿದ್ದನು. ಈ ಕಾರಣದಿಂದಲೇ ಅವನು ಬದುಕಿದ್ದ ಕಾಲದ ಸಾಮಾಜಿಕ ಸಾಂಸ್ಕೃತಿಕ ಮತ್ತು ರಾಜಕೀಯ ಬೆಳವಣಿಗೆಗಳನ್ನು ಗಂಭೀರವಾಗಿ ಗಮನಿಸದೇ ಇದ್ದರೆ ಅವನ ತತ್ವದ ಮಹತ್ವವನ್ನು ಅರ್ಥಮಾಡಿಕೊಳ್ಳಲು ಸಾಧ್ಯವಿಲ್ಲ.

ಹೀಗೆ ಯಾವ ಸಮಾಜವು ಹೆಚ್ಚು ಕಡಿಮೆ ಬದಲಾಗಿತ್ತೋ, ಆ ಹಳೆಯ ಸಮಾಜದ ಹಂತಕ್ಕೆ ಸಮಾಜವನ್ನು ಹಿಂದಕ್ಕೆ ತೆಗೆದುಕೊಂಡು ಹೋಗುವ ಪ್ರಯತ್ನವನ್ನು ಬುದ್ಧ ಮಾಡುತ್ತಿದ್ದ. ಕಟುವಾಸ್ತವತೆಯೆಂದರೆ ಬುಡಕಟ್ಟು ಸಮಾಜವು ಹಳಸಿಹೋಗಿದ್ದರೂ ಬುದ್ಧನು ಅದಕ್ಕೆ ಅಂಟಿಕೊಂಡಿದ್ದ ಮತ್ತು ಅದನ್ನು ಉಳಿಸಲು ಹೋರಾಡಿದ. ಆದ್ದರಿಂದ ಬ್ರಾಹ್ಮಣರ ಅಧಿಪತ್ಯದ ವಿರುದ್ಧ ನಡೆದ ಸಮರದಲ್ಲಿ ಅವನು ಸೋತ. ಶತಮಾನಗಳಿಂದ ಶೀಘ್ರಗತಿಯಲ್ಲಿ ಒಂದು ಸಾಮಾಜಿಕ ಸಾಂಸ್ಕೃತಿಕ ಶಕ್ತಿಯಾಗಿ ಬೆಳೆಯುತ್ತಿದ್ದ ಬೌದ್ಧಧರ್ಮವು ಕೊನೆಯಲ್ಲಿ ಸೋತಿತು. ಜಾತಿ ಸಮಾಜವನ್ನು ಪ್ರತಿನಿಧಿಸುವ ಹೊಸ ಸಾಮಾಜಿಕ ಸಾಂಸ್ಕೃತಿಕ ಶಕ್ತಿಗಳು ಮೇಲುಗೈ ಪಡೆಯುತ್ತಿದ್ದಾಗ ಬೌದ್ಧ ವಿದ್ಯಾಕೇಂದ್ರಗಳ ಏಳಿಗೆ ಇಳಿಮುಖವಾಯಿತು.

ಭಾರತದ ಗಡಿಯಾಚೆ ಉದ್ದಗಲಕ್ಕೂ ಬುದ್ಧನ ತತ್ವಗಳು ಹರಿಡಿದ್ದಾಗ್ಯೂ ಅದು ಹುಟ್ಟಿದ ದೇಶದಲ್ಲೇ ಬೌದ್ಧ ಧರ್ಮವು ಅನಾಮಧೇಯವಾದ ಸಾಮಾಜಿಕ ಸಾಂಸ್ಕೃತಿಕ ಶಕ್ತಿಯಾಗಿರುವುದು ಒಂದು ದುರಂತ ವಾಸ್ತವ ಸಂಗತಿ.

ಶಂಕರ: ಜಾತಿ ಸಮಾಜದ ಪ್ರತಿಪಾದಕ

ಬುದ್ಧನ ತತ್ವಗಳ ವಿರುದ್ಧದ ಹೋರಾಟದಿಂದಾಗಿ ಶಂಕರರು ಬೆಳಕಿಗೆ ಬಂದರು. ಬೌದ್ಧಧರ್ಮದ ವಿರುದ್ಧವಾಗಿ ಶಂಕರರು ನಡೆಸಿದ ಪ್ರಚಾರವು ಬೋಧಿಸಿದ ಕ್ಲಿಷ್ಟ ತಾತ್ವಿಕ ಸೂತ್ರಾಚರಣೆಗಳು ಖಂಡಿತವಾಗಿಯೂ ಆ ಮಹಾನ್ ತತ್ವಜ್ಞಾನಿಗಿದ್ದ ಜಾತಿ ವ್ಯವಸ್ಥೆಯ ಮೇಲಿನ ಪಕ್ಷಪಾತವನ್ನು ಮರೆಮಾಚಿತು. ಬುದ್ಧನ ತತ್ವವನ್ನು ವಿರೋಧಿಸುವ ಮತ್ತು ತನ್ನದೇ ಆದ 'ವೇದಾಂತ' ತತ್ವವನ್ನು ಸಮರ್ಥಿಸಿಕೊಳ್ಳುವ ಸಂದರ್ಭದಲ್ಲಿ ಅವರು ಮನುವನ್ನು ಒಂದು ವಿಧಾಯಕ ಶಕ್ತಿಯಂತೆ ಅನೇಕ ವೇಳೆ ತನ್ನ ಪ್ರವಚನಗಳಲ್ಲಿ ಹೆಸರಿಸಿದ್ದರು ಎನ್ನುವುದು ಪ್ರಮುಖ ಅಂಶವಾಗಿದೆ.

ಇಡೀ ವಿಶ್ವವೇ ಒಂದು ಮಾಯೆ ಮತ್ತು ಬ್ರಹ್ಮ ಮಾತ್ರ ಸತ್ಯ ಎನ್ನುವ ವಿಚಾರ ಸರಣಿಯನ್ನು ಮುಂದಿಡುವಾಗಲೂ, ಮನು ಹಾಕಿಕೊಟ್ಟ ಜಾತಿ ವ್ಯವಸ್ಥೆಯ ಕಟ್ಟಳೆಗಳನ್ನು ಉಲ್ಲಂಘಿಸುವುದರ ವಿರುದ್ಧ ನಿರ್ದಯೆಯಿಂದ ವರ್ತಿಸುತ್ತಿದ್ದರು. ಬುದ್ಧನು ಅವನತಿ ಹೊಂದುತ್ತಿರುವ ಬುಡಕಟ್ಟು ಸಮಾಜವನ್ನು ಸಮರ್ಥಿಸುವ ತತ್ವಜ್ಞಾನಿಯಾಗಿದ್ದರೆ ಶಂಕರ ಉದಯಿಸುತ್ತಿದ್ದ ಜಾತಿ ಸಮಾಜವನ್ನು ಪ್ರತಿಪಾದಿಸುವ ತತ್ವಜ್ಞಾನಿಯಾಗಿದ್ದರು.

ಶಂಕರರು ಬೋಧಿಸಿದ್ದ ಜಾತಿ ವ್ಯವಸ್ಥೆಯು ಬುದ್ಧ ಸಮರ್ಥಿಸಲು ಪ್ರಯತ್ನಿಸಿದ ಬುಡಕಟ್ಟು ಸಮಾಜಕ್ಕಿಂತ ಮುಂದುವರಿದಿದ್ದ ಪದ್ಧತಿಯಾಗಿದ್ದರೂ ಕೂಡಾ ಭಾರತದ ಜಾತಿ ಪದ್ಧತಿಯು ಈ ದೇಶದ ಹೊರಗೆ ಯುರೋಪಿನಲ್ಲಿ ಉದಯಿಸುತ್ತಿದ್ದ ಹೊಸ ಶಕ್ತಿಯ ವಿರುದ್ಧ ನಿಲ್ಲಲು ಅಸಮರ್ಥವಾಗಿತ್ತು. ಶಂಕರರು ಬಲಪಡಿಸಿದ ಜಾತಿ ಸಮಾಜದಲ್ಲಿನ ಬ್ರಾಹ್ಮಣ್ಯದ ಅಧಿಪ[...] ಜದ ಅವನತಿಗೆ ಕಾರಣವಾ[...] ಪಿನ ಸಂಸ್ಕೃತಿಗೆ ಸರಿಸಮಾ[...] ಪೊಂದು ಅಂಶಗಳಲ್ಲಿ ಅದ[...] ವಾಗಿದ್ದ ಭಾರತೀಯ ಸಂ[...] ನಂತರದ ಕಾಲದಲ್ಲಿ ಹಿನ್ನ[...]

ಯುರೋಪು ತನ್ನ ಕೈ[...] ರಾಜಕೀಯ ಮತ್ತು ಸಾಂಸ್ಕೃ[...] ಹೊಂದುತ್ತಿದ್ದಾಗ ಭಾರತವು [...] ಗಳಿಗೆ ಬಲಿಯಾಗುತ್ತಾ ಹಿ[...] ತೀಯ ವಿಜ್ಞಾನದ ಇತಿಹಾ[...] ದಂತೆ ಶಂಕರರ ವೇದಾಂತ[...] ಸಿದ್ಧಾಂತ ಮಾತ್ರವಲ್ಲದೆ [...] ಧನೆಗೆ. ಅಡ್ಡಗಾಲನ್ನಿಕ್ಕುವ [...] ಕೀಯ ಸಿದ್ಧಾಂತವೂ ಆಗಿತ್ತು[...] ತಾಂತ್ರಿಕ ಸಂಶೋಧನೆ ಮ[...] ನ್ನೊಳಗೊಂಡ ಭಾರತದ ಪ[...] ಯುಗ ಕಾಲದ ಇತಿಹಾಸವ[...] ತಾಂತ್ರಿಕ ಬದಲಾವಣೆಗಳಲ್ಲ[...] ಹೊಂದುತ್ತಿದ್ದ ಯುರೋಪಿನ[...] ಲಿಕ್ಕಲು ಅಸಮರ್ಥವಾಗಿತ್ತು.

ಭಾರತೀಯ ಸಮಾಜ[...] ಸಾಮಾಜಿಕ ಮತ್ತು ಸಾಂ[...] ಭಾರತದ ರಾಜಕೀಯ ವ್ಯವ[...] ಕಲಾರಂಭಿಸಿದ ಯುರೋಪಿ[...] ದೇಶದ ಒಂದಿಲ್ಲೊಂದು ಪ[...] ಲ್ಲೊಂದು ರೀತಿಯಲ್ಲಿ ರಾಜಕ[...] ಅಧಿಕಾರದಲ್ಲಿ ಸಹಭಾಗಿಯ[...] ಸಂಪೂರ್ಣ ಭಾರತವನ್ನೇ [...] ತರಲು ಅನುವು ಮಾಡಿಕೊ[...] ಭಾರತೀಯ ಸಮಾಜವನ್ನು [...] ಸಾಂಸ್ಕೃತಿಕವಾಗಿ, ಆರ್ಥಿಕ[...] ಯವಾಗಿ ದುರ್ಬಲಗೊಳಿಸಿ[...] ಭಾರತದ ಸ್ವಾತಂತ್ರ್ಯ ಹರಣಕ್ಕೆ [...] ಣವಾಗಿತ್ತು.

ವಿವೇಕಾನಂದ: ಜಾತಿಸಮಾಜದ ನಿ[...]

ಈ ಅನುಭವದಿಂದ [...] ತದ ಯುವಪೀಳಿಗೆಯು [...] ಗಳು ಹಿಡಿದ ಸಾಂಸ್ಕೃತಿ[...] ರಿಕ ಮಾರ್ಗವನ್ನು ಅನು[...] ಹೀಗೆ ಮೊಟ್ಟಮೊದಲು ಬ[...] ತದ ಪ್ರಜ್ಞಾಶಾಲಿ ಯುವಪೀ[...] ವಾಗಿತ್ತು. ತದನಂತರದಲ್ಲಿ [...] ಭಾಗಗಳು ಬಂಗಾಳವನ್ನು [...] ನೇ ಶತಮಾನದಲ್ಲಿ ಮೂ[...] ಪ್ರಜ್ಞಾಶೀಲರ ಮತ್ತು ಪುನರು[...] ಗಾರರ, ಸುಧಾರಕರ ಒಂದ[...] ದರೆ ಶಂಕರರು ಸಮರ್ಥಿಸಿ[...] ಜದ ಮೇಲೆ ಅವರು ನಡೆಸಿ[...] ರರು ಗಟ್ಟಿಗೊಳಿಸಿದ ಜಾತಿಸ[...] ಗೆಯುವುದು ಪುನರುಜ್ಜೀವ[...] ಮುಖ್ಯ ಉದ್ದೇಶವಾಗಿತ್ತು.

ಆದರೆ ಅವರು ಬುದ್ಧ[...]

ಅಸಂಘಟಿತ ಕಾರ್ಮಿಕರ ಹೋರಾಟ ಏಕೆ?

ಪುಟ 3ರಿಂದ

ತಲಾ ಆದಾಯ ಕರ್ನಾಟಕಕ್ಕಿಂತ ಕಡಿಮೆ. ಆದರೆ ಬಡತನ ರೇಖೆಯ ಕೆಳಗಿರುವವರ ಪ್ರಮಾಣ ಕೂಡಾ ಕರ್ನಾಟಕಕ್ಕಿಂತ ಬಹಳ ಕಡಿಮೆ. ಇದಕ್ಕೆ ಕಾರಣ ನಮ್ಮ ರಾಜ್ಯದಲ್ಲಿ ಅಸಂಘಟಿತ ವಲಯದ ಕಾರ್ಮಿಕರ ವೇತನ ಮಟ್ಟ ಬಹಳ ಕಮ್ಮಿ.

ಒಂದು ಪ್ರಶ್ನೆಗೆ ಉತ್ತರಿಸಬೇಕಾಗಿದೆ. ಒಂದಲ್ಲ ಒಂದು ಕಸುಬಿನಲ್ಲಿ ಶ್ರಮಿಸುತ್ತಿರುವ ಜನಗಳಿಗೆ ಅದು ಸೃಷ್ಟಿಸುತ್ತಿರುವ ಸರಕುಗಳಿಗೆ ಮಟ್ಟದಷ್ಟು ಜೀವನೋಪಾಯದ ಅವಕಾಶವನ್ನು ಏಕೆ ಮಂಡಿಸಲಾಗುತ್ತಿದೆ? ಈ ಜನಗಳಿಗೆ ಪ್ರಜ್ಞೆಯ ಹಾಗೂ ಸಂಘಟನೆಯ ಅಭಾವದಿಂದಾಗಿಯೇ ತಮ್ಮ ಶ್ರಮದ ಫಲ ಅವರಿಗೆ ದಕ್ಕುತ್ತಿಲ್ಲ.

ಸರ್ಕಾರದ ಧೋರಣೆ

ಕೇಂದ್ರ ಸರ್ಕಾರದ 'ಕನಿಷ್ಠ ಕೂಲಿ ಶಾಸನ, 1948'ನ್ನು ರಚಿಸಿ 45 ವರ್ಷಗಳು ದಾಟಿವೆ. 'ಭಾರತದ ಜನತೆ' ತಮಗೆ ಒಂದು ಸಂವಿಧಾನ ಕೊಟ್ಟುಕೊಂಡು' ಆ ಸಂವಿಧಾನದ 43ನೇ ಕಲಮು ಪ್ರಭುತ್ವ ಸಾಕಷ್ಟು ಜೀವನೋಪಾಯ ಹಾಗೂ ಜೀವನ ವೇತನ ಒದಗಿಸಬೇಕು ಎಂದು ನಿರ್ದೇಶನವಿತ್ತು ಈಗ 43 ವರ್ಷಗಳಾಗಿವೆ. ಭಾರತ ಸರಕಾರದ, ಭಾರತದ ಕೈಗಾರಿಕೆಗಳ ಮಾಲಕರು ಹಾಗೂ ಕಾರ್ಮಿಕ ಸಂಘಗಳು ಒಟ್ಟಾಗಿ, 15 ನೇ ಭಾರತೀಯ ಕಾರ್ಮಿಕ ಸಮ್ಮೇಳನ (ಐ.ಎಲ್.ಸಿ.) ದಲ್ಲಿ 'ಅಗತ್ಯ ಆಧಾರಿತ ಕನಿಷ್ಟ ಕೂಲಿ' ಹೇಗಿರಬೇಕು ಎಂದು ನಿರ್ಣಯಿಸಿ 36 ವರ್ಷಗಳಾಗಿವೆ. ಆದರೆ ಇದುವರೆಗೂ ಕೆಲವೆಡೆ, ಸಂಘಟಿತ ವಲಯದ ದುಡಿಯುವ ಜನಗಳ ಕೆಲ ವಿಭಾಗಗಳನ್ನು ಬಿಟ್ಟರೆ ಬಹಳಷ್ಟು ಕಡೆ ಇದನ್ನು ಜ್ಯಾರಿಗೆ ತರುವಂತೆ ಮಾಡುವಲ್ಲಿ ನಾವು ಸಫಲರಾಗಿಲ್ಲ.

1948ರ ಶಾಸನ, 1957 ರ ಐ.ಎಲ್.ಸಿ. ನಿರ್ಣಯಗಳಂತಹ ಶಾಸನಗಳು, ನಿರ್ಣಯಗಳು ಕೂಡಾ ಹಲವು ಒತ್ತಡಗಳಿಂದಾಗಿ ಅಸ್ತಿತ್ವಕ್ಕೆ ಬಂದವುಗಳು. 1928 ರಲ್ಲಿ ಅಂತರ್ರಾಷ್ಟ್ರೀಯ ಕಾರ್ಮಿಕ ಸಂಘಟನೆ (ಐ.ಎಲ್.ಒ) ಅಗತ್ಯ ಆಧಾರಿತ ಕನಿಷ್ಟ ಕೂಲಿಯ ಬಗ್ಗೆ ಒಂದು ನಿರ್ಣಯ ಅಂಗೀಕರಿಸಿತ್ತು. ಆ ಅಂತರ್ರಾಷ್ಟ್ರೀಯ ಒತ್ತಡದಿಂದಾಗಿ 1948 ರ ಶಾಸನ ಬಂತು. ಈ ಐ.ಎಲ್.ಓ ಕೂಡಾ ಹುಟ್ಟಿದ್ದು ಅಕ್ಟೋಬರ್ ಕ್ರಾಂತಿಯು ವಿಶ್ವದಲ್ಲಿ ಉಂಟುಮಾಡಿದ ಒತ್ತಡದಿಂದಾಗಿ 1919 ರಲ್ಲಿ ಹುಟ್ಟಿತು ಎಂಬುದನ್ನೂ ಗಮನಿಸಬೇಕು. 1957 ರ ಐ.ಎಲ್.ಓ ನಿರ್ಣಯ ಭಾರತದ ಕಾರ್ಮಿಕ ಆಂದೋಲನ ತಾನು ನೀಡಿದ ಭರವಸೆಯಿಂದ ಸತತವಾಗಿ ಜಾರಿಗೊಳ್ಳುತ್ತಾ ಸಾಗಿದ ಭಾರತ ಸರಕಾರದ ಮೇಲೆ ಹಾಕಿದ ಒತ್ತಡದಿಂದಾಗಿ ಬಂತು. 1948 ರಲ್ಲಿ ಸಂವಿಧಾನ ಸಭೆ (ಆಗಿನ್ನು ಈಗಿನ ಸಂಸತ್ತು ರಚನೆಗೊಂಡಿರಲಿಲ್ಲ) ಯಲ್ಲಿ ಒಂದು 'ನ್ಯಾಯಸಮ್ಮತ ವೇತನ ಮಸೂದೆ' ಯನ್ನು ಮಂಡಿಸಲಾಯಿತು. ಸಂವಿಧಾನ ಸಭೆ ವಿಸರ್ಜನೆಗೊಂಡಾಗ ಅದು ರದ್ದಾಗಿ ಹೋಗಲು ಬಿಡುವಂತಾಯಿತು. ನ್ಯಾಯಸಮ್ಮತ ವೇತನ ಮಸೂದೆಯನ್ನು ಕೈಬಿಡುತ್ತಿದ್ದಂತೆ 'ಜೀವನ ವೇತನ'ದ ಘೋಷಣೆ ಬಂತು. 'ಕನಿಷ್ಟ ಕೂಲಿ' ಎಷ್ಟಿರಬೇಕು ಎಂಬ ಪ್ರಶ್ನೆ ಬಂದಾಗ ಬದುಕಿರಲು ಅವಶ್ಯವಾದ ಮಟ್ಟ ಎಂಬ ಸಿದ್ಧಾಂತ ಹಾಗೂ 1957 ರಲ್ಲಿ 'ಅಗತ್ಯ ಆಧಾರಿತ ಕನಿಷ್ಟ ಕೂಲಿ' ಯ ಪರಿಕಲ್ಪನೆ ಬಂತು.

	1989-90ರಲ್ಲಿ ತಲಾ ಆದಾಯ	ಬಡತನದ ರೇಖೆಯು ಕೆಳಗಿರುವವರ ಶೇಕಡಾ 1987-88
ಕರ್ನಾಟಕ	40.75	32.1
ಕೇರಳ	3389	17.0

ಬದುಕಿರಲು ಸಾಲುವಷ್ಟೇ ಅಂದರೆ ಅತ್ಯಂತ ಕನಿಷ್ಟ

'ಅಗತ್ಯ ಆಧಾರಿತ ಕನಿಷ್ಟ ಕೂಲಿ ಕುರಿತು ಐ.ಎಲ್.ಸಿ. ನಿರ್ಣಯದ ನಂತರ ಅದನ್ನು ಜ್ಯಾರಿಗೆ ತರಲು ಕೇಂದ್ರ ಸರ್ಕಾರ ಏನೂ ಮಾಡಿರದಿದ್ದರೂ. 1957-59 ರಲ್ಲಿ ಕೇರಳದಲ್ಲಿದ್ದ ಸರಕಾರ ಸಂಬಳ ನಿಗದಿಪಡಿಸುವಲ್ಲಿ ಅದನ್ನು ಅನ್ವಯ ಮಾಡಿತು. ದೇಶದ ಮೊದಲ ಕಮ್ಯುನಿಸ್ಟ್ ಸರಕಾರ 15 ನೇ ಐ.ಎಲ್.ಸಿ.ಯ ಶಿಫಾರಸನ್ನು ಹೆಂಚು ಕಾರ್ಮಿಕರ ಸಂಬಳ ನಿಗದಿಪಡಿಸುವಲ್ಲಿ ಜ್ಯಾರಿಗೆ ತರಲು ಯತ್ನಿಸಿತು. ಮಾಲಕರು ಇದರ ವಿರುದ್ಧ ಸುಪ್ರೀಂ ಕೋರ್ಟಿಗೆ ಹೋದರು. ಆದರೆ ಅಲ್ಲಿ ಸೋತರು. (ಉನಿಚೊಯ್ v/s ಕೇರಳ ಸರಕಾರ) ಅಗತ್ಯ ಆಧಾರಿತ ಕನಿಷ್ಟ ಕೂಲಿಯ ಸೂತ್ರ 15 ನೇ ಐ.ಎಲ್.ಸಿ. ರೂಪಿಸಿದಂತೆ ಹಾಗೂ ಕೇರಳ ಸರಕಾರ ನೇಮಿಸಿದ ಸಮಿತಿ ಅನ್ವಯಿಸಿದಂತೆ ಇರಬೇಕು ಎಂದು ಸುಪ್ರೀಂ ಕೋರ್ಟ್ ತೀರ್ಪು ಸರಿಯಾಗಿಯೇ ಹೇಳಿತು. ಹೀಗೆ ಈ ಸೂತ್ರಕ್ಕೆ ನ್ಯಾಯಾಂಗದ ಮನ್ನಣೆಯೂ ದೊರೆಯಿತು. ಈ ಕೇಸಿನಲ್ಲಿ, ಇನ್ನೂ ಇತರ ಹಲವು ಕೇಸುಗಳಲ್ಲಿ ಸುಪ್ರೀಂ ಕೋರ್ಟ್ ಬದುಕಿರಲು ಕನಿಷ್ಟವಾಗಿ ಬೇಕಿರುವುದಕ್ಕಿಂತ ಹೆಚ್ಚು ಕನಿಷ್ಟ ಕೂಲಿ ಕೊಡದೆ ಅಸ್ತಿತ್ವದಲ್ಲಿರಲು ಯಾವ ಉದ್ದಿಮೆಗೂ ಹಕ್ಕಿಲ್ಲ ಎಂದು ಸಾರಿದೆ. ಆದರೆ ಇಡೀ ಅಸಂಘಟಿತ ವಲಯ ಈಗಲೂ ಬದುಕಿರಲು ಅಗತ್ಯವಾದ ಮಟ್ಟಕ್ಕಿಂತಲೂ ಕಡಿಮೆ ಕೂಲಿ ಕೊಟ್ಟುಕೊಂಡೇ ಬರುತ್ತಿದೆ ಎಂಬುದು ಒಂದು ವಿಪರ್ಯಾಸ.

ಸಂಘಟನೆ ಹೋರಾಟದಿಂದ ಮಾತ್ರ ಸಾಧ್ಯ

ಅಗತ್ಯ ಆಧಾರಿತ ಕನಿಷ್ಟ ಕೂಲಿಯನ್ನು ಸರಿಯಾಗಿ ನೋಟಿಫೈ ಮಾಡಿ ಅದನ್ನು ಯಶಸ್ವಿಯಾಗಿ ಜ್ಯಾರಿಗೆ ತರುವಂತೆ ಮಾಡಬೇಕಾದರೆ [...] ಅದು ಅಸಂಘಟಿತ ವಲಯದ ಕಾರ್ಮಿಕರನ್ನು [...] ಸಂಘಟಿಸಿ ಬಲಿಷ್ಟ ಹೋರಾಟಗಳನ್ನು ಹರಿಯಬಿಡುವುದರಿಂದ ಮಾತ್ರವೇ ಸಾಧ್ಯ.

ಅಸಂಘಟಿತ ವಲಯದ ಕಾರ್ಮಿಕರ [...] ಹೋರಾಟ ಯಶಸ್ವಿಯಾಗಬೇಕಾದರೆ ಸಂಘಟಿತ [...] ವಲಯದ ಕಾರ್ಮಿಕರು ನೇತೃತ್ವ ನೀಡಬೇಕು. [...] ಅಸಂಘಟಿತರು ತಾವೇ ಸಂಘಟಿತರಾಗಬೇಕೆಂದು [...] ನಿರೀಕ್ಷಿಸಿಕೊಂಡಿರುವುದು ಸರಿಯಲ್ಲ.

ಇದಕ್ಕೆ ಒಂದು ವಿಧಾನವೆಂದರೆ ಸಂಘಟಿತ [...] ಕಾರ್ಮಿಕರು ತಮ್ಮ ಕಾರ್ಖಾನೆ ಆವರಣದಲ್ಲೇ [...] ಅಸಂಘಟಿತರನ್ನು ಸಂಘಟಿಸುವುದು. ಹಲವು ಕಡೆ [...] ಕಾರ್ಮಿಕ ಸಂಘಗಳು ಕೇವಲ ಕಾಯಂ ಕಾರ್ಮಿಕರ [...] ಸಂಘವಷ್ಟೇ ಆಗಿ ಬಿಟ್ಟಿವೆ. ತಮ್ಮಲ್ಲೇ ಇರುವ [...] ಕಾಂಟ್ರಾಕ್ಟ್ ಹಾಗೂ ಕ್ಯಾಶುಯಲ್ ಕಾರ್ಮಿಕರ [...] ದುಸ್ಥಿತಿಯ ಬಗ್ಗೆ ಅವರಿಗೆ ಪರಿವೆಯೇ ಇದ್ದಂತಿಲ್ಲ.

ಕೆಲವು ಕಡೆಯಂತೂ ಈ ರೀತಿ ಕ್ಯಾಶುಯಲ್/ಕಾಂಟ್ರಾಕ್ಟ್ ವ್ಯವಸ್ಥೆ ಇರುವುದೇ ತಮಗೆ [...] ಒಳಿತು ಎಂದು ಕಾಯಂ ಕಾರ್ಮಿಕರ ಸಂಘ[...]ಗಳು ಭಾವಿಸಿದಂತಿದೆ. ಇದರಿಂದ ಉತ್ಪಾ[...]ದನಾ ವೆಚ್ಚ ಕಮ್ಮಿಯಾಗಿಯೇ ಇರುತ್ತದೆ ಹಾಗೂ [...] ತಮ್ಮ ಬೇಡಿಕೆಗಳಿಗೆ ಅದರಿಂದ ಅನುಕೂಲವಾ[...]ಗುತ್ತದೆ ಎಂಬ ಪಟ್ಟಭದ್ರ ಹಿತಾಸಕ್ತಿ ಬೆಳೆದಿದೆ. [...] ಇಂತಹ ಪ್ರವೃತ್ತಿ ತಮ್ಮ ಬೇರನ್ನೇ ಕತ್ತರಿಸುತ್ತದೆ [...] ಎಂಬ ಪ್ರಜ್ಞೆ ಅವರಿಗಿಲ್ಲ. ಸಂಘಟಿತ ಕಾರ್ಮಿ[...]ಕರ ವಿರೋಧ ಕಟ್ಟಿಕೊಂಡರೆ ತಕ್ಷಣದ ಪರಿಣಾಮ[...]ವೆಂದರೆ ಉತ್ಪಾದನೆಗೆ ತೊಡಕು ಎಂದು ತಿಳಿದಿ[...]

ಬುಡಕಟ್ಟು ಸಮಾಜದ ಯೋಚನಾ ಮಾರ್ಗಕ್ಕೆ ಹಿಂತಿರುಗಲು ಇಷ್ಟಪಟ್ಟಿರಲಿಲ್ಲ. ಪುನರುಜ್ಜೀವನ ಚಳುವಳಿಯ ನೇತಾರರು ಮತ್ತು ಚಳುವಳಿಗಾರರು ಪ್ರಾಚೀನ ಬುಡಕಟ್ಟು ಸಮಾಜದಿಂದ ಮುಕ್ತವಾದ ಮತ್ತು ಜಾತಿ ಸಮಾಜದ ನಂತರದ ನವೀನ ಸಮಾಜವನ್ನು ಬಯಸಿದ್ದರು. ಪುನರುಜ್ಜೀವನದ ಬರಹಗಾರರು ಹೊಸ ಸಾಂಸ್ಕೃತಿಕ, ರಾಜಕೀಯ, ಆರ್ಥಿಕ ಮತ್ತು ಸಾಮಾಜಿಕ ಬೆಳವಣಿಗೆಗಾಗಿ ಶ್ರಮಿಸುತ್ತಿದ್ದರು.

ಸ್ವಾಮಿ ವಿವೇಕಾನಂದರು ಭಾರತೀಯ ಸಮಾಜವನ್ನು ವ್ಯಾಖ್ಯಾನಮಾಡುವುದು ಮಾತ್ರವಲ್ಲದೇ ತನ್ನ ವಿಚಾರಗಳಿಗನುಗುಣವಾಗಿ ಭಾರತೀಯ ಸಮಾಜವನ್ನು ಬದಲಾವಣೆ ಮಾಡಲು ಶ್ರಮಿಸಿದ ಪ್ರಜ್ಞಾಶೀಲರೂ, ತತ್ವಜ್ಞಾನಿಯೂ ಆಗಿದ್ದರು. ಆದರೆ ಅವರು ಬುದ್ಧನ ಕನಸಿನ ಕೂಸಾದ ಪ್ರಾಚೀನ ಬುಡಕಟ್ಟು ಸಮಾಜವನ್ನು ಮತ್ತೆ ಸ್ಥಾಪಿಸುವ ಬದಲಾವಣೆಯನ್ನು ಬಯಸದೇ ವಿಜ್ಞಾನ ಪ್ರಧಾನವಾದ ಪ್ರಜಾಪ್ರಭುತ್ವವಾದಿಯಾದ, ಜಾತಿಪದ್ಧತಿಯಿಂದ ಮುಕ್ತವಾದ ನವಭಾರತ ನಿರ್ಮಾಣದ ಕನಸು ಕಂಡಿದ್ದರು. ಶಂಕರರು ಜಾತಿ ಸಮಾಜವನ್ನು ಬಲಪಡಿಸಲು ಬೋಧಿಸಿದ ವೇದಾಂತ ತತ್ವವನ್ನು ವಿವೇಕಾನಂದರು ಜಾತಿ ಸಮಾಜದ ನಿರ್ಮೂಲನಕ್ಕೆ ಜನರನ್ನು ಸಂಘಟಿಸಲು ಉಪಯೋಗಿಸಿಕೊಂಡಿದ್ದರು. ಅವರು "ಶೂದ್ರರ ಆಳ್ವಿಕೆ"ಯ ಸಿದ್ಧಾಂತವನ್ನು [-ಇದು ಕಾರ್ಮಿಕ ವರ್ಗದ ಅಧಿಕಾರದ ಒಂದು ಭಾರತೀಯ (ಹಿಂದೂ) ಅವತರಣಿಕೆ-] ಪ್ರತಿಪಾದಿಸಿದರು.

ತಮ್ಮ ಕಾಲದಲ್ಲಿ ಕೇರಳದಲ್ಲಿ ಉಗ್ರಸ್ವರೂಪದಲ್ಲಿದ್ದ ಜಾತಿ ದಬ್ಬಾಳಿಕೆಯನ್ನು ನೋಡಿ ಅವರು "ಈ ನೆಲ ನೀಚರೂ ಹುಚ್ಚರ ಸಂತೆ" ಎಂದು ಗುಡುಗಿದ್ದರು. ಅವರು ಸಂಪೂರ್ಣ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ಸಮಾನತೆಗೆ ಕರೆಕೊಟ್ಟಿದ್ದರು.

ಇದರರ್ಥ ವಿವೇಕಾನಂದರು ಸಮಾಜವಾದಿ ಅಥವಾ ಮಾರ್ಕ್ಸ್‌ವಾದಿ ಎಂದು ಸೂಚಿಸುತ್ತಿದ್ದೇನೆ ಎಂದಲ್ಲ. ಅವರು ಮಾರ್ಕ್ಸ್‌ನ ಸಿದ್ಧಾಂತಗಳನ್ನು ಬಳಸಿಕೊಂಡಿರಲಿಲ್ಲ ಮತ್ತು ಅದನ್ನು ಅರ್ಥೈಸಿಕೊಂಡಿರಲಿಲ್ಲ. ಅದು ಹೇಗೇ ಇರಲಿ ಅವರೊಬ್ಬ ಪ್ರಜಾಪ್ರಭುತ್ವವಾದಿಯಾಗಿ, ಸಾಮಾಜಿಕ ಬಂಡಾಯಗಾರನಾಗಿ ಭಾರತದ ಸಮಾಜದ ಸಂಪೂರ್ಣ ಪುನರ್‌ನಿರ್ಮಾಣಕ್ಕಾಗಿ ಶ್ರಮಿಸಿದ್ದರು. ಅವರ ಮತ್ತು ಅದೇ ಪೀಳಿಗೆಯ ಅವರ ಸಹಚರರ ಈ ಸತ್ಕಾರ್ಯವು ಮಾರ್ಕ್ಸ್‌ನ ತತ್ವಗಳನ್ನಾಧರಿಸಿದ ಹೊಸ ದುಡಿಯುವ ವರ್ಗ ಮತ್ತು ಸಮಾಜವಾದೀ ಚಳುವಳಿಯ ಉಗಮಕ್ಕೆ ದಾರಿ ಮಾಡಿಕೊಟ್ಟಿತು.

ವಿವೇಕಾನಂದರ ಅನುಯಾಯಿಗಳೆಂದು ತಮ್ಮನ್ನು ಕರೆದುಕೊಳ್ಳುತ್ತಾ ಅವರ ಕ್ರಾಂತಿಕಾರಿ ವಿಚಾರಧಾರೆಯನ್ನು ಮರೆಯ ಬಯಸುವ ಮಂದಿ ಸ್ವಾಮಿ ವಿವೇಕಾನಂದರ ಈ ನಿಜವಾದ ಮಹತ್ವವನ್ನು ಅಲ್ಲಗಳೆಯಲು ಯತ್ನಿಸುತ್ತಿದ್ದಾರೆ.

(ಅನು: ಕೆ.ಎಸ್. ವಿಮಲಾ)

ಕೊಳ್ಳೆಗಾರರ ಹುಕುಂ

ನೆದರ್‌ಲ್ಯಾಂಡಿನ ಪ್ರಧಾನಿ ಲುಬ್ಬರ್ಸ್ ಎನ್ನುವ ಮಹಾಶಯ ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿ ಸಾಮ್ರಾಜ್ಯಶಾಹಿಗಳ ಪರವಾಗಿ ಮಾತನಾಡಿದ. ಭಾರತ ಕೂಡಲೇ ಮಾಡಬೇಕಾದ ಸುಧಾರಣೆಗಳೇನು ಎಂದೂ ಹೇಳುವ ಉದ್ಧಟತನ ತೋರಿದ.

ಆತನ ಮೊದಲ ಸಲಹೆ 'ಕೂಡಲೇ ನಿರ್ಗಮನ ನೀತಿ ತನ್ನಿ' ಎಂದು. ಈಗಾಗಲೇ ಹಲವು ರಿಯಾಯತಿಗಳನ್ನು ಪಡೆದು ನಮ್ಮ ಆರ್ಥಿಕದೊಳಗೆ ತೂರಿ ಶೋಷಣಾತ್ಮಕ ಪ್ರಕ್ರಿಯೆಗಳ ಸರಪಣಿಯನ್ನೇ ಹೆಣೆಯುತ್ತಿರುವ ವಿದೇಶಿ ಬಂಡವಾಳಿಗರಿಗೆ ಇದು ಅತ್ಯಂತ ಮುಖ್ಯವಾದದ್ದು. ಯಾಕೆಂದರೆ ಕಡಿಮೆ ಜನಬಲ ಬಳಸಿ ಅತ್ಯಾಧುನಿಕ ತಂತ್ರಜ್ಞಾನದಿಂದ ಅದು ಅವರ ಲಾಭವನ್ನು ಹೆಚ್ಚಿಸುತ್ತದೆ. ಇದನ್ನು ಸಾಧಿಸಲು ಈ ನಿರ್ಗಮನ ನೀತಿ ಬೇಕು. ನಿರ್ಗಮನ ನೀತಿಯೆಂದರೆ ಕಾರ್ಮಿಕರನ್ನು ಮನಸೋಇಚ್ಛೆ ಮನೆಗೆ ಕಳುಹಿಸುವ ಲೈಸೆನ್ಸ್ ಇದನ್ನೇ ಈ ಪ್ರಧಾನಿ ಮಂತ್ರಿ ಒಡೆದು ಹೇಳಿದ್ದಾನೆ.

ಇದಲ್ಲದೆ ವಿದೇಶಿಯರ ಜೊತೆ ಜಂಟಿ ಪ್ರಯತ್ನಗಳಿಗೆ ಎಲ್ಲ ತರಹದ ಪ್ರೋತ್ಸಾಹವನ್ನೂ ನೀಡಬೇಕಂತೆ. ಈ ಸುಧಾರಣೆಗಳಿಂದ ಭಾರತ ಎಂತಹ ಬೆಲೆ ತೆರಬೇಕಾಗಿ ಬಂದರೂ ಪರವಾಗಿಲ್ಲ. ವಿದೇಶೀ ಬಂಡವಾಳಿಗರಿಗೆ ಮಾತ್ರ ಅವರ ಲಾಭ ಮುಖ್ಯ. ಹೇಗಿದೆ ಹುಕುಂ!

ಹಣಕಾಸು ವಲಯದ ಸುಧಾರಣೆ ಮೊದಲ ಪ್ರಯತ್ನದಲ್ಲೇ ನೋವು

ಬ್ಯಾಂಕಿಂಗ್ ವಲಯದ ಸುಧಾರಣೆ ಆ ವಲಯಕ್ಕೆ ಒಳ್ಳೆಯದು ಎಂದು ನಂಬುವ ಕೆಲವು ಬ್ಯಾಂಕ್ ನೌಕರರೂ ಇದ್ದಾರೆ. ಆದರೆ ಇಂತಹ ಪ್ರಯತ್ನಗಳು ಎಂತಹ ನೋವು ನೀಡಬಲ್ಲದು ಎಂಬುದು ಕೆಲವರ ಅನುಭವಕ್ಕಾದರೂ ಈಗ ಬಂದಿದೆ.

ಸರ್ಕಾರ ಹಾನಿ ಅನುಭವಿಸುತ್ತಿದ್ದ ನ್ಯೂ ಬ್ಯಾಂಕ್ ಆಫ್ ಇಂಡಿಯಾವನ್ನು ಪಂಜಾಬ್ ನ್ಯಾಶನಲ್ ಬ್ಯಾಂಕಿನಲ್ಲಿ ವಿಲೀನಗೊಳಿಸಿತು. ನರಸಿಂಹಮ್ ಸಮಿತಿಯ ಶಿಫಾರಸ್ಸುಗಳಿಗೆ ಅನುಗುಣವಾಗಿತ್ತು ಈ ಕ್ರಮ.

ಆದರೆ ನ್ಯೂ ಬ್ಯಾಂಕ್ ಆಫ್ ಇಂಡಿಯಾದ ನೌಕರರಿಗೆ ಇದು ನರಕ ಸದೃಶ್ಯ ವೇದನೆಯನ್ನು ನೀಡಿದೆ. ಈ ನೌಕರರನ್ನು ಒಂದು ಮೂಲೆಯಿಂದ ಇನ್ನೊಂದು ಮೂಲೆಗೆ ವರ್ಗಾಯಿಸಲಾಯಿತು. ತಮ್ಮ ತಮ್ಮ ಸ್ಥಳಗಳಿಗೆ ಹೋಗಿ ಸೇರಿಕೊಳ್ಳಲು ಸಾಕಷ್ಟು ಸಮಯಾವಕಾಶವನ್ನೂ ನೀಡಲಿಲ್ಲ. ತಮ್ಮ ಸಾಮಾನು ಸರಂಜಾಮುಗಳನ್ನು ಸಾಗಿಸಲು ಅಡ್ವಾನ್ಸನ್ನು ಸಹ ನೀಡಲಿಲ್ಲ. ಒಟ್ಟಿನಲ್ಲಿ ಹೇಳುವುದಾದರೆ ಸಿಕ್ಕಿಕೊಂಡ ಕಳ್ಳರನ್ನು ನೋಡುವಂತೆ ಇವರನ್ನು ನೋಡಿಕೊಳ್ಳಲಾಯಿತು.

ಆದರೆ ವಿಷಯ ಅಲ್ಲಿಗೇ ಮುಗಿಯುವುದು ಸಾಧ್ಯವಿಲ್ಲವಲ್ಲ. ಹಿಂದಿನ ನ್ಯೂಬ್ಯಾಂಕ್ ಆಫ್ ಇಂಡಿಯಾದ ನೌಕರರು ಪ್ರತಿಭಟಿಸಿದರು. ಈ ನೋವನ್ನು ಕಂಡ ಇತರ ಸಂಘಟನೆಗಳೂ ಎಚ್ಚೆತ್ತು ಕೊಂಡವು. ಈ ತೀವ್ರ ಪ್ರತಿಭಟನೆಯಿಂದ ಸರ್ಕಾರಕ್ಕೂ ಬಿಸಿ ತಟ್ಟಿತು. ಸರ್ಕಾರ ಇತರೆ ಬ್ಯಾಂಕುಗಳ ವಿಲೀನ ಸದ್ಯಕ್ಕಂತೂ ಇಲ್ಲ ಎಂದು ಹೇಳಿಕೆ ನೀಡಿದೆ. ಆದರೆ ಬ್ಯಾಂಕ್ ನೌಕರರು/ವಿಮಾ ನೌಕರರು ನೆನಪಿಡಬೇಕಾದದ್ದು : ಅವರ ತಲೆಯ ಮೇಲೆ ಸುಧಾರಣೆಯೆಂಬ ಕತ್ತಿ ತೂಗಾಡುತ್ತಿದೆ.

ಉದಾರೀಕರಣ ವಿಷವುಂಡ ಕಾಮಧೇನುಗಳು

ದೇಶದ ಆರ್ಥಿಕದ ಬೆನ್ನೆಲುಬುಗಳಾದ ಸಾರ್ವಜನಿಕ ಉದ್ದಿಮೆಗಳು ಈಗ ಉದಾರೀಕರಣವೆಂಬ ವಿಷವುಂಡು ನೀಲಿ ಬಣ್ಣಕ್ಕೆ ತಿರುಗುತ್ತಿವೆ.

ಉದಾರೀಕರಣದ ಹೆಸರಿನಲ್ಲಿ ಬಹುರಾಷ್ಟ್ರೀಯ ಕಂಪನಿಗಳಿಗೆ ಬಾಗಿಲು ತೆರೆದಂದಿನಿಂದ ಈ ಸಾರ್ವಜನಿಕ ವಲಯದ ಉದ್ದಿಮೆಗಳ ವ್ಯವಹಾರ ಕುಂದುತ್ತಿದೆ. ತಮಗೆ ಮಾತ್ರ ಮೀಸಲಾಗಿದ್ದ ಈ ವ್ಯವಹಾರಗಳನ್ನು ಈಗ ಬಹುರಾಷ್ಟ್ರೀಯ ಕಂಪನಿಗಳು ಕಬಳಿಸುತ್ತಿರುವುದನ್ನು ಈ ಉದ್ದಿಮೆಗಳು ನೋಡುತ್ತಾ ಇರಬೇಕಾಗಿದೆ.

ಒಂದು ಸಮೀಕ್ಷೆಯ ಪ್ರಕಾರ 1992-93 ರಲ್ಲೇ ಈ ಬೆಳವಣಿಗೆ ಕಾಣಿಸಿಕೊಳ್ಳಲು ಪ್ರಾರಂಭವಾಯಿತು. 1991-92 ರಲ್ಲಿ ತೀವ್ರಗತಿಯ ಉದಾರೀಕರಣ ಪ್ರಾರಂಭವಾಯಿತು (ಪ್ರಧಾನಿ ನರಸಿಂಹರಾಯರು ಅಧಿಕಾರಕ್ಕೆ ಬರುವುದರೊಂದಿಗೆ ಎಂಬುದನ್ನು ನಾವು ಇಲ್ಲಿ ನೆನಪಿಸಿಕೊಳ್ಳಬಹುದು.) ಬಿ.ಹೆಚ್.ಇ.ಎಲ್., ಬಿ.ಇ.ಎಮ್.ಎಲ್.ಗಳಿಗೆ ಈಗ ಮೊದಲಿನಷ್ಟು ಆರ್ಡರ್‌ಗಳೇ ಬರುವುದಿಲ್ಲ.

ಬಹುಶಃ ಕೆಲವೇ ದಿನಗಳಲ್ಲಿ ಈ ಉದ್ದಿಮೆಗಳು ಸಾಯುತ್ತವೆ. ಸಾವಿರ ಸಾವಿರ ಜನ ಬೀದಿಪಾಲಾಗುತ್ತಾರೆ. ಆಗ ಸರ್ಕಾರ ನಮ್ಮ ಆರ್ಥಿಕ ಅತೀ ಹೆಚ್ಚಿನ ಚೈತನ್ಯ ತುಂಬಿ ಕೊಂಡಿದೆ ಎನ್ನಬಹುದೇನೊ ಅಲ್ಲವೇ?

ಸುದರ್‌ಲ್ಯಾಂಡ್ ಎಂಬ ಭಾರತದ ಸರ್ಕಾರದ ಅಂತರ್‌ರಾಷ್ಟ್ರೀಯ ವಕೀಲ

ಡಂಕೆಲ್ ಪ್ರಸ್ತಾವಗಳೆಂಬ ಸಾಮ್ರಾಜ್ಯಶಾಹಿಗಳ ಪ್ರಸ್ತಾಪಗಳನ್ನು ನಮ್ಮ ಮುಂದಿಟ್ಟ ಡಂಕೆಲ್ ಮಹಾಶಯನ ಉತ್ತರಾಧಿಕಾರಿ ಪೀಟರ್ ಸುದರ್ ಲ್ಯಾಂಡ್ ಇತ್ತೀಚೆಗೆ ಭಾರತಕ್ಕೆ ಭೇಟಿ ನೀಡಿದ. ವಿಮಾನ ನಿಲ್ದಾಣದಲ್ಲೇ ಪ್ರತಿಭಟನೆಯ ಕೂಗಿಗೆ ಈಡಾದ ಈತ ಭಾರತದ ಸರ್ಕಾರದ ನೆರವಿಗೆ ಬಂದ ಎಂಬುದು ಈಗ ಎಲ್ಲರಿಗೂ ಗೊತ್ತಾಗಿರುವ ವಿಷಯ.

ಡಂಕೆಲ್ ಪ್ರಸ್ತಾಪಗಳು ಭಾರತಕ್ಕೆ ಒಳ್ಳೆಯದು. ಭಾರತವನ್ನು ಕೆಲವರು ತಿಳಿದಂತೆ ಈ ಪ್ರಸ್ತಾಪಗಳಲ್ಲಿ ಅಪಾಯಕಾರಿಯಾದದ್ದೇನೂ ಇಲ್ಲ ಎಂದೆಲ್ಲ ಸುಳ್ಳುಗಳನ್ನು ಈತ ಹೇಳಿ ಜನರನ್ನು ನಂಬಿಸಲು ಪ್ರಯತ್ನಿಸಿದ. ಆದರೆ ಜನ ನಂಬುವುದಿಲ್ಲ. ಯಾಕೆಂದರೆ ಆತ ಮತ್ತು ನಮ್ಮ ಸರ್ಕಾರ ಹೇಳುವುದಕ್ಕೆ ವಿರುದ್ಧವಾದದ್ದೇ ಜನರ ಅನುಭವಕ್ಕೆ ಬರುತ್ತಿರುವುದು.



ಆದರೂ ಈ ಪೀಟರ್ ಸುದರ್ ಲ್ಯಾಂಡ್ ಭಾರತ ಸರ್ಕಾರದ ಪರ ಮಾಡಿರುವ ವಕೀಲಿ ಹೇಗಿದೆ?

ಕೋಕಾ ಕೋಲ ಎಂಬ ಕೊಳ್ಳೆಗಾರ

ಕೋಕಾ ಕೋಲ ಎಂಬುದು ಬಹಳ ದೊಡ್ಡ ಅಮೇರಿಕ ದೇಶದ ಬಹುರಾಷ್ಟ್ರೀಯ ಕಂಪನಿ. ಈ ಕಂಪನಿ ಹಿಂದೆ ಭಾರತದೊಳಕ್ಕೆ ಬಂದು ಸಾಕಷ್ಟು ಕೊಳ್ಳೆ ಹೊಡೆದಿತ್ತು. ಆದರೆ ಎಪ್ಪತ್ತರ ದಶಕದಲ್ಲಿ ಜನತಾ ಸರ್ಕಾರದ ಕಾಲದಲ್ಲಿ ಇದನ್ನು ಹೊರ ಹಾಕಲಾಗಿತ್ತು. ಈಗ ಅದು ಮತ್ತೆ ಬಂದಿದೆ. ಬರುತ್ತಲೇ ಇಲ್ಲಿನ ದೇಸೀ ಪಾನೀಯ ಕಂಪನಿಯಾದ ಪಾರ್ಲೆ ಎಂಬ ಕಂಪನಿಯನ್ನು ಅದು ನುಂಗಿ ಹಾಕಿದೆ.

ಈಗ ಆಗ್ರಾದ ಹತ್ತಿರ ಅದು ತನ್ನ ಕಾರ್ಖಾನೆಯೊಂದನ್ನು ಸ್ಥಾಪಿಸಿದೆ. ನಮ್ಮದೇ ಸಕ್ಕರೆ, ನಮ್ಮದೇ ನೀರನ್ನು ಅಮೇರಿಕದ ಒಂದು ಪುಡಿಯ ಜೊತೆಗೆ ಸೇರಿಸಿ ಕೋಟಿಗಟ್ಟಲೇ ರೂಪಾಯಿಗಳ ಲಾಭವನ್ನು ಇದು ಹೊಡೆಯಲಿದೆ. ಅಷ್ಟೇ ಅಲ್ಲ ಈ ದೇಶದ ಆರ್ಥಿಕದಲ್ಲಿ ಕೈಯ್ಯಾಡಿಸಿ ಅಲ್ಲೋಲ ಕಲ್ಲೋಲ ತರಲಿದೆ.

ಶೇರು ದಲ್ಲಾಳಿಗಳ ಬೇನಾಮಿ ಕಂಪನಿಗಳು

ಶೇರು ಹಗರಣದಲ್ಲಿ ಪಾತ್ರವಿದ್ದ ಹಲವು ದಲ್ಲಾಳಿಗಳ ಶೇರುಗಳನ್ನು ಕಳಂಕಿತ ಶೇರುಗಳೆಂದು ವಿಶೇಷ ನ್ಯಾಯಾಲಯ ಘೋಷಿಸಿ ಅವುಗಳ ವ್ಯಾಪಾರವನ್ನು ನಿಷೇಧಿಸಿತ್ತು. ಆದರೆ ಈ ದಲ್ಲಾಳಿಗಳು 300 ಕ್ಕೂ ಹೆಚ್ಚು ಬೇನಾಮಿ ಕಂಪನಿಗಳನ್ನು ಹುಟ್ಟಿಹಾಕಿ ಈ ಶೇರುಗಳ ವ್ಯವಹಾರ ನಡೆಸಲು ಪ್ರಯತ್ನಿಸಿದ್ದಾರೆ. ಈಗ ಆದಾಯ ತೆರಿಗೆ ಇಲಾಖೆಯ ವಿಚಾರಣೆಯಲ್ಲಿ ಹೊರಬಂದಿರುವ ಈ ವಿಷಯ ನಿಜಕ್ಕೂ ನಮ್ಮ ಕಾನೂನುಗಳು ಎಷ್ಟು ದುರ್ಬಲವೆಂದು ತೋರುತ್ತಿವೆ.

ಈ ಕಾನೂನುಗಳನ್ನು ಮುರಿಯಲು ಎಲ್ಲ ಬಂಡವಾಳಿಗರೂ ಬೇನಾಮಿ ಕಂಪನಿಗಳನ್ನು ಹುಟ್ಟಿಹಾಕಿ ಆದಾಯ ತೆರಿಗೆ ತಪ್ಪಿಸುತ್ತಿರುವುದು ಈಗ ಹೊಸ ವಿಷಯವೇನಲ್ಲ.

ಹಗರಣದೊಳಗೆ ಹಗರಣವಲ್ಲವೆ ಇದು?

...ದ್ಧಿವಂತ ಮಾಲಕರು ಆ ರೀತಿ ವಿರೋಧ ...ಸ್ಪುವುದಿಲ್ಲ, ಆದರೆ ಅವರು ಸಂಘಟಿತ ...ರ ಸಂಖ್ಯೆ ಬೆಳೆಯದಂತೆ ನೋಡಿಕೊಳ್ಳು ...ಸ್ವಾಭಾವಿಕ ಕಾರಣಗಳಿಂದ ತೆರವಾಗುವ ...ನ್ನು ತುಂಬದೇ ಕೆಲಸವನ್ನು ಹೆಚ್ಚೆಚ್ಚಾಗಿ ...ಸ್ಟ್ ಕ್ಯಾಶುವಲ್ ಕಾರ್ಮಿಕರ ಮೂಲಕ ...ತ್ತಾರೆ. ಹೋರಾಟದ ಪರಿಸ್ಥಿತಿ ಬಂದಾಗ ...ಮಾಲಕರುಗಳಿಗೆ ಅನುಕೂಲಕರವಾಗು...

...ಸಂಘಟಿತರನ್ನು ಸಂಘಟಿಸದೇ ಇದ್ದರೆ ...ತ ಕಾರ್ಮಿಕರು ತಮ್ಮ ಸಂಘಟನೆಯನ್ನು ...ಧನೆಗಳನ್ನು ಉಳಿಸಿ ಕೊಳ್ಳುವುದು ಸಾಧ್ಯ...

...ನ್ನು ಕೆಲವು ಸಂದರ್ಭಗಳಲ್ಲಿ ಮಧ್ಯಮ ... ಸಣ್ಣ ಪ್ರಮಾಣದ ಉದ್ದಿಮೆಗಳಲ್ಲಿ ...ಯನ್ ಸೇರಿ ತಮ್ಮ ವೇತನ ಮಟ್ಟ ಏರಿ ...ಹಲವು ರಿಯಾಯ್ತಿಗಳನ್ನು ಪಡೆಯಲು ...ದ ಮೇಲೆ ಕಾರ್ಮಿಕ ಆಂದೋಲನದ ...ನ್ನೇ ತ್ಯಜಿಸಿ ಬಿಡುತ್ತಾರೆ. ಯಶಸ್ಸು ಪಡೆದು ...ಯ ತಮ್ಮ ಮಟ್ಟವನ್ನು ಕಾದುಕೊಂಡು ...ಅಸಂಘಟಿತರಾಗುವ ಹಲವು ಉದಾಹ...ವೆ. ಹಲವು ಬಾರಿ ಮಾಲಕರು ಕ್ಲೋಶರ್ ...ಮಾಡಿ ಇಂತಹ ಸಂಘಟಿತ ಕಾರ್ಮಿಕ ...ರಹಾಕಿ ಹೊಸ ಕಾರ್ಮಿಕರನ್ನು ಕೆಲಸಕ್ಕೆ ...ಳ್ಳುತ್ತಾರೆ. ಸಣ್ಣ ಮತ್ತು ಮಧ್ಯಮ ಪ್ರಮಾ...ರ್ಮಿಕರು ತಂತಮ್ಮ ಘಟಕಗಳಿಗೆ ಸೀಮಿತ ...ಹೋರಾಟ ಆರಂಭಿಸಿದ ಸೋತ ಸಂದರ್ಭ...ಗಳು ಮೊದಲು ಗೆದ್ದ ನಂತರ ಅಸಂಘಟಿತರಾದ ಉದಾಹರಣೆಗಳಿಗಿಂತ ಹೆಚ್ಚು. ಒಂದು ಘಟಕದ ಆಧಾರದ ಮೇಲೆ ಯೂನಿಯನ್ ರಚಿಸಿಕೊಳ್ಳದೆ ಕೈಗಾರಿಕೆ ಅಥವಾ ಪ್ರಾದೇಶಿಕ ಆಧಾರದ ಮೇಲೆ ಸಂಘಟನೆಗಳನ್ನು ಬೆಳೆಸಿದರೆ ಗೆಲುವಿನ ಸಾಧ್ಯತೆ ಹೆಚ್ಚು. ಏಕೆಂದರೆ ಬೇಡಿಕೆಗಳೇ ಇಲ್ಲಿ ಭಿನ್ನವಾಗಿರುತ್ತದೆ.

ಕನಿಷ್ಠ ಕೂಲಿಗಾಗಿ ಹೋರಾಟ

ಒಂದು ವಿಧಾನವೆಂದರೆ ಒಂದು ವಿಶಾಲ ಪ್ರದೇಶದ ಕಾರ್ಮಿಕರನ್ನು ಸರಕಾರ ಆಗಾಗ ನೋಟಿಫೈ ಮಾಡಲು ಕನಿಷ್ಠ ಕೂಲಿಗಾಗಿ ಹೋರಾಟ ನಡೆಸಲು ಸಂಘಟಿಸುವುದು. ಸಂಘಟಿತವಲಯದ ಮುಂದಾಳುಗಳು ಮತ್ತು ಕಾರ್ಯಕರ್ತರು ದಿನನಿತ್ಯ ಈ ಕೆಲಸಕ್ಕೆ ಇಳಿಯದೆ ಬೇರೆ ಮಾರ್ಗವಿಲ್ಲ

ಒಂದು ದಶಕಕ್ಕಿಂತಲೂ ಹೆಚ್ಚು ಕಾಲದಿಂದ ನಾವು ಕರ್ನಾಟಕದಲ್ಲಿ ಈ ವಿಧಾನ ಅನುಸರಿಸಬೇಕೆಂದು ಪ್ರತಿಪಾದಿಸುತ್ತಾ ಬಂದಿದ್ದೇವೆ. ಒಂದು ನಿರ್ದಿಷ್ಟ ವರ್ಗದ ಎಲ್ಲಾ ಸಂಸ್ಥೆಗಳನ್ನು ಒಳಗೊಳ್ಳುವಂತೆ ನಾವು ನಡೆಸಿದ ಒಂದು ಸಾರ್ವತ್ರಿಕ ಹೋರಾಟವೆಂದರೆ 1979 ರಲ್ಲಿ ಬೆಂಗಳೂರು ನಗರದಲ್ಲಿ ಮಾಂಸಾಹಾರಿ ಹೋಟೇಲುಗಳ ಕಾರ್ಮಿಕರ ಹೋರಾಟ. ಸುಮಾರು ಒಂದು ವರ್ಷದಲ್ಲಿ ಒಂದು ನೂರಕ್ಕು ಹೆಚ್ಚು ಹೋಟೆಲುಗಳ ಕಾರ್ಮಿಕರನ್ನು ಸಂಘಟಿಸಲು 1979ರ ಮೇ ದಿನದಂದು ಒಂದು ಬಲಿಷ್ಠ ಮುಷ್ಕರ ನಡೆಸಲು ಸಾಧ್ಯವಾಯಿತು. ಆ ದಿನ ನಗರದಲ್ಲಿ ಒಂದೇ ಒಂದು ಮಾಂಸಾಹಾರಿ ಹೊಟೇಲೂ ತೆರೆಯಲಿಲ್ಲ. ಮಾಲಕರೆಲ್ಲಾ ಒಂದಾಗಿ ಮತ್ತೆ ಮೂರು ದಿನ ಈ ಹೋಟೇಲುಗಳಲ್ಲಿ ಲಾಕೌಟ್ ಮಾಡಿದರು. ಮತ್ತೆ ನಾವು ಗೆಲುವು ಕಂಡೆವು. ಈ ಗೆಲುವುಗಳ ನಂತರ ನಾವೇ ಸಹಿ ಮಾಡಿದ ಒಪ್ಪಂದವನ್ನು ನಾವೇ ಬಿಟ್ಟುಬಿಡಬೇಕಾದ ಒತ್ತಡ ಬಂತು. ಅದರ ಬೆನ್ನ ಹಿಂದೆಯೇ ಒಂದಷ್ಟು ಲಾಕೌಟುಗಳು, ಕ್ಲೋಶರುಗಳು ನಡೆದವು. ಆದರೂ ಆಗ ನಾವು ಕಟ್ಟಿದ ಯೂನಿಯನ್ ಉಳಿದುಕೊಂಡಿತು. ಈಗಲೂ ಅದು ಬೆಂಗಳೂರಿನ ಹೋಟೆಲ್ ಕಾರ್ಮಿಕರ ಅತೀ ದೊಡ್ಡ ಸಂಘವಾಗುಳಿದಿದೆ. ಈಗ ಅದರ ಸ್ವರೂಪವೂ ಬದಲಾಗಿದೆ. ಅದೀಗ ಕೇವಲ ಮಾಂಸಾಹಾರಿ ಹೋಟೆಲುಗಳಿಗೇ ಸೀಮಿತವಾಗಿಲ್ಲ.

ರಾಜ್ಯದ ಇತರೆಡೆಗೆ ಹೋಲಿಸಿದಾಗ ದಕ್ಷಿಣ ಕನ್ನಡ ಜಿಲ್ಲೆಯ ಬೀಡಿ ಕಾರ್ಮಿಕರ ಹೋರಾಟದ ಯಶಸ್ಸು ಎಲ್ಲರ ಕಣ್ಣ ಮುಂದಿದೆ. ಅದೇ ರೀತಿ ಅಲ್ಲಿಯ ಹೆಂಚು ಕಾರ್ಮಿಕರ, ಇತರ ಕೆಲವು ಉದ್ದಿಮೆಗಳ ಕಾರ್ಮಿಕರ ಹೋರಾಟಗಳ ಯಶಸ್ಸು ಕಂಡೆವು.

ದಿಲ್ಲಿ ಹೋರಾಟದ ಯಶಸ್ಸಿನ ನಂತರ ಅಸಂಘಟಿತ ಕಾರ್ಮಿಕರ ಹೋರಾಟವನ್ನು ಸಿಐಟಿಯು ಗಂಭೀರವಾಗಿ ಎತ್ತಿಕೊಂಡಿದೆ. ದಿಲ್ಲಿಯಲ್ಲಿ 1988 ರಲ್ಲಿ 14 ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಒಂದು ವಾರದ ಮುಷ್ಕರ ನಡೆಸಿದರು. 1050 ರೂ ಕನಿಷ್ಠ ಕೂಲಿ ನಿಗದಿಯಾಗಬೇಕು ಎಂಬುದು ಆಗಿನ ಬೇಡಿಕೆಯಾಗಿತ್ತು. ತಮ್ಮ ಹೋರಾಟದಿಂದ ಅವರು 750 ರೂ. ಕನಿಷ್ಠ ವೇತನ ಸಾಧಿಸಿದರು. ಸದ್ಯಕ್ಕೆ ದಿಲ್ಲಿ ಆಡಳಿತ 1,272 ಪಾಯಿಂಟುಗಳ ಗ್ರಾಹಕ ಬೆಲೆ ಸೂಚ್ಯಂಕದಲ್ಲಿ 1,272 ರೂ. ಕನಿಷ್ಠ ಕೂಲಿಯನ್ನು ನೋಟಿಫೈ ಮಾಡಿದೆ. ಪ್ರತಿ ಪಾಯಿಂಟ್ ಏರಿಕೆಗೆ ರೂ. 1.30 ತುಟ್ಟಿಭತ್ಯೆ ನೀಡುವುದಾಗಿ ಸೂಚಿಸಿದೆ. ಯೂನಿಯನ್‌ಗಳು ಇನ್ನೂ ಹೆಚ್ಚಿನ ಕೂಲಿ ಪಡೆಯಲು ಹೋರಾಡುತ್ತಿವೆ.

ದಿಲ್ಲಿಯ ಈ ಹೋರಾಟದ ಪ್ರಯೋಜನವನ್ನು ಪಂಜಾಬ್, ಹರ್‍ಯಾಣ ಹಾಗೂ ಉತ್ತರಪ್ರದೇಶದ ಕಾರ್ಮಿಕರೂ ಪಡೆದುಕೊಳ್ಳಲು ಸಾಧ್ಯವಾಯಿತು. ಅವರಿಗೆಲ್ಲಾ ಇಂದು ಕನಿಷ್ಠ ಕೂಲಿ ಒಂದು ಸಾವಿರಕ್ಕೂ ಮೇಲಿದೆ. ಹರ್‍ಯಾಣದಲ್ಲಿ 1989 ರಲ್ಲೇ 800 ರೂ. ಕನಿಷ್ಠ ಕೂಲಿ ನಿಗದಿಯಾಯಿತು. ಪಂಜಾಬಿನಲ್ಲಿ ಇಟ್ಟಿಗೆ ಗೂಡು ಕಾರ್ಮಿಕರು ಈಗ ಸುಸಂಘಟಿತರಾಗಿದ್ದಾರೆ. ಅವರ ಸಂಘದ ಪ್ರತಿನಿಧಿ ಈಗ ಸಿಪಿಐ(ಎಂ) ಪ್ರತಿನಿಧಿಸುವ ಎಂ.ಎಲ್.ಎ. ಆಗಿದ್ದಾರೆ.

ಸಿ.ಐ.ಟಿ.ಯು ಮುತುವರ್ಜಿಯಿಂದ ಪಶ್ಚಿಮಬಂಗಾಳದಲ್ಲಿ ಪಣಿಹಟ್ಟಿಯಲ್ಲಿ ಅಸಂಘಟಿತ ಕಾರ್ಮಿಕರ ಅಖಿಲ ಭಾರತ ಸಮಾವೇಶ ನಡೆಯಿತು. ಆ ಸಮಾವೇಶ ಕರೆ ನೀಡಿದ ಹೋರಾಟದ ಕರೆಯ ಫಲವಾಗಿ ಜುಲೈ 14, 1993 ರಂದು ಅಸಂಘಟಿತ ಕಾರ್ಮಿಕರ ದೇಶವ್ಯಾಪಿ ಮುಷ್ಕರ ನಡೆಯಿತು. ಅಸಂಘಟಿತ ವಲಯದ ಕಾರ್ಮಿಕರ ಶೋಚನೀಯ ಸ್ಥಿತಿಯ ಬಗ್ಗೆ ಲೋಕಸಭಾ ಅಧ್ಯಕ್ಷರಿಗೆ ಒಂದು ಮನವಿ ಪತ್ರವನ್ನು ಸಲ್ಲಿಸಲೂ ನಮಗೆ ಸಾಧ್ಯವಾಯಿತು. ನಮ್ಮ ರಾಜ್ಯದಲ್ಲೂ ದಿಲ್ಲಿ ಮುಷ್ಕರದ ಮೊದಲೇ 1988 ರ ಆಗಸ್ಟ್ 28 ರಿಂದ 30 ರವರೆಗೆ ಮೂರು ದಿನಗಳ ಮುಷ್ಕರ ನಾವು ಸಂಘಟಿಸಿದ್ದೆವು. ಈ ವರ್ಷ ಮಾರ್ಚ್ 15 ರಂದು ಒಂದು ಯಶಸ್ವೀ ಮುಷ್ಕರ ಸಂಘಟಿಸಿದೆವು. ನಂತರ ದೇಶವ್ಯಾಪಿ ಮುಷ್ಕರವನ್ನು ರಾಜ್ಯದಲ್ಲೂ ನಡೆದು ಅದರಲ್ಲಿ ನಮ್ಮ ರಾಜ್ಯದಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಕಾರ್ಮಿಕರು ಭಾಗವಹಿಸಿದರು.

ಈಗ ಸಂಘ [illegible] ಎಲ್ಲ [illegible] ರಾಜ್ಯದ ಎಲ್ಲಾ ಅಸಂಘಟಿತ [illegible] ಬೇಡಿಕೆಗಳಿಗೆ [illegible] ಗೊಟ್ಟು ಎಲ್ಲರಿಗೂ [illegible] ಸರಿಯಾದ ವೇತನ ಮಟ್ಟ ಸಿಗುವಂತೆ [illegible] ಒತ್ತಡ ತರುವ ಒಂದು [illegible] ನಡೆಸಲು ನಿರ್ಧರಿಸಿದ್ದೇವೆ. ನವೆಂಬರ್ [illegible] ರ ಕೊನೆಯ ವಾರದಲ್ಲಿ ಹೋರಾಟ [illegible]ಲಿದೆ.



ಪಶ್ಚಿಮ ಬಂಗಾಳ : ಬೆಲೆಯೇರಿಕೆ ವಿರುದ್ಧ ಎಡರಂಗ ಆಂದೋಲನ

ಕೇಂದ್ರ ಸರಕಾರದ ಆರ್ಥಿಕ ನೀತಿ ಬೆಲೆಗಳ ಮೇಲೆ ಕೆಟ್ಟ ಪರಿಣಾಮ ಬೀರಿರುವುದು ಎಲ್ಲರ ಅನುಭವಕ್ಕೆ ಬಂದಿರುವ ಅಂಶ. ಅವಶ್ಯಕ ಸಾಮಾಗ್ರಿಗಳ ಬೆಲೆಗಳು ಕಳೆದ ಕೆಲವು ತಿಂಗಳುಗಳಲ್ಲಿ ಏರಿದೆ. ಪೆಟ್ರೋಲ್, ಡೀಸೆಲ್ ಮತ್ತು ಆಟೋಮೊಬೈಲ್ ಬಿಡಿಭಾಗಗಳ ಬೆಲೆಗಳೂ ಏರಿವೆ. ಇದರ ಜತೆಗೆ ಸಾರಿಗೆದಾರರ ಮುಷ್ಕರವನ್ನು ಅವಕಾಶವನ್ನಾಗಿ ಬಳಸಿಕೊಂಡ ಭ್ರಷ್ಟ ವರ್ತಕರು ಬೆಲೆಗಳನ್ನು ಇನ್ನಷ್ಟು ಹೆಚ್ಚಿಸಿದ್ದಾರೆ.

[illegible] ಪಶ್ಚಿಮ ಬಂಗಾಳದ ಎಡರಂಗ ಹೋರಾಟದ [illegible] 17 ರಂದು [illegible] ನಿಗಮವನ್ನು (ಕೆ.ಎಸ್.ಆರ್.ಟಿ.ಸಿ.) ಬರ್ಖಾಸ್ತುಗೊಳಿಸಿ ಅದನ್ನು ಕಂಪೆನಿಯನ್ನಾಗಿ ಪರಿವರ್ತಿಸಲಾಗುವುದೆಂದು ಕೇರಳದ ಸಾರಿಗೆ ಸಚಿವರು ಹೇಳಿದ್ದಾರೆ. ಇದು ಆ ರಾಜ್ಯದ ಸರಕಾರದ ನೀತಿಗೆ ಸಂಬಂಧವಾದ ಒಂದು ಹೇಳಿಕೆಯಾಗಿರದೆ ಬೆದರಿಕೆಯಾಗಿದೆ ಎಂದು ಪರಿಗಣಿಸಬೇಕಾಗಿದೆ.

ಇದಕ್ಕೆ ಕಾರಣವೂ ಇದೆ. ಹಲವು ಬೇಡಿಕೆಗಳನ್ನು ಮುಂದಿಟ್ಟುಕೊಂಡು ನಿಗಮದ ನೌಕರರು ಪಕ್ಷ-ಸಂಘಟನೆ ಭೇದ ಮರೆತು ಹೋರಾಟ ನಿರತರಾಗಿದ್ದಾಗ ಸಚಿವರು ಈ ಹೇಳಿಗೆ ನೀಡಿದ್ದಾರೆ. ಇದು ಕೇರಳದ ಕಾರ್ಮಿಕ ವರ್ಗಕ್ಕೆ ಸರಕಾರದ ಒಡ್ಡಿದ ಸವಾಲಾಗಿದೆ.

ಅಕ್ಟೋಬರ್ 25 ರಿಂದ ಮುಷ್ಕರ ನಡೆಸುವಂತೆ ಸಿಐಟಿಯು ಐಟಿಕ್, ಯು.ಟಿ.ಯು.ಸಿ. ಮತ್ತಿತರ ಸಂಘಟನೆಗಳನ್ನೊಳಗೊಂಡ ಜಂಟಿ ಕ್ರಿಯಾಸಮಿತಿ ಕರೆ ನೀಡಿತ್ತು. ಸಿಪಿಐ(ಎಂ)ನ ಮಾಜಿ ಶಾಸಕ ಜಿ. ಭರತನ್ ಈ ಸಮಿತಿಯ ಸಂಚಾಲಕರು. ಇಂಟಕ್ ನೇತೃತ್ವದ ಸಂಘಟನೆ ಕೂಡ ಮುಷ್ಕರಕ್ಕೆ ಪ್ರತ್ಯೇಕವಾಗಿ ಕರೆ ನೀಡಿತ್ತು.

ಒಟ್ಟಿನಲ್ಲಿ ನೌಕರರ ಮುಷ್ಕರ ಆರಂಭವಾಗಿತ್ತು. ಇದು 1984 ರ ನಂತರ ನಡೆಯುತ್ತಿರುವ ಸಾರಿಗೆ ನೌಕರರ ರಾಜ್ಯವ್ಯಾಪಿ ಹೋರಾಟವಾಗಿದೆ.

ನೌಕರರ ವೇತನ, ತುಟ್ಟಿಭತ್ಯೆ ಏರಿಕೆ ಮತ್ತು ಇಂಕ್ರಿಮೆಂಟ್ ಮೊದಲಾದ ಸೌಲಭ್ಯಗಳನ್ನು ಪೂರ್ವಾನ್ವಯಗೊಳ್ಳುವಂತೆ ಸರಕಾರ ಸ್ತಂಭನ (ಫ್ರೀಜ್) ಗೊಳಿಸಿದ್ದೇ ಹೋರಾಟಕ್ಕೆ ನೌಕರರು ಮುಂದಾಗಲು ಕಾರಣವಾಗಿತ್ತು.

ಜೈಲಿಗೆ ಹೆದರೋಲ್ಲ....

ಮುಷ್ಕರದ ನಡೆಸಿದರೆ ಅತ್ಯಶ್ಯಕ ಸೇವಾ ನಿರ್ವಹಣಾ ಕಾಯಿದೆ (ಎಸ್ಮಾ) ಯನ್ನು ಪ್ರಯೋಗಿಸಿ ಜೈಲಿಗೆ ತಳ್ಳಲಾಗುವುದು ಎಂದು ಸಾರಿಗೆ ಸಚಿವ ಬಾಲಕೃಷ್ಣ ಪಿಳ್ಳೆ ಬೆದರಿಕೆ ಹಾಕಿದ್ದರು.

ಆದರೆ ಇಂಥ ಬೆದರಿಕೆಗೆ ಕಾರ್ಮಿಕ ವರ್ಗ ಸೊಪ್ಪು ಹಾಕುತ್ತದೆಯೇ? ತುರ್ತು ಪರಿಸ್ಥಿತಿ ಸಮಯದಲ್ಲಿ ದಯಾ ಭಿಕ್ಷೆ ಅರ್ಜಿ ಸಲ್ಲಿಸುವ ಮೂಲಕ ಪಿಳ್ಳೆ ಜೈಲಿಗೆ ಹೋಗುವುದನ್ನು ತಪ್ಪಿಸಿಕೊಂಡಿದ್ದರು ಎಂದು ನೆನಪಿಸಿರುವ ಭರತನ್, ಕಾರ್ಮಿಕರು ಈ ರೀತಿ ಮಾಡುವುದಿಲ್ಲ ಎಂದು ಹೇಳಿದ್ದಾರೆ.

ವೇತನ ಸ್ತಂಭನ ನೀತಿ ಸಾರಿಗೆ ಸಂಸ್ಥೆಯಲ್ಲಿ ಯಶಸ್ವಿಯಾಯಿತೆಂದರೆ ಆ ಪಿಡುಗು ಸಾರ್ವಜನಿಕ ಕ್ಷೇತ್ರದ ಇತರ ಉದ್ಯಮಗಳಿಗೂ ಹಾಗೂ ಇತರೆಲ್ಲ ಉದ್ಯೋಗ ಕ್ಷೇತ್ರಕ್ಕೂ ವಿಸ್ತರಿಸುತ್ತದೆ ಎಂದು ಭರತನ್ ಎಚ್ಚರಿಸಿದದಾರೆ. ಆದ್ದರಿಂದ ಸಾರಿಗೆ ನೌಕರರ ಹೋರಾಟಕ್ಕೆ ಇತರ ವಿಭಾಗಗಳ ಬೆಂಬಲ ಅಗತ್ಯ ಎಂದು ವಿನಂತಿಸಿದ್ದಾರೆ.

ಪಡಿತರ ಖಾಸಗೀಕರಣ ವಿರುದ್ಧ ಎಚ್ಚರಿಕೆ

ಕೇರಳದ ಮುಖ್ಯಮಂತ್ರಿ ಕರುಣಾಕರನ್ ಗುರು ನರಸಿಂಹರಾವ್‌ರ ಪಟ್ಟ ಶಿಷ್ಯನಂತೆ ಅವರ ಎಲ್ಲಾ ಆದೇಶಗಳನ್ನು ಪಾಲಿಸುತ್ತಿರುವಂತೆ ಕಾಣುತ್ತಿದೆ. ಐ. ಎಂ.ಎಫ್-ವಿಶ್ವಬ್ಯಾಂಕ್‌ಗಳ ನಿರ್ದೇಶನದ ಮೇರೆಗೆ ಸಕಲವನ್ನು ಖಾಸಗೀಕರಣಗೊಳಿಸುತ್ತಿರುವ ರಾವ್ ಸರಕಾರದ ಹಾದಿಯಲ್ಲಿ ಕೇರಳದ ಯು.ಡಿ. ಎಫ್. ಸರಕಾರ ಸಾಗಿದೆ.

ಬಹುತೇಕವಾಗಿ ಬಡ ಹಾಗೂ ಮಧ್ಯಮ ವರ್ಗದವರಿಗೆ ಅನುಕೂಲವಾಗುವ ಪಡಿತ ವ್ಯವಸ್ಥೆ ಮೇಲೆ ಈಗ ಅದರ ಕೆಟ್ಟ ಕಣ್ಣು ಬಿದ್ದಿದೆ.

ರಾಜ್ಯದಲ್ಲಿ ಭಾರತೀಯ ಆಹಾರ ನಿಗಮದ (ಎಫ್.ಸಿ.ಐ) ಡಿಪೋಗಳನ್ನು ಮುಚ್ಚಿ ಸಾರ್ವಜನಿಕ ವಿತರಣಾ ವ್ಯವಸ್ಥೆ (ಪಡಿತರ)ಯನ್ನು ಖಾಸಗೀಕರಿಸಲು ಸರಕಾರದ ಮುಂದಾದರೆ ಉಗ್ರ ಪರಿಣಾಮ ಎದುರಿಸಬೇಕಾದೀತು ಎಂದು ಪ್ರತಿಪಕ್ಷ ನಾಯಕ ಹಾಗೂ ಸಿಪಿಐ(ಎಂ) ಪಾಲಿಟ್ ಬ್ಯೂರೋ ಸದಸ್ಯ ವಿ.ಎಸ್.ಅಚ್ಯುತಾನಂದನ್ ಎಚ್ಚರಿಕೆ ನೀಡಿದ್ದಾರೆ.

ಪಡಿತರವನ್ನು ಖಾಸಗೀಕರಿಸಿದರೆ ಬಡವರಿಗೆ ಉತ್ತಮ ಗುಣಮಟ್ಟದ ಸಾಮಗ್ರಿಗಳನ್ನು ವಿತರಿಸಲು ಆಗುವುದಿಲ್ಲ. ಸೂಕ್ತ ನಿಯಂತ್ರಣವೂ ಸಾಧ್ಯವಾಗದು. ರಾಜಕೀಯ ಹಾಗೂ ಅಧಿಕಾರಿಗಳ ಮಟ್ಟದ [illegible] ಭ್ರಷ್ಟಾಚಾರಕ್ಕೆ ಹಾದಿಯಾಗುತ್ತದೆ ಎಂದು ವಿ.ಎಸ್. ಹೇಳಿದ್ದಾರೆ.

'ತೀಕದೀರ್' ಇನ್ನೊಂದು ಮೈಲಿಗಲ್ಲು

ಕಳೆದ ಮೂವತ್ತು ವರ್ಷಗಳಿಂದ ತಮಿಳುನಾಡಿನ ದುಡಿಯುವ ಜನವಿಭಾಗಗಳು ಹಾಗೂ ಪ್ರಜಾಸತ್ತಾತ್ಮಕ-ಪ್ರಗತಿಪರ ಚಳುವಳಿಯ ಮುಖವಾಣಿಯಾಗಿರುವ ಸಿಪಿಐ(ಎಂ) ರಾಜ್ಯಸಮಿತಿಯ ದೈನಿಕ 'ತೀಕದೀರ್' ತನ್ನ ಇತಿಹಾಸದ ಇನ್ನೊಂದು ಮೈಲಿಗಲ್ಲು ನೆಡುವತ್ತ ಮುನ್ನಡೆದಿದೆ. ಪತ್ರಿಕೆಯ ಮದ್ರಾಸ್ ಆವೃತ್ತಿ ನವೆಂಬರ್ 7 ರಿಂದ ಪ್ರಕಟವಾಗಲಿದೆ. ಅಕ್ಟೋಬರ್ ಕ್ರಾಂತಿಯ 76 ನೇ ವಾರ್ಷಿಕೋತ್ಸವದ ಸ್ಮರಣಾರ್ಥವಾಗಿ ಈ ದಿನವನ್ನು ಆಯ್ಕೆ ಮಾಡಲಾಗಿದೆ.

ಕವಿಗಳ ಮೇಲೆ ಮತಾಂಧರ ಹಲ್ಲೆ

ದೆಹಲಿ ಗದ್ದುಗೆ ಮೇಲೆ ಕಣ್ಣಿಟ್ಟುಕೊಂಡು ರಾಮನಾಮ ಜಪಮಾಡುತ್ತಿರುವ ಹಿಂದು ಕೋಮುವಾದಿಗಳ ಅಟ್ಟಹಾಸಕ್ಕೆ ಇಲ್ಲಿದೆ ನೋಡಿ ತಾಜಾ ಉದಾಹರಣೆ.

ರಾಜಸ್ಥಾನದ ಉದಯಪುರದಲ್ಲಿ ಅಕ್ಟೋಬರ್ ಐದರಂದು ಕವಿಗೋಷ್ಠಿಯೊಂದರಲ್ಲಿ ಭಾಗವಹಿಸಿದ ಖ್ಯಾತಿ ಹಿಂದಿ ಕವಿಗಳ ಮೇಲೆ ಬಿಜೆಪಿ ಮತ್ತು ಆರ್.ಎಸ್.ಎಸ್. ಕಾರ್ಯಕರ್ತರು ಹೇಯ ಹಲ್ಲೆ ನಡೆಸಿದ ವರದಿಗಳು ಬಂದಿವೆ.

ಮೈಥಿಲಿ ಶರಣ ಗುಪ್ತಾ ಅವರ ಸ್ಮರಣಾರ್ಥ ವ್ಯವಸ್ಥೆಗೊಂಡಿರುವ 'ಭಾರತ- ಭಾರತಿ' ಯಾತ್ರ ಅಂಗವಾಗಿ ಈ ಕವಿಗೋಷ್ಠಿ ನಡೆಯುತ್ತಿತ್ತು. ರಾಷ್ಟ್ರೀಯ ಸಮಗ್ರತೆ ಮತ್ತು ಕೋಮು ಸೌಹಾರ್ದದ ಬಗ್ಗೆ ಖ್ಯಾತ ಕವಿಗಳಾದ ಕೃಷ್ಣ ಕಲ್ಪಿತ್ ಮತ್ತು ತಾರಾ ಪ್ರಕಾಶ್ ಜೋಷಿ ಕವನಗಳನ್ನು ಓದತೊಡಗಿದಾಗ 'ಕುಂಬಳಕಾಯಿ ಕಳ್ಳ ಅಂದರೆ ಹೆಗಲು ಮುಟ್ಟಿ ನೋಡಿಕೊಂಡ' ಎಂಬ ರೀತಿಯಲ್ಲಿ ಸಂಘ ಪರಿವಾರದ 'ಸಂಸ್ಕೃತಿ ರಕ್ಷಕರು' ವೇದಿಕೆಯ ಮೇಲಿದ್ದ ಸಾಹಿತಿಗಳ ಮೇಲೆ ಎರಗಿದರು. ಕವನಗಳಲ್ಲಿ ಬಿಜೆಪಿ ಆರ್.ಎಸ್.ಎಸ್. ಕೂಟದ ಕೋಮುವಾದಿ ನೀತಿಗಳ ಮೇಲೆ ಪರೋಕ್ಷವಾಗಿ ಪ್ರಹಾರ ಮಾಡಲಾಗಿತ್ತು.

ಘೋಷಣೆ ಕೂಗಿದ ಕೋಮುವಾದಿಗಳು ವೇದಿಕೆಯನ್ನು ಹತ್ತಿದ್ದರಿಂದ ಗೊಂದಲವುಂಟಾಗಿ ಕಾರ್ಯಕ್ರಮವನ್ನು ಅರ್ಧದಲ್ಲೇ ನಿಲ್ಲಿಸಬೇಕಾಯಿತು ಎಂದು ವರದಿಗಳು ತಿಳಿಸಿವೆ.

ಮುಕ್ತರ್ ಅಹಮದ್ 'ರಾಕೇಶ್' ನಂದ ಭಾರದ್ವಾಜ್, ರಾ[illegible] ಕುಮಾರ್ ಚತುರ್ವೇದಿ 'ಚಂಚಲ್' ರಾಜನಾರಾಯಣ ಬಿಸಾದಿಯ [illegible] ಸಕ್ಸೇನಾ ಮೊದಲಾದ ಹೆಸರಾಂತ ಕವಿಗಳು 'ಬಾರತ-ಭಾರತಿ' [illegible]ದಲ್ಲಿ ಸಕ್ರೀಯವಾಗಿ ಭಾಗವಹಿಸುತ್ತಿದ್ದಾರೆ.

ಸೆಪ್ಟೆಂಬರ್ 30 ರಂದು ಜೈಪುರದಲ್ಲಿ ಕೋಮು ಸೌಹಾರ್ದ ಕುರಿ[illegible] ಈ ಸಾಂಸ್ಕೃತಿಕ ಯಾತ್ರೆ ಆರಂಭಗೊಂಡು ಅಜ್ಮೀರ್ ಮತ್ತು ಕೋ[illegible]ದಲ್ಲಿ ಕಾರ್ಯಕ್ರಮವನ್ನು ನೀಡಿ ಉದಯಪುರವನ್ನು ತಲುಪಿತ್ತು. ಉ[illegible] ಪ್ರದೇಶದ ಝಾನ್ಸಿಯಲ್ಲಿ ಯಾತ್ರೆ ಮುಕ್ತಯವಾಗಲಿದೆ.

ಕಾಂಗ್ರೈ ಖಂಡನೆ:

ಮತಾಂಧರು ಕವಿಗಳ ಮೇಲೆ ನಡೆಸಿದ ಆಕ್ರಮಣವನ್ನು ಕಾಂಗ್ರೆಸ್ (ಐ) ಖಂಡಿಸಿದೆ. 'ಬಿಜೆಪಿ -ಆರ್.ಎಸ್.ಎಸ್. ದುರುಳರ ಭೀತಿಯಿಂದಾಗಿ ಕವಿಗಳು ಪೋಲೀಸರ ರಕ್ಷಣೆಯಲ್ಲಿ ಕವನಗಳನ್ನು ವಾಚನ ಮಾಡಬೇಕಾದ ಪರಿಸ್ಥಿತಿ ಬಂದಿರುವುದು ವಿಷಾದಕರ' ಎಂದು ಕಾಂಗ್ರೆ ವಕ್ತಾರ ವಿ.ಎನ್. ಗಾಡ್ಗೀಳ್ ಹೇಳಿದ್ದಾರೆ.

ಪುರಸಭೆ ವಿರುದ್ಧ ಹೋರಾಟಕ್ಕೆ ಎಸ್.[illegible]ಐ ರಾಯಚೂರು ಜಿಲ್ಲಾ ಸಮಿತಿಯ ಬೆಂಬಲ

[illegible]

ನೆಗಳ ಪೈಕಿ 4 ಕಾರ್ಖಾನೆಗಳಲ್ಲಿ ಈಗಾಗಲೇ ಪರಸ್ಪರ ಒಪ್ಪಂದಕ್ಕೆ ಬರಲಾಗಿದ್ದು ಮೆಸರ್ಸ್ ಚಿತ್ತಾಪುರ ಪ್ಯಾಲ್ ಪ್ರೈ.ಲಿ., ಎಂಬ ಹೆಸರಿನ ಕಾರ್ಖಾನೆಯಲ್ಲಿ ಮಾತ್ರ ಕಾರ್ಮಿಕರು ಕನಿಷ್ಟ ಕೂಲಿ ಮತ್ತು ಏರಿಳಿತ ತುಟ್ಟಿ ಭತ್ಯೆ ಜಾರಿ ಮಾಡುವಂತೆ ಸಂಘದಿಂದ ನೋಟೀಸು ಕಳುಹಿಸಿದ. ಕೂಡಲೇ ಆಡಳಿತ ವರ್ಗ ಮಾತುಕತೆಗೆ ಕರೆಯುವ ಬದಲು ಏಕಪಕ್ಷೀಯವಾಗಿ ಕಾರ್ಖಾನೆಯನ್ನು ಮುಚ್ಚುವ ನಿರ್ಧಾರವನ್ನು ಕಾನೂನು ಬಾಹಿರವಾಗಿ ಕೈಗೊಂಡು ಬಡ ಕಾರ್ಮಿಕರನ್ನು ಬಹಳ ಕಷ್ಟನಷ್ಟಕ್ಕೆ ಗುರಿಪಡಿಸಲಾಗಿದೆ. ಇದು ಸಂಘಟನೆ ಬೆಳೆಯಗೊಡಬಾರದೆಂಬ ಮಾಲಕ ವರ್ಗದ ಕುತಂತ್ರದ ಒನ್ನೆಲೆಯಾಗಿದೆ. ದಿನಾಂಕ 7 -6-1993 ರಂದು ಕಾರ್ಖಾನೆ ಮುಚ್ಚುವ ಬಗ್ಗೆ ಎಲ್ಲಾ ಕಾರ್ಮಿಕರಿಗೆ ತಾರೀಖು 5-6-1993 ರಂದು ನೋಟೀಸ್ ಜ್ಯಾರಿ ಮಾಡಿದ್ದು, ಹಾಗೂ ಉದ್ದಿಮೆ ಮುಚ್ಚುವ ನಿಲುಮೆಯನ್ನು ತಾಳಿದ ಬಗ್ಗೆ ಕೊಟ್ಟ ವಿವರಣೆ ಕಾಯಿದೆಗೆ ವಿರೋಧವಾಗಿದೆ. ಮಳೆಗಾಲದಲ್ಲಿ ಎಲ್ಲಾ ಕಾರ್ಮಿಕರನ್ನು ಬೀದಿ ಪಾಲು ಮಾಡುವ ಕ್ರಮವನ್ನು ಆಡಳಿತ ವರ್ಗ ಕೈಗೊಂಡಿರುವುದು ನ್ಯಾಯಸಮ್ಮತವಲ್ಲ ಎಂದು ಸಂಘದ ಕಾರ್ಯಕಾರಿ ಸಮಿತಿಯು ಖಂಡಿಸಿರುತ್ತದೆ.

ಸರಕಾರ ನಿಗದಿ ಮಾಡಿದ ಕನಿಷ್ಟ ವೇತನ [illegible] ಏರಿಳಿತ ತುಟ್ಟಿಭತ್ಯೆ ಕೊಡದೇ ದುಡಿಸುವುದನ್ನು ಕಾರ್ಮಿಕರು ವಿರೋಧಿಸಿ ಸಂಘಟಿತರಾಗಿ ಮಾರ್ಚ್ 31, 1993 ರಂದು ಕನಿಷ್ಟ ವೇತನ ಹಾಗೂ ಏರಿಳಿತ ತುಟ್ಟಿಭತ್ಯೆಯನ್ನು ಬಾಕಿ ಸಮೇತ ಕೊಡಬೇಕೆಂದು ಸಂಘದಿಂದ [illegible] ನೋಟೀಸಿನ ನಂತರ ಆಡಳಿತ ವರ್ಗ [illegible] ಮುಚ್ಚುವ ನಾಟಕವನ್ನಾಡಿದೆ.

[illegible]ಗಿರುವ ಕಾರ್ಮಿಕರನ್ನು ಹೊರಗೆ ಕಳು[illegible]ರೆಯುವರ ಹೆಸರಿನಲ್ಲಿ ಉದ್ದಿಮೆ [illegible] ಮಾಡಿ, ಕಡಿಮೆ ವೇತನಕ್ಕೆ ಹೊಸ ಕಾರ್ಮಿಕರನ್ನು ನೇಮಕ ಮಾಡಿ ದುಡಿಸುವ ಆಡಳಿತ ವರ್ಗದ ತಂತ್ರವನ್ನು ಸೋಲಿಸಲು ಅಲ್ಲಿಯ ಕಾರ್ಮಿಕರು ನಿರ್ಧಾರಕ್ಕೆ ಬಂದಿರುತ್ತಾರೆ. ಕಾರ್ಖಾನೆಯನ್ನು ತೆರೆಯುವವರೆಗೆ ಎನೇ ಕಷ್ಟವಾದರೂ ಸಹಿಸಿಕೊಂಡು ಇತರ ಹೋದರ ಸಂಘಟನೆಗಳ ಕಾರ್ಮಿಕರ ಸಹಕಾರವನ್ನು ಪಡೆದು, ಆಡಳಿತ ವರ್ಗ ಕಾರ್ಖಾನೆಯನ್ನು ತೆರೆಯುವಂತೆ ಒತ್ತಾಯಿಸುವ ಕಾರ್ಯಕ್ರಮವನ್ನು ರೂಪಿಸಿರುತ್ತಾರೆ.

ಕಾರ್ಖಾನೆಯನ್ನು ಮಾರಾಟ ಮಾಡುವ ನಾಟಕದೊಂದಿಗೆ ಗೇಟಿನ ಎದುರು ಬೋರ್ಡ್ ಹಾಕಿ ಕಾರ್ಮಿಕರಿಗೆ ಹೆದರಿಸಲು ಒಂದು ಕಡೆ ಪ್ರಯತ್ನಮಾಡಿದರೆ, ಇನ್ನೊಂದು ಕಡೆ ಗೂಂಡಾಗಳ ಮೂಲಕ ಕಾರ್ಖಾನೆಯ ಕೆಲಸ ಆರಂಭಿಸುವ ಯೋಜನೆ- ಇವುಗಳನ್ನೆಲ್ಲಾ ಸೋಲಿಸಲು ಕಾರ್ಮಿಕರು ಸುಸಂಘಟಿತರಾಗಿ ಮಾಲಿಕರ ಮನೆಯ ಎದುರು ಧರಣಿ ಮತ್ತು ಪ್ರತಿಭಟನಾ ಕಾರ್ಯಕ್ರಮ ಹಾಗೂ ಪ್ರತಿಭಟನಾ ಸಾರ್ವಜನಿಕ ಸಭೆಗಳನ್ನು ಮಾಡಿ ಊರವರಿಗೆ ಹಾಗೂ ಇತರ ದುಡಿಯುವ ವಿಭಾಗದವರಿಗೆ ಮಾಲಕರ ಕಾರ್ಮಿಕ ವಿರೋಧಿ ನೀತಿಯನ್ನು ಬಯಲು ಮಾಡುವ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತಾರೆ. ಇತರ ಕಾರ್ಮಿಕ ಸಂಘಗಳು ಈಗಾಗಲೇ ಈ ಕಾರ್ಮಿಕರಿಗೆ ಬೆಂಬಲ ವ್ಯಕ್ತಪಡಿಸಿರುತ್ತಾರೆ.

ಧಾರವಾಡದಲ್ಲಿ ಡಿ.ವೈ.ಎಫ್.ಐ ಘಟಕದ ಸಭೆ

ಧಾರವಾಡ: ಅಕ್ಟೋಬರ್ 29, 1993 ರಂದು ಡಿ.ವೈ.ಎಫ್.ಐನ ಪ್ರಮುಖ ಕಾರ್ಯಕರ್ತರ ಸಭೆಯೊಂದು ಶ್ರೀ ಬಸವರಾಜ ಭಜಂತ್ರಿಯವರ ಅಧ್ಯಕ್ಷತೆಯಲ್ಲಿ ಜರುಗಿ ಧಾರವಾಡ ಜಿಲ್ಲೆಯಲ್ಲಿ ಬಾರತ ಪ್ರಜಾಸತ್ತಾತ್ಮಕ ಯುವ ಜನ ಫೆಡರೇಷನ್ (ಡಿ.ವೈ.ಎಫ್.ಐ)ನ್ನು ಪುನರ್ ಸಂಘಟಿಸಲು ನಿರ್ಧರಿಸಿ ಸಮಿತಿಯೊಂದನ್ನು ಇದೇ ಸಮಯದಲ್ಲಿ ರಚಿಸಲಾಯಿತು.

ಶ್ರೀ ಬಸವರಾಜ ಭಜಂತ್ರಿಯವರು ಸಂಚಾಲಕರಾಗಿರುವ 9 ಜನರ ಸಮಿತಿಯಲ್ಲಿ ಶ್ರೀ ನಾರಾಯಣ ಬಾಬು ನಿಂಬರಗಿ, ಶ್ಯಾಮ ಪೂಜಾರ, ಸೋಮೇಶ ಸರ್ವಳೆ, ಎಸ್. ಜಿ. ಗಂಗಾಧರ, ವಿ.ಕೆ. ಅಶೋಕ, ವಾಸೀಮ [illegible] ಅಹ್ಮದ್ ಹಾಗೂ ಮಲ್ಲಯ್ಯ [illegible] ಸಮಿತಿಯ ಸದಸ್ಯರಾಗಿ ನೇಮಕಗೊಂಡರು.

ಪ್ರಸ್ತುತ ದೇಶದ ಪರಿಸ್ಥಿತಿಯಲ್ಲಿ ಡಿ.ವೈ.ಎಫ್.ಐ. ಅಂತಹ ಕ್ರಾಂತಿಕಾರಕ ಯುವ ಸಂಘಟನೆಯನ್ನು ಕಟ್ಟಿ ಬಲಪಡಿಸಲು ಇತರ ಸಂಘಟನಾತ್ಮಕ ನಿರ್ಣಯುಗಳನ್ನು ಸಹ ತೆಗೆದುಕೊಳ್ಳಲಾಯಿತು. ಅಂದಿನ ಕಾಯಕ್ರಮದಲ್ಲಿ ದೇಶದ ಪ್ರಸ್ತುತ ಯುವ ಜನರನ್ನು ಕಾಡುತ್ತಿರುವ ಸಮಸ್ಯೆಗಳಿಗೆ ಸ್ಪಂದಿಸಲು ಕಾರ್ಯಕ್ರಮ ಹೋರಾಟಗಳನ್ನು ಹಮ್ಮಿಕೊಳ್ಳಲು ತೀರ್ಮಾನಿಸಲಾಯಿತು. ದೇಶದಲ್ಲಿ ಪ್ರಜ್ವಲಿಸುತ್ತಿರುವ ಕೋಮುವಾದದ ಸಮಸ್ಯೆ ಅದರಿಂದಾಗಿ ಯುವಕರನ್ನು ಮುಖ್ಯ ಪ್ರವಾಹದಿಂದ ಬೇರ್ಪಡಿಸುತ್ತಿರುವ ಪ್ರತ್ಯೇಕತಾವಾದಿ ಶಕ್ತಿಗಳ ವಿರುದ್ಧ ಹೆಚ್ಚುತ್ತಿರುವ ನಿರುದ್ಯೋಗದ ವಿರುದ್ಧ ಹಾಗೂ ಕರ್ನಾಟಕದಲ್ಲಿ ಸರಕಾರದ ನಿಷ್ಕ್ರಿಯತೆ, ವಿಜಯನಗರದ ಉಕ್ಕಿನ ಕಾರ್ಖಾನೆಯ ಸ್ಥಾಪನೆಗೆ ಕೂಡಲೇ ಕ್ರಮಗಳನ್ನು ಕೈಗೊಳ್ಳಲು. ಖಾಲಿ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡುವಂತೆ ಸರಕಾರದ ಮೇಲೆ ಒತ್ತಡ ತರಲು ಹಾಗೂ ಭೂಕಂಪ ಪೀಡಿತರಿಗೆ, ನೆರಹಾವಳಿ ಸಂತ್ರಸ್ತರಿಗೆ ಪರಿಹಾರ ವಿತರಣೆಯನ್ನು ಇನ್ನಷ್ಟು ಚುರುಕುಗೊಳಿಸಲು ಸರಕಾರವನ್ನು ಒತ್ತಾಯಿಸಿ ಗೊತ್ತುವಳಿಗಳನ್ನು ಕೈಗೊಳ್ಳಲಾಯಿತು.

ನವೆಂಬರ್ 3 ರಂದು ಡಿ.ವೈ.ಎಫ್.ಐನ ಸ್ಥಾಪನಾ ದಿನಾಚರಣೆಯನ್ನು ನಡೆಸಲು ತೀರ್ಮಾನಿಸಿತು.

ಪಂಚಾಯಿತಿ ಕೇಂದ್ರದ ಮಂಜೂರಾತಿ ರಾಜಕೀಯ ತಿರಸ್ಕಾರ ಕುಂದಲಗುರ್ತಿ ಗ್ರಾಮಸ್ಥರ ಪ್ರತಿಭಟನೆ

ಈ ಹಿಂದೆ 'ಐಕ್ಯರಂಗ' ದಲ್ಲಿ ಕುಂದಲಗುರ್ಕಿ ಗ್ರಾಮಸ್ಥರು ಕುಂದಲಗುರ್ಕಿ ಗ್ರಾಮವನ್ನು ಪಂಚಾಯಿತಿ ಕೇಂದ್ರವನ್ನಾಗಿ ಮಾಡಲು ಅಡ್ಡಿಪಡಿಸುತ್ತಿರುವುದಕ್ಕೆ ಪ್ರತಿಭಟನೆ ಸತ್ಯಾಗ್ರಹವನ್ನು ನಡೆಸಿದ್ದನ್ನು ವರದಿ ಮಾಡಿದ್ದೆವು. ಇದು ಆದರ ಹೋರಾಟದ ಫಲಿತಾಂಶದ ವರದಿ.

ಕೋಲಾರ ಜಿಲ್ಲೆ ಶಿಡ್ಲಘಟ್ಟ ತಾಲ್ಲೂಕಿನ ಕುಂದಲಗುರ್ಕಿ ಗ್ರಾಮ ಸಿಪಿಐ(ಎಂ) ಪ್ರಭಾವ ಹೆಚ್ಚಾಗಿ ಇರುವುದರಿಂದ ಸ್ಥಳೀಯ ಶಾಸಕ ಮತ್ತು ಮಾಜಿ ರೇಷ್ಮೇ ಖಾತೆ ಸಚಿವ ವಿ. [illegible] ಸ್ಥಳೀಯ ತಹಸೀಲ್‌ದಾರ್ [illegible]ಗಳ ಮೇಲೆ [illegible] ಗ್ರಾ[illegible] ಬಾಡದೆ[illegible] ಇದರ ವಿರುದ್ಧ ತಾಲ್ಲೂಕ್ ತಹಸೀಲ್‌ದಾರ್ ಮತ್ತು ಜಿಲ್ಲಾಧಿಕಾರಿಗಳ ಕಛೇರಿ ಮುಂದೆ ಅನೇಕ ಹೋರಾಟಗಳು ನಡೆದಿದ್ದು ಬೆಂಗಳೂರು ವಿಭಾಗಾಧಿಕಾರಿಗಳು ಈ ಹೋರಾಟಗಳು ಸಮರ್ಪಕವೆಂದು ತಿಳಿದು ಕುಂದಲಗುರ್ಕಿ ಗ್ರಾಮವನ್ನು ಗ್ರಾಮಪಂಚಾಯಿತಿ ಕೇಂದ್ರವನ್ನು ಆಯ್ಕೆ ಮಾಡಿರುತ್ತಾರೆ. ಈ ಅಧಿಕಾರಿಯ ಮೇಲೂ ಸಹ ಒತ್ತಡ ತಂದ ಶಾಸಕರನ್ನು ಧಿಕ್ಕರಿಸಿ ಜನತೆಗೆ ಅನುಕೂಲ ಕಲ್ಪಿಸುವ ದೃಷ್ಟಿಯಿಂದ ಇವರ ಒತ್ತಾಯವನ್ನು ವಿರಾಕರಿಸಿದ್ದಾರೆ.

ರೈತ ಸಂಘದ ಘಟಕ ರಚನೆ

ಕರ್ನಾಟಕ ಪ್ರಾಂತ ರೈತ ಸಂಘ[illegible] ರಾರಾವಿ ಗ್ರಾಮ ಘಟಕವನ್ನು ದಿನಾಂಕ 28-10-1993 ರಂದು ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಂ. ಯು. ಬಸವರಾಜು, ಉ[illegible]ರಾದ ಕಾಂ. ಇ.ಆರ್. ಯಲ್ಲಪ್ಪ ಹಾಗೂ [illegible] ಎಸ್.ಕೆ. ಷಣ್ಮುಖಪ್ಪ ಇವರ ನೇತೃತ್ವದಲ್ಲಿ [illegible]ಸಲಾಯಿತು.

ಗ್ರಾಮ ಘಟಕದ ಅವಶ್ಯಕತೆ ಹಾ[illegible] ಕಾರ್ಯ ವಿಧಾನದ ಕುರಿತು ವಿವರಿಸಿದರು.

ಅಧ್ಯಕ್ಷರು ಆಲಂಭಾಷಾ, ಉಪಾಧ್ಯಕ್ಷ[illegible] ಬಿ.ಆರ್. ರಾಮಪ್ಪ, ಟಿ.ಆರ್. ತಿಮ್[illegible] ಕಾರ್ಯದರ್ಶಿಯಾಗಿ ಟಿ. ಯಲ್ಲಪ್ಪ, ಸಹ[illegible]ಯರ್ದರ್ಶಿಯಾಗಿ ಶ್ರೀನಿವಾಸು ಅಲ್ಲದೆ [illegible] ಮೂರು ಜನ ಕಾರ್ಯಕಾರಿ ಸಮಿತಿ ಸದಸ್ಯ[illegible] 350 ಸದಸ್ಯತ್ವದ ಆಧಾರದಲ್ಲಿ ಚುನಾಯಿಸ[illegible]ಯಿತು.

ದಿನಾಂಕ ಅಕ್ಟೋಬರ್ 27, 19[illegible] ರಂದು ಜಿಲ್ಲಾ ಸಮಿತಿ ಕಾರ್ಯದರ್ಶಿ [illegible] ಬಸವರಾಜು ಹಾಗೂ ಉಪಾಧ್ಯಕ್ಷರಾದ [illegible] ಇ.ಆರ್. ಯಲ್ಲಪ್ಪ ಇವರ ನೇ[illegible]ದಲ್ಲಿ ಈರಾಳು ಗ್ರಾಮ ಘಟಕ ಹಾಗೂ [illegible] ಸೂಗೂರು ಗ್ರಾಮ ಘಟಕಗಳು (ಶಿರು[illegible] ತಾಲೂಕು) ರಚಿಸಲಾಗಿದೆ.

ಈರಾಳು ಗ್ರಾಮ ಘಟಕದಲ್ಲಿ ಅ[illegible]ರಾಗಿ ದೇವೆಂದ್ರಪ್ಪ, ಉಪಾಧ್ಯಕ್ಷರಾಗಿ [illegible] ಕಾರ್ಜುನ ಮತ್ತು ಗಾದಿಲಿಂಗಪ್ಪ, ಕಾರ್ಯದ[illegible]ಯಾಗಿ ಶೇಖಣ್ಣ. ಹೆಚ್, ಉಪಕಾರ್ಯದ[illegible]ಯಾಗಿ ಮುತ್ತಣ್ಣ ಅಲ್ಲದೇ ಕಾಂ. ಚಿದಾನಂ[illegible] ಭಾಗವಹಿಸಿದ್ದಂತೆ ಹನ್ನೊಂದು ಜನರ ಕಾ[illegible]ಕಾರಿ ಸಮಿತಿಯನ್ನು ಸರ್ವಸದಸ್ಯರ ಸಭೆ ([illegible] ಜನರು) ಚುನಾಯಿಸಿದೆ.

[illegible] ಸೂಗೂರು ಘಟಕದಲ್ಲಿ [illegible] ಕ್ಕಿಂತ ಹೆಚ್ಚು ಜನರು ಸೇರಿದ್ದ ಸರ್ವ[illegible]ಸ್ಯರ ಸಭೆಯು ಹತ್ತು ಜನರ ಘಟಕವನ್ನು [illegible] ಮಾಡಿದೆ

ಅಧ್ಯಕ್ಷರಾಗಿ ಬೆಟ್ಟಪ್ಪ, ಉಪಾಧ್ಯಕ್ಷ[illegible] ದುರುಗಪ್ಪ ಮತ್ತು ಬಜ್ಜಪ್ಪ, ಕಾರ್ಯದ[illegible]ಯಾಗಿ ಮಹಾದೇವಪ್ಪ ಉಪಕಾರ್ಯ[illegible]ಯಾಗಿ ಮೂಕಪ್ಪಾ ಅಲ್ಲದೇ ಐದು ಜ[illegible] ಕಾರ್ಯಕಾರಿ ಸಮಿತಿ ಸದಸ್ಯರನ್ನು ಚುನಾ[illegible]ಸಿದೆ.

ಕೆನಡಾದಲ್ಲಿ ಟೋರಿಗಳ ಪರಾಭವ

-- ಶರತ್ ಚಂದ್ರ

ಇತ್ತೀಚೆಗೆ ನಡೆದ ಪಾರ್ಲಿಮೆಂಟಿನ ಚುನಾವಣೆಗಳಲ್ಲಿ ಕೆನಾಡದ ಬಲಪಂಥೀಯ ಆಳುವ ಪಕ್ಷ ಕನ್ಸರ್ವೆಟಿವ್ ಪಕ್ಷ ಪರಾಭವ ಹೊಂದಿದೆ. ಕಳೆದ 9 ವರ್ಷಗಳಿಂದ ಆಳುವ ಪಕ್ಷವಾಗಿದ್ದ ಈ ಪಕ್ಷದ ಸೀಟುಗಳ ಸಂಖ್ಯೆ ಕಳೆದ ಬಾರಿ 155 ರಿಂದ ಈ ಬಾರಿಗೆ ಕೇವಲ 2 ಕ್ಕೆ ಇಳಿದಿದೆ. ಪ್ರಧಾನ ಮಂತ್ರಿ ಕಿಮ್ ಕ್ಯಾಂಪಬೆಲ್ ಸ್ವತಃ ತಮ್ಮ ಸೀಟು ಕಳೆದುಕೊಂಡಿದ್ದಾರೆ.

ಪಾರ್ಲಿಮೆಂಟಿನ 295 ಸೀಟುಗಳಲ್ಲಿ ಲಿಬರಲ್ ಪಕ್ಷ 177 ಸೀಟುಗಳನ್ನು ಗಳಿಸಿ ಭಾರಿ ಬಹುಮತಗಳಿಸಿದೆ. ಲಿಬರಲ್ ಪಕ್ಷ ಸರಕಾರಕ್ಕೆ ಹೊಸತೇನಲ್ಲ. ಕಳೆದ 9 ವರ್ಷ ಕನ್ಸರ್ವೇಟಿವ್ ಆಡಳಿತ ಬಿಟ್ಟರೆ ಸುಮಾರು 40 ವರ್ಷಗಳಲ್ಲಿ ಅದೇ ಆಳುವ ಪಕ್ಷವಾಗಿತ್ತು.

ಕೆನಡಾ ಇತ್ತೀಚೆಗೆ ಇತರ ಅಭಿವೃದ್ಧ ಬಂಡವಾಳಶಾಹಿ ದೇಶಗಳಂತೆ ಆರ್ಥಿಕ ಸ್ಥಗಿತತೆ, ಹೆಚ್ಚಿನ ನಿರುದ್ಯೋಗ, ಸಾಲದ ಸಮಸ್ಯೆಯಿಂದ ಬಳಲುತ್ತಿದೆ. ನಿರುದ್ಯೋಗ ಕೆನಡಾದ ಚರಿತ್ರೆಯಲ್ಲೇ ಅತ್ಯಂತ ಹೆಚ್ಚು -ಶೇಕಡಾ 11 ರ ಮಟ್ಟದಲ್ಲಿದೆ. ಮೆಕ್ಸಿಕೋ, ಅಮೇರಿಕ, ಕೆನಡಾಗಳ ಸದಸ್ಯರಾಗಿರುವ ಎನ್.ಎ.ಎಫ್. ಟಿ.ಎ. North American Free Trade Agreement- ಉತ್ತರ (ಅಮೇ)ರಿಕಾ ಮುಕ್ತ ವ್ಯಾಪಾರ ಒಪ್ಪಂದ) ದಿಂದಾಗಿ ಕೆನಡಾದ ಕೈಗಾರಿಕೆಗಳಿಗೆ ತೀವ್ರ ಧಕ್ಕೆಯುಂಟಾಗಿದೆ. ಅಮೇರಿಕಾದ ಉಚ್ಚ ತಂತ್ರಜ್ಞಾನ, ಮೆಕ್ಸಿಕೋದ ಕಡಿಮೆ ಕಾರ್ಮಿಕ ವೇತನ ಇವುಗಳಿಂದಾಗಿ ಕೆನಡಾ ಪೈಪೋಟಿಯಲ್ಲಿ ಸೋಲುತ್ತಿದೆ. ಇದು ಚುನಾವಣೆಯಲ್ಲಿ ದೊಡ್ಡ ವಿವಾದಾಸ್ಪದ ವಿಷಯವಾಗಿತ್ತು. ಈಗ ಗೆದ್ದಿರುವ ಲಿಬರಲ್ ಪಕ್ಷ ನಾಫ್ತಾ (ಎನ್.ಎ.ಎಫ್.ಟಿ.ಎ) ಒಪ್ಪಂದವನ್ನು ಪುನಃ ಪರಿಶೀಲಿಸಲಾಗುವುದು ಎಂದು ಭರವಸೆಯಿತ್ತಿದೆ. ಹೆಚ್ಚಿನ ಉದ್ಯೋಗಾವಕಾಶಗಳನ್ನು ಉಂಟುಮಾಡುವುದು ಹಾಗೂ ರಕ್ಷಣಾ ವೆಚ್ಚಗಳಲ್ಲಿ ತೀವ್ರಕಡಿತದ ಕ್ರಮಗಳನ್ನು ಕೈಗೊಳ್ಳುವುದಾಗಿ ಲಿಬರಲ್ ಪಕ್ಷದ ಚುನಾವಣಾ ಘೋಷಣೆ ಹೇಳಿತ್ತು.

ಕನ್ಸರ್ವೇಟಿವ್ ಪಕ್ಷದ ಪರಾಭವದಿಂದ ಪ್ರಾದೇಶಿಕ ಪಕ್ಷಗಳು ಪ್ರಮುಖ ವಿರೋಧ ಪಕ್ಷಗಳಾಗಿ ಹೊಮ್ಮಿವೆ. 'ಬ್ಲಾಕ್ ಕ್ವಿಬೆಕೊಸ್' ಎಂಬ ಪ್ರತ್ಯೇಕವಾದಿ ಪಕ್ಷ ಪ್ರಮುಖ ವಿರೋಧ ಪಕ್ಷವಾಗಿ ಹೊಮ್ಮಿದೆ. ಕ್ವಿಬೆಕ್ ಎಂಬುದು ಕೆನಡಾದ ಪೂರ್ವದಲ್ಲಿರುವ ಪ್ರಾಂತ್ಯ. ಕೆನಡಾದ ಇತರ ಪ್ರಾಂತ್ಯಗಳಲ್ಲಿ ಬಹು ಸಂಖ್ಯಾತರು ಇಂಗ್ಲೀಷ್ ಭಾಷಿಕರಾದರೆ, ಕ್ವಿಬೆಕ್ ಫ್ರೆಂಚ್ ಭಾಷಿಕರು ಬಹು ಸಂಖ್ಯಾತರಿರುವ ಪ್ರಾಂತ್ಯ. ಫ್ರೆಂಚ್ ಭಾಷಿಕರಾದ್ದರಿಂದ ಕ್ವಿಬೆಕ್, ಪ್ರತ್ಯೇಕ ದೇಶವಾಗಬೇಕೆಂಬ ಪಕ್ಷ ಬ್ಲಾಕ್ ಕ್ವಿಬೆಕೊಸ್, ಕ್ವಿಬೆಕ್ ಪ್ರಾಂತ್ಯದಲ್ಲಿ 'ಬ್ಲಾಕ್ ಕ್ವಿಬೆಕೊಸ್' ಪಕ್ಷ ಕನ್ಸರ್ವೇಟಿವ್ ಪಕ್ಷದ ವಿರುದ್ಧ ಇದ್ದ ಅತೃಪ್ತಿಯ ಲಾಭ ಪಡೆಯಿತು. ಕ್ವಿಬೆಕ್ ಪ್ರಾಂತ್ಯದಲ್ಲಿ ಪ್ರಾಂತೀಯ ಸರಕಾರದಲ್ಲಿ ಲಿಬರಲ್ ಪಕ್ಷ ಆಡಳಿತದಲ್ಲಿದೆ. 'ಬ್ಲಾಕ್ ಕ್ವಿಬೆಕೊಸ್' ಪ್ರಾಂತೀಯ ಹಂತದಲ್ಲೂ ವಿರೋಧ ಪಕ್ಷವಾಗಿದೆ.

ಕ್ವಿಬೆಕ್ ಪ್ರಾಂತ್ಯ ಪ್ರತ್ಯೇಕವಾಗುವುದರ ವಿರುದ್ಧ ಇಂಗ್ಲೀಷ್ ಭಾಷಿಕರ ಅತೃಪ್ತಿಯನ್ನು ವಿರೋಧಿಸುವ ಪಕ್ಷ ರಿಫೋರ್ಮ ಪಕ್ಷ ಮೂರನೇ ಸ್ಥಾನದಲ್ಲಿದೆ. ಇದಕ್ಕೆ ದೆಂಬಲವಿರುವುದು ಪಶ್ಚಿಮ ಪ್ರಾಂತ್ಯಗಳಲ್ಲಿ ಮಾತ್ರ.

ಈ ಚುನಾವಣೆಗಳ ಮಹತ್ವವೆಂದರೆ 80ರ ದಶಕದಲ್ಲಿ 'ಖಾಸಗೀಕರಣ' 'ಉದಾರೀಕರಣ' ಹಾಗೂ 'ಮುಕ್ತ ವ್ಯಾಪಾರ'ದ ಆಧಾರದ ಮೇಲೆ ಆರಂಭವಾದ ತೀವ್ರ ಬಲಪಂಥೀಯ ಅಲೆ ಒಮ್ಮೆ ಟ್ಟುತ್ತಿರುವಂತೆ ಕಾಣುತ್ತಿದೆ. 'ರೇಗನ್-ಥ್ಯಾಚರ್' ಯುಗದಲ್ಲಿ ಆರಂಭವಾದ ಈ ಆರ್ಥಿಕ-ರಾಜಕೀಯ ಪಂಥ ಹಲವು ಅಭಿವೃದ್ಧಿ ದೇಶಗಳಲ್ಲಿ ಹಿಂದೆ ಸರಿಯುತ್ತಿದೆ. ಇತ್ತೀಚಿನ ಹಲವು ಚುನಾವಣೆಗಳಲ್ಲಿ ಈ ಪಂಥ ಅನುಸರಿಸುವ ಶಕ್ತಿಗಳಿಗೆ, ಪಕ್ಷಗಳಿಗೆ ತೀವ್ರ ಹಿನ್ನಡೆಯಾಗಿದೆ. ಅಮೇರಿಕದಲ್ಲಿ ರಿಪಬ್ಲಿಕನ್ ಅಧ್ಯಕ್ಷ ಬುಶ್ ಸೋಲು, ಗ್ರೀಸ್ ಹಾಗೂ ಕೆನಡಾದ ಚುನಾವಣೆಗಳಲ್ಲೆಲ್ಲಾ ನಿರುದ್ಯೋಗ, ಆರ್ಥಿಕ ಹಿಂಜರಿತ, ಖಾಸಗೀಕರಣ ಜಾಗತೀಕರಣದ ಹೆಸರಲ್ಲಿ ಸ್ಥಳೀಯ ಕೈಗಾರಿಕೆಗಳು ಮುಚ್ಚುತ್ತಿರುವುದು, ಸರ್ಕಾರದ ಕಲ್ಯಾಣ ಯೋಜನೆಗಳಲ್ಲಿ ಕಡಿತ- ಮುಖ್ಯ ಚುನಾವಣೆಯ ವಿಷಯಗಳಾಗಿದ್ದವು. ಇವನ್ನು ವಿರೋಧಿಸುವ ಪಕ್ಷಗಳು ಜಯಗಳಿಸಿವೆ.

ಅಮೇರಿಕವನ್ನು ಧಿಕ್ಕರಿಸಿ ಕ್ಯೂಬಾ ಜತೆ ಕಾರಿಕೊಮ್ ಸಹಕಾರ

ಅಮೇರಿಕ ಕ್ಯೂಬಾದ ವಿರುದ್ಧ ದಿಗ್ಬಂಧನ ವಿಧಿಸಿ ಆ ದೇಶದ ಸಮಾಜವಾದವನ್ನು ಸೋಲಿಸಲು ಯತ್ನಿಸಿದೆ. ಇತರ ದೇಶಗಳು ಅದೇ ರೀತಿ ಕ್ಯೂಬಾದ ವಿರುದ್ಧ ದಿಗ್ಬಂಧನ ವಿಧಿಸಬೇಕೆಂದು ಒತ್ತಡ ಹೇರುತ್ತದೆ. ಇದಕ್ಕೆ ತೀವ್ರ ವಿರೋಧವಿದೆ. ಪಶ್ಚಿಮ ಯುರೋಪಿಯನ್ ದೇಶಗಳೇ ಅಮೇರಿಕದ ಈ ಒತ್ತಡಕ್ಕೆ ಮಣಿದಿಲ್ಲ. ಇತ್ತೀಚೆಗೆ ಕ್ಯಾರಿಕೊಮ್ (ಕ್ಯಾರಿಬಿಯನ್ ಕಮ್ಯುನಿಟಿ- ಕ್ಯಾರಿಬಿಯನ್ ದೇಶಗಳ ಒಕ್ಕೂಟ) ಅಮೇರಿಕದ ಒತ್ತಡವನ್ನು ಧಿಕ್ಕರಿಸಿ ಕ್ಯೂಬಾದ ಜತೆ ವ್ಯಾಪಾರ ಹಾಗೂ ತಾಂತ್ರಿಕ ಸಹಕಾರ ಹೆಚ್ಚಿಸಲು ಒಪ್ಪಂದ ಮಾಡಿಕೊಂಡಿದೆ. ಕ್ಯಾರಿಕೊಮ್ ಕ್ಯೂಬಾದ ನೆರೆಹೊರೆಯಲ್ಲಿರುವ 13 ಕ್ಯಾರಿಬಿಯನ್ ದೇಶಗಳ ಒಕ್ಕೂಟ. ಮೀನುಗಾರಿಕೆ ಹಾಗೂ ಪಶುಸಂಗೋಪನೆಯಲ್ಲಿ ಸಹಕಾರ ಬೆಳೆಸಲು, ಜೀವ ತಂತ್ರಜ್ಞಾನದಲ್ಲಿ ಜಂಟಿ ಸಂಶೋಧನೆ ಸಂಘಟಿಸಲು ಹಾಗೂ ವ್ಯಾಪಾರ ಹೆಚ್ಚಿಸಲು ಒಪ್ಪಂದ ಅವಕಾಶ ಮಾಡಿಕೊಡುತ್ತದೆ.

ಕ್ಯಾರಿಕೋಮ್ ಸದ್ಯದಲ್ಲಿ ಸಾರ್ವತ್ರಿಕ ಮಾರುಕಟ್ಟೆ ಆಧಾರಿತ ಸಮುದಾಯ 1994 ರೊಳಗೆ ರಚಿಸಲು ಪ್ರಯತ್ನಿಸಿದೆ. ಈ ದೇಶಗಳ ಒಟ್ಟು ಜನ ಸಂಖ್ಯೆ 55 ಲಕ್ಷ.

ಪಾಶ್ಚಿಮಾರ್ಧದ ವಿಷಯಗಳ ಬಗ್ಗೆ (ಸೆನೆಟ್‌ನ ವಿದೇಶಾಂಗ ವ್ಯವಹಾರಗಳ ಸಮಿತಿಯ) ಅಧ್ಯಕ್ಷ ಸೇರಿದಂತೆ ನಾಲ್ಕು ಜನ ಪಾರ್ಲಿಮೆಂಟ್ ಉಪಸಮಿತಿಯ ಸದಸ್ಯರು ಈ ಒಪ್ಪಂದ ಮುಂದುವರೆದರೆ, ಅಮೇರಿಕ ಹಾಗೂ ಕ್ಯಾರಿಕೊಮ್ ಜತೆ ವ್ಯಾಪಾರ ಸಂಬಂಧಗಳಿಗೆ ತೀವ್ರ ಧಕ್ಕೆಯಾಗಬಹುದು ಎಂದು ಎಚ್ಚರಿಸಿ ಪತ್ರ ಬರೆದಿದ್ದರು.

ಇದನ್ನು ಕ್ಯಾರಿಕೊಮ್ ನಿರ್ಲಕ್ಷಿಸಿದ್ದು, ಮಾತ್ರವಲ್ಲ, ಈ ಪ್ರದೇಶದ ಅಮೇರಿಕ ಹಾಗೂ ದಕ್ಷಿಣ ಅಮೇರಿಕಾದ ಇತರ ದೇಶಗಳ ನಡುವೆ ಇಂತಹ ಸಹಕಾರ ಒಪ್ಪಂದ ತಮ್ಮ ಗುರಿ ಎಂದು ಸಾರಿದ್ದಾರೆ. ಕೆನಡಾ ಹಾಗೂ ಮೆಕ್ಸಿಕೊ ಎಂದೂ ಕ್ಯೂಬಾದ ಜತೆ ಸಂಬಂಧ ಕಡಿದುಕೊಂಡಿಲ್ಲ. ಆದರೂ ಅವೆರಡು ದೇಶಗಳ ಜತೆ ಅಮೇರಿಕಾ 'ನಾಫ್ತಾ' ಒಪ್ಪಂದ ಮಾಡಿಕೊಂಡಿದೆ. ಕ್ಯಾರಿಕೋಮ್ ಕ್ಯೂಬಾದ ಜತೆ ಸಹಕಾರ ಬೆಳೆಸುವ, ಬಗ್ಗೆ ಈ ಪಕ್ಷಪಾತದ ಧೋರಣೆ ಏಕೆ ಎಂದು ಪ್ರಶ್ನಿಸಿದೆ.

ಅಮೇರಿ[illegible] ಕಮ್ಯುನಿಸ್ಟ್ ಪಕ್ಷಕ್ಕೆ [illegible]

ಅಮೇ[illegible]
ಒಂದು [illegible]
ನಿರ್ಣಯ [illegible]
ಜಯಗಳಿಸಿ[illegible]
ತೀರ್ಪಿನ [illegible]
ಫೋರ್ನಿಯಾ [illegible]
ಸ್ಯರು ಕಸಿದು[illegible]
ಪಕ್ಷ ಪುನಃ ಗ[illegible]
ಎರಡು [illegible]
ಈ ಕೇಸ್‌ನ[illegible]
ಪಾಸ್ತಿಗಳ [illegible]
ಳಷ್ಟು [illegible]
ಪುಸ್ತಕ ಪ್ರಕಾ[illegible]
ಕ್ಕಾಗಿ ರಚಿಸ[illegible] ಕಂಪನಿಗ
ಳಲ್ಲಿ (522 [illegible]
ಪಬ್ಲಿಷಿಂಗ್) [illegible] ಪ್ರತಿನಿಧಿಗಳಾಗಿದ್ದರು.

1991 ರಲ್ಲಿ ನಡೆದ 25 ನೇ ರಾಷ್ಟ್ರೀಯ ಸಮಾವೇಶದಲ್ಲಿ ರಾಜಕೀಯ ಭಿನ್ನಾಭಿಪ್ರಾಯದಿಂದಾಗಿ ಪಕ್ಷ ಬಿಟ್ಟು ಹೊರನಡೆದಿದ್ದರು. ಆದರೆ ಇವರು ತಾವು ಪಕ್ಷದ ಪ್ರತಿನಿಧಿಗಳಾಗಿ ಈ ಕಂಪನಿಗಳನ್ನು ನಡೆಸುತ್ತಿದ್ದೆವು ಎಂದು ಮರೆತು ಬಿಟ್ಟು ಈ ಕಂಪನಿಗಳ ಒಡೆಯರು ತಾವೇ ಎಂದು ಈ ಕಂಪನಿಯನ್ನು ಕಾನೂನು ವಿರುದ್ಧವಾಗಿ ಕಸಿದುಕೊಳ್ಳುವ ಪ್ರಯತ್ನ ಮಾಡಿದ್ದರು. ಆದ್ದರಿಂದ ಈ ಕೇಸು ಕೋರ್ಟಿಗೆ ಹೋಯಿತು. ಕಮ್ಯುನಿಸ್ಟ್ ಪಕ್ಷ ತನ್ನ ಸದಸ್ಯರ, ಬೆಂಬಲಿಗರ ತ್ಯಾಗದ ಕೊಡುಗೆ ಈ ಕಂಪನಿಗಳು. ಆದ್ದರಿಂದ ಪಕ್ಷ ಅದರ ನಿಜವಾದ ಒಡೆತನ ಹೊಂದಿದೆ. ಪಕ್ಷ ಬಿಟ್ಟು ಸದಸ್ಯರಿಗೆ ಈ ಒಡೆತನ ಸಲ್ಲುವುದಿಲ್ಲ ಎಂದು ವಾದಿಸಿತ್ತು.

ಈ ಕೋರ್ಟ್ ಹೋರಾಟ ನಡೆಯುತ್ತಿದ್ದಾಗ ಕಮ್ಯುನಿಸ್ಟ್ ವಿರೋಧಿ ಭಾವನೆಗಳನ್ನು ಕೆರಳಿಸುವ ಯತ್ನ ನಡೆಯಿತು. ಪತ್ರಿಕಾ ಸಮ್ಮೇಳನಗಳು, ಸುದ್ದಿ ಮಾಧ್ಯಮಗಳಲ್ಲಿ ಚರ್ಚೆ, ಸಾಕ್ಷಿದಾರರ ಹೇಳಿಕೆ ಮೂಲಕ ಕಮ್ಯುನಿಸ್ಟ್ ಪಕ್ಷ ಪ್ರಜಾಪ್ರಭುತ್ವ ರೀತಿಯಲ್ಲಿ ಕೆಲಸ ಮಾಡುತ್ತಿಲ್ಲ ಎಂಬ ತಪ್ಪುಭಾವನೆ ಹರಡಲು ಈ ಮಾಜಿ ಸದಸ್ಯರೂ ಅವರ ಬೆಂಬಲಿಗರ ಪ್ರಯತ್ನಿಸಿದ್ದು [illegible]

ಕೆನಡಾ ಚುನಾವಣಾ ಶಾಸನದಲ್ಲಿ ರಾಕ್ಷಸೀ ತಿದ್ದುಪಡಿ

ಕೆನಡಾದ ಚುನಾವಣಾ ಶಾಸನದಲ್ಲಿ ಇತ್ತೀಚೆಗೆ ಕೆಲವು ಬದಲಾವಣೆ ಮಾಡಲಾಯಿತು. ಇದರ ಪರಿಣಾಮದಿಂದಾಗಿ ಕೆನಡಾ ಕಮ್ಯುನಿಸ್ಟ್ ಪಕ್ಷ (ಸಿಪಿಸಿ) ಚುನಾವಣೆಗಳಲ್ಲಿ ಭಾಗವಹಿಸಲು ಸಾಧ್ಯವಾಗುವುದಿಲ್ಲ. ಇದರ ವಿರುದ್ಧ ಕೆನಡಾದಲ್ಲಿ ಒಂದು ಬಿರುಗಾಳಿಯೆದ್ದಿದೆ. ಸಿಪಿಸಿ ಈ ಬದಲಾವಣೆಗಳನ್ನು ಕೈ ಬಿಡುವಂತೆ ವ್ಯಾಪಕ ಪ್ರಕ್ಷೋಭೆ ನಡೆಸುತ್ತಿದೆ.

ಹೊಸ ತಿದ್ದುಪಡಿಗಳ ಪ್ರಕಾರ ಯಾವುದೇ ರಾಜಕೀಯ ಪಕ್ಷ ಒಂದು ರಾಷ್ಟ್ರೀಯ ಚುನಾವಣೆಯಲ್ಲಿ ಕನಿಷ್ಠ 50 ಅಭ್ಯರ್ಥಿಗಳನ್ನು ನಿಲ್ಲಿಸಲು (ಪ್ರತಿಯೊಬ್ಬ ಅಭ್ಯರ್ಥಿಗೆ 1000 ಡಾಲರುಗಳ ಶುಲ್ಕ ತೆರಬೇಕು) ಅಶಕ್ತವಾದರೆ ಅದರ ರಿಜಿಸ್ಟ್ರೇಶನ್ ರದ್ದಾಗುತ್ತದೆ. ಆಗ ಆ ಪಕ್ಷ ತನ್ನೆಲ್ಲಾ ರಾಜಕೀಯ ಚಟುವಟಿಕೆಗಳನ್ನು ನಿಲ್ಲಿಸಬೇಕು. ಸರಕಾರ ಅಂತಹ ಪಕ್ಷದ ಆಸ್ತಿಗಳನ್ನು ಮುಟ್ಟುಗೋಲು ಹಾಕಿಕೊಳ್ಳಬಹುದು.

ಈ ಬದಲಾವಣೆಗಳು ಕೆನಡಾದ 'ಹಕ್ಕುಗಳ ಸನ್ನದು' (ಚಾರ್ಟರ್ ಆಫ್ ರೈಟ್ಸ್) ನಲ್ಲಿರುವ ಅಭಿವ್ಯಕ್ತಿ ಸ್ವಾತಂತ್ರ್ಯ ಹಾಗೂ ಸಂಘಟನೆ ಕಟ್ಟಿಕೊಳ್ಳುವ ಸ್ವಾತಂತ್ರ್ಯಕ್ಕೆ ಧಕ್ಕೆ ತಂದಿದೆ ಎಂದು ಸಿಪಿಸಿ ವಾದ ಹೂಡುತ್ತಿದೆ. ಕಾರ್ಮಿಕ ಸಂಘಟನೆಗಳು, ನಾಗರಿಕ ಹಕ್ಕುಗಳ ಗುಂಪುಗಳು, ಪ್ರಜಾಪ್ರಭುತ್ವವಾದಿ ನಿರ್ಣಯಗಳನ್ನು ಸರಕಾರಕ್ಕೆ ಕಳಿಸುವಂತೆ ಆಗ್ರಹ ಪಡಿಸಿದೆ. ಈ ತಿದ್ದುಪಡಿಗಳ ಸಂವಿಧಾನ ಬದ್ಧತೆಯನ್ನು ಪ್ರಶ್ನಿಸಲಾಗಿದೆ.

ಈಗಾಗಲೇ ಹಲವು ಜಿಲ್ಲಾ ಮಟ್ಟದ ಕಾರ್ಮಿಕ ಮಂಡಳಿಗಳು ಈ ತಿದ್ದುಪಡಿಗಳನ್ನು ಕೈಬಿಡುವಂತೆ ಒತ್ತಾಯಿಸಿದೆ. ಏಕೆಂದರೆ ತಿದ್ದುಪಡಿಗಳು ಕೆನಡಿಯನ್ ನಾಗರಿಕರು ಚುನಾವಣಾ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಯಾಗಿ ಭಾಗವಹಿಸುವ ಹಕ್ಕನ್ನು ಸಂಸತ್ತಿನಲ್ಲಿ ತಮ್ಮ ರಾಜಕೀಯ ಪ್ರತಿನಿಧಿಯನ್ನು ಆರಿಸುವ ಹಕ್ಕನ್ನು ಹಾಗೂ ಇನ್ನೊಂದು ಅಭಿಪ್ರಾಯ, ದೃಷ್ಟಿಕೋನವನ್ನು ತಿಳಿಯುವ ಹಕ್ಕನ್ನು ಮೊಟಕುಗೊಳಿಸಿವೆ ಎಂದು ಅವು ಹೇಳಿವೆ.

ಕೆನಡಾದ ಪ್ರಮುಖ ಪತ್ರಿಕೆಗಳೂ ಈ ತಿದ್ದುಪಡಿಗಳಿಗೆ ವಿರೋಧ ವ್ಯಕ್ತಪಡಿಸಿದೆ. ಕೆನಡಾದ ಅತೀ ಹೆಚ್ಚು ಪ್ರಸಾರವುಳ್ಳ 'ಟೊರಾಂಟೋ ಸ್ಟಾರ್' ಈ ಶಾಸನವನ್ನು ಖಂಡಿಸುತ್ತಾ ಈಗಷ್ಟೇ ಚಟುವಟಿಕೆ ಆರಂಭಿಸುವ ರಾಜಕೀಯ ಪಕ್ಷಗಳೊಂದಿಗೆ ರಾಕ್ಷಸೀ ವರ್ತನೆ ತೋರುವ ಈ ಪರಿಷ್ಕೃತ ಚುನಾವಣಾ ಕಾನೂನು ನ್ಯಾಯ ಸಮ್ಮತತೆ, ಮುಕ್ತ ಅಭಿವ್ಯಕ್ತಿ, ಆಯ್ಕೆಯ ಸ್ವಾತಂತ್ರ್ಯದ ಒರೆಗಲ್ಲಿನಲ್ಲಿ ಸೋಲುತ್ತದೆ ಎಂದಿದೆ. ಕಮ್ಯುನಿಸ್ಟ್ ಪಕ್ಷ ಮತ್ತು ಇತರ ಚಿಕ್ಕ ಪಕ್ಷಗಳನ್ನು ಕೇವಲ ಅವು ಚಿಕ್ಕ ಪಕ್ಷಗಳು ಎಂದು ಕಾರಣಕ್ಕಾಗಿ ಚುನಾವಣಾ ಸಮಯದಲ್ಲಿ ಮುಚ್ಚಿಹಾಕಲು ಸಾಧ್ಯವಿಲ್ಲ ಎಂದು ಅದು ಹೇಳಿದೆ.

ಸಂಘಟಿತ ಹೋರಾಟದಿಂದ ಖಾಸಗೀಕರಣ ತಡೆಯಲು ಸಾಧ್ಯ

ಅಂಗನವಾಡಿ ಕಾರ್ಯಕರ್ತೆಯರ ಜಿಲ್ಲಾ ಸಮಾವೇಶದ ಕರೆ

ಅಂಗನವಾಡಿ ಕೇಂದ್ರಗಳನ್ನು ಖಾಸಗಿ (ಸಂಸ್ಥೆ)ಗಳಿಗೆ ವಹಿಸುವ ಕೇಂದ್ರ ಸರ್ಕಾರದ (ಧೋ)ರಣೆ ಲಕ್ಷಾಂತರ ಅಂಗನವಾಡಿ ಕಾರ್ಯ(ಕರ್ತೆ)ಯರನ್ನು ಮತ್ತು ಸಹಾಯಕಿಯರನ್ನು (ಕೆಲ)ಸದಿಂದ ತೆಗೆದು ಹಾಕುವ ಪಿತೂರಿಯಾ(ಗಿದೆ). ಸರ್ಕಾರದ ಇಂತಹ ನೀತಿಯ ವಿರುದ್ಧ (ಅಂ)ಗನವಾಡಿ ಕಾರ್ಯಕರ್ತೆಯರು ಸಂಘಟಿತ (ಹೋ)ರಾಟ ನಡೆಸಿದಲ್ಲಿ ಮಾತ್ರ ಖಾಸಗೀಕರಣ(ವ)ನ್ನು ತಡೆಯಲು ಸಾಧ್ಯವೆಂದು ಎಂ. (ಜಂ)ಬಯ್ಯ ನಾಯಕ ಇವರು ಸಮಾವೇಶವನ್ನು (ಉದ್ಘಾ)ಟಿಸಿ ಮಾತನಾಡಿದರು.

ಹೊಸ ಪೇಟೆಯಲ್ಲಿ ಅಕ್ಟೋಬರ್ 16 (ರಂ)ದು ನಡೆದ ಅಂಗನವಾಡಿ ಕಾರ್ಯಕರ್ತೆ(ಯರ) ಮತ್ತು ಸಹಾಯಕಿಯರ ಬಳ್ಳಾರಿ ಜಿಲ್ಲಾ (ಸಮಾ)ವೇಶ ಕೆ. ನಾಗರತ್ನ ಇವರ ಅಧ್ಯಕ್ಷತೆ(ಯ)ಲ್ಲಿ ನಡೆಯಿತು. ಜಿಲ್ಲೆಯ ವಿವಿಧ ತಾಲೂ(ಕು)ಗಳನ್ನು ಪ್ರತಿನಿಧಿಸಿ ಭಾಗವಹಿಸಿದ್ದ ಪ್ರತಿನಿ(ಧಿ)ಗಳು ತಾವು ಅನುಭವಿಸುತ್ತಿರುವ ಹಲವಾರು (ಸಮ)ಸ್ಯೆಗಳ ಕುರಿತಂತೆ ಚರ್ಚೆ ನಡೆಸಿ ನಿರ್ಣಯ(ಗಳ)ನ್ನು ಕೈಗೊಂಡರು.

(ನಿ)ರ್ಣಯಗಳಲ್ಲಿ ಪ್ರಮುಖವಾಗಿ ಅಂಗನವಾಡಿ ಕೇಂದ್ರಗಳನ್ನು ಖಾಸಗೀಕರಣಗೊಳಿಸುವ ನಿರ್ಧಾರ ಬದಲಾಯಿಸುವುದು, ಕೇಂದ್ರ ಸರ್ಕಾರಿ ನೌಕರರೆಂದು ಪರಿಗಣಿಸುವುದು, ಕೇಂದ್ರ ನಡೆಸಲು ಸರಕಾರಿ ಕಟ್ಟಡ ನಿರ್ಮಿಸುವುದು, ಕಾರ್ಯಕರ್ತೆಯರಿಗೆ ಮತ್ತು ಸಹಾಯಕಿಯರಿಗೆ ತಕ್ಷಣ ಕನಿಷ್ಠ ವೇತನ ನಿಗದಿ ಪಡಿಸುವುದು, ಕಾರ್ಯಕರ್ತೆಯರ ಮೇಲೆ ನಡೆಯುವ ಕಿರುಕುಳ ಮತ್ತು ದೌರ್ಜನ್ಯ ತಡೆಗಟ್ಟುವುದು, ಪ್ರತಿ ತಿಂಗಳು ಸಂಬಳ ವಿತರಣೆ, ಮಂಡಲ್ ಪಂಚಾಯ್ತಿ ಮತ್ತು ಪುರಸಭೆಗಳಿಂದ ಉರುವಲು ಕಟ್ಟಿಗೆ ವಿತರಣೆ, ವಾರ್ಷಿಕ 250 ದಿನಗಳ ಕೆಲಸ ಅವಧಿ ನಿಗದಿ ಮುಂತಾದ ನಿರ್ಣಯಗಳನ್ನು ಸಮಾವೇಶ ಕೈಗೊಂಡಿತು.

ಸಮಾವೇಶಕ್ಕೆ ಶುಭಕೋರಿ ಬಂಡಾಯ ಸಾಹಿತ್ಯ ಸಂಘಟನೆಯ ಕೆ. ಶಾಂತಕುಮಾರಿ, ಕರ್ನಾಟಕ ಪ್ರಾಂತ ರೈತ ಸಂಘಟನೆಯಿಂದ ಜಗನ್ನಾಥ್, ಡಿ.ವೈ.ಎಫ್.ಐ ಮುಖಂಡ ಗೋವಿಂದರಾಜ್ ಸಿಐಟಿಯು ಜಿಲ್ಲಾ ಮುಖಂಡರಾದ ಎಸ್. ಪ್ರಸನ್ನಕುಮಾರ್ ಇವರು ಮಾತನಾಡಿ ತಮ್ಮ ಸಂಘಟನೆಗಳ ಬೆಂಬಲವನ್ನು ವ್ಯಕ್ತಪಡಿಸಿದರು.

ಸಮಾವೇಶವು ಕೊನೆಯಲ್ಲಿ ನೂತನ ಜಿಲಾ ಸಮಿತಿಯನ್ನು ಆಯ್ಕೆ ಮಾಡಿತು. ಜಿಲ್ಲಾ ಅಧ್ಯಕ್ಷರಾಗಿ ಎಂ. ಜಂಬಯ್ಯ ನಾಯಕ್, ಪ್ರಧಾನ ಕಾರ್ಯದರ್ಶಿಯಾಗಿ ಕೆ. ನಾಗರತ್ನ ಕಾರ್ಯದರ್ಶಿಗಳಾಗಿ ವಿಜಯಲಕ್ಷ್ಮಿ ಶಕುಂತಲ, ಪುಷ್ಪಾವತಿ, ಉಪಾಧ್ಯಕ್ಷರಾಗಿ ಎಸ್.ಅಶೋಕ್, ಸೋಗಿ ನಾಗರಾಜ್, ಸಂಕಣ್ಣ, ಬಸವರಾಜ್, ಖಜಾಂಚಿಯಾಗಿ ಕೆಂಚಮ್ಮ ಮತ್ತು ಜಿಲ್ಲಾ ಸಮಿತಿ ಸದಸ್ಯರಾಗಿ ಸುಶೀಲ, ಲಕ್ಷ್ಮಿದೇವಿ, ಶಾಂತ, ದುರ್ಗಾ ಕೋಟಿ, ತುಳಸಿ, ಸಾವಿತ್ರಮ್ಮ ಸರೋಜಮ್ಮ ಶಾಶ್ವತ ಬಾಯಿ, ರೇಣುಕ, ನಾಗರತ್ನಮ್ಮ ಗಂಗಮ್ಮ ಶಕುಂತಲ, ಶಶಿಕಲಾ, ನಾಗೇಶ್ವರಿ ದೇವಿಕ, ವಿಜಯ, ಮೇರಿ ಇವರುಗಳು ಆಯ್ಕೆಯಾದರು.

ಅಕ್ಷರದಾಚೆ ಇರುವ ಜ್ಞಾನವನ್ನು ಸಾಕ್ಷರತಾ ಆಂದೋಲನ ದೊರಕಿಸಲಿ - ದರ್ಗಾ

ಅಕ್ಷರ ಕೇವಲ ಅಕ್ಷರವಲ್ಲ ಅಕ್ಷರದಾಚೆ ವಿಸ್ತರಿಸಿಕೊಂಡ ಜ್ಞಾನವಿದೆ. ಅದನ್ನು ಇಂದಿನ ಅಕ್ಷರ ಆಂದೋಲನ ಅರಿವು ಮಾಡಿಕೊಡಬೇಕೆಂದು ಸಾಹಿತಿ, ಪತ್ರಕರ್ತ ರಂಜಾನ್ ದರ್ಗಾ ಹೇಳಿದ್ದಾರೆ. ಅವರು ಇತ್ತೀಚೆಗೆ ಹೊನ್ನಾವರದಲ್ಲಿ 'ಚಿಂತನ' ಉತ್ತರ ಕನ್ನಡ ವೇದಿಕೆಯು ನಡೆಸಿದ ಸಾಕ್ಷರತೆ ಏಕೆ? ಹೇಗೆ? ಎನ್ನುವ ವಿಚಾರ ಸಂಕಿರಣದಲ್ಲಿ ಮಾತನಾಡುತ್ತಾ ಯಾವಾಗ ಅಕ್ಷರ ಜ್ಞಾನ ಸಾಮಾನ್ಯರ ಕೈಗೆ ಸಿಕ್ಕುವುದೋ ಆಗ ಸಮಾಜದಲ್ಲಿ ಕ್ರಾಂತಿ ನಡೆಯುತ್ತದೆ ಎಂದರು.

ಬಿಜಿವಿಎಸ್‌ನ ರಾಜ್ಯಕಾರ್ಯದರ್ಶಿ ಸಿ. ಯತಿರಾಜು ಮಾತನಾಡಿ "ಸಂಪೂರ್ಣ ಸಾಕ್ಷರತಾ ಆಂದೋಲನ ಒಂದು ಸಮೂಹ ಆಂದೋಲನ. ಇದೊಂದು ಸರ್ಕಾರಿ ಕಾರ್ಯಕ್ರಮ ಅಲ್ಲವೆಂದರಲ್ಲದೆ ಅಕ್ಷರ ಕಲಿಕೆಯ ನಂತರ ನಿರಂತರ ಕಲಿಕೆಯ ಕಾರ್ಯಕ್ರಮ ಕೂಡ ಈಗಲೇ ಸಿದ್ಧವಾಗಬೇಕೆಂದರು."

ಹೊನ್ನಾವರದ ತಹಸಿಲ್ದಾರ ಸುಬ್ರಾಯ ಕಾಮತ್ ಅಧ್ಯಕ್ಷತೆ ವಹಿಸಿದ್ದರು. ಡಿ. ಅಬ್ರಹಾಮ್ ಅವರು [illegible] ದರು.

'ಚಿಂತನ-ಉ.ಕ[illegible]
ವಿಠ್ಠಲ ಭಂಡಾರಿ [illegible]
ಚಿಂತನ ವೇದಿ[illegible]
ಕ್ರಿಯನ್ನು ವಿವ[illegible]
ಲಕ ಕೆ.ಆರ್. [illegible]
ಅಹ್ವಾನಿತರನ್ನು [illegible]
ಸಂಬಂಧಿಸಿದ [illegible]
ರತಾ ರೂಪಕ [illegible]
ಲ್ಪಟ್ಟಿತು.



KRNM/BGS-405 MAG(2) PRB DECR 319-78/79

ಮತ್ತೊಂದು ರಾಜ್ಯೋತ್ಸವ ಮತ್ತಷ್ಟು ಆಶ್ವಾಸನೆಗಳು

1956 ನವೆಂಬರ್ 1 ರಂದು ಕರ್ನಾಟಕ ರಾಜ್ಯ ಸ್ಥಾಪನೆಯಾಯಿತು. ಭಾಷಾವಾರು ಪ್ರಾಂತ್ಯ ರಚನೆಗಾಗಿ ಹೋರಾಡಿದವರು ಕಮ್ಯುನಿಸ್ಟರು, ರೈತ, ಕಾರ್ಮಿಕರು ಹಾಗೂ ವಿದ್ಯಾರ್ಥಿ ಯುವಜನತೆ. ಆದರೆ ಕನ್ನಡ ಭಾಷಿಕರ ಪ್ರತ್ಯೇಕ ರಾಜ್ಯ ಸ್ಥಾಪನೆಯಾದಂದಿನಿಂದಲೂ ಅಧಿಕಾರ ಚಲಾಯಿಸುತ್ತಾ ಬಂದವರು ಕರ್ನಾಟಕ ಏಕೀಕರಣಕ್ಕಾಗಿ ದುಡಿದವರಲ್ಲ. ಹೋರಾಟದ ಮೂಲಕ ಕನ್ನಡಿಗರ ಪ್ರತ್ಯೇಕ ಪ್ರಾಂತ ರಚನೆಯಾದಾಗಲೂ ಕರ್ನಾಟಕವೆಂಬ ಹೆಸರಿಡುವ ಧೈರ್ಯ ಕಾಂಗ್ರೆಸ್ ಆಳುವ ಪಕ್ಷಕ್ಕೆ ಇರಲಿಲ್ಲ. ಕಮ್ಯುನಿಸ್ಟ್ ಪಾರ್ಟಿ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಮಾತ್ರ ಹೊಸ ಪ್ರಾಂತ್ಯಕ್ಕೆ ಕರ್ನಾಟಕವೆಂಬ ಹೆಸರಿಗಾಗಿ ಹೋರಾಡಬೇಕಾಯಿತು. 1970 ರಲ್ಲಿ ದೇವರಾಜ ಅರಸರು ಮುಖ್ಯಮಂತ್ರಿ ಆದಾಗ ಮಾತ್ರ ಮೈಸೂರು ಪ್ರಾಂತವಾಗಿ ಜನ್ಮತಾಳಿದ ಕನ್ನಡ ನಾಡಿಗೆ ಕರ್ನಾಟಕವೆಂಬ ನಾಮಕರಣವಾಯಿತು. ಆದರೆ ಆಡಳಿತೆಯ ಭಾಷೆ ಇಂಗ್ಲೀಷ್ ಆಗಿಯೇ ಉಳಿಯಿತು. ಸಾರ್ವಜನಿಕರಿಗೆ ಆಡಳಿತೆಯ ನೇರ ಸಂಪರ್ಕಕ್ಕಾಗಿ ಕನ್ನಡವೇ ಆಡಳಿತ ಭಾಷೆ ಆಗಬೇಕಾಗಿದ್ದರೂ ಅದರ ಕುರಿತು ಸಾಕಷ್ಟು ಒತ್ತಡಗಳು ಬಂದರೂ ಕೂಡಾ ಕನ್ನಡದಲ್ಲೇ ಆಡಳಿತೆ ನಡೆಸಲು ಇನ್ನೂ ಮೀನಾಮೇಷ ಹಾಕುತ್ತಿದೆ. ಸರಕಾರದ ಈ ಧೋರಣೆಯಿಂದಾಗಿ ರಾಜ್ಯದಲ್ಲಿ ಸಂಕುಚಿತ ಭಾವನೆಯ, ಅಲ್ಪಭಾಷಿಕರನ್ನು ವಿರೋಧಿಸುವ ಕನ್ನಡ ಒಂದೇ ಭಾಷೆಯಾಗುಳಿಯಬೇಕೆಂಬ ಧೋರಣೆಯ ಸಂಘ ಸಂಸ್ಥೆಗಳ ಹುಟ್ಟುವಿಕೆಗೆ ಅವಕಾಶ ಮಾಡಿಕೊಟ್ಟಿತು. "ಎಲ್ಲವೂ ಕನ್ನಡಿಗರದ್ದೇ ಎಲ್ಲವೂ ಕನ್ನಡಗರಿಗೆ ಮಾತ್ರ" ಎಂಬ ಅಪಾಯಕಾರಿ ಧೋರಣೆಗೆ ಅವಕಾಶ ಮಾಡಿಕೊಟ್ಟಿತು. ಅದಿನ್ನೂ ಜೀವಂತವಾಗಿಯೇ ಇದೆ.

ಕನ್ನಡಿಗರಿಗೆ ಮಾತ್ರ ಸಾರ್ವಜನಿಕ ಕೈಗಾರಿಕೆಗಳಲ್ಲಿ ಬ್ಯಾಂಕುಗಳಲ್ಲಿ, ಉದ್ದಿಮೆಗಳಲ್ಲಿ ನೌಕರಿಯ ಅವಕಾಶ ಕೊಡಬೇಕೆಂಬ ಡಾ. ಸರೋಜಿನಿ ಮಹಿಷಿ ವರದಿಯ ಅನುಷ್ಠಾನಕ್ಕೆ ಕ್ರಮ ಕೈಗೊಳ್ಳುವ ಘೋಷಣೆ ಮಾಡಲಾಗಿದೆ. ಈ ವರದಿಯ ಕೆಲವು ಅಂಶಗಳನ್ನು ಸಿಪಿಐ(ಎಂ) ವಿರೋಧಿಸಿತ್ತು.

ಇಂಗ್ಲೀಷ್ ಶಿಕ್ಷಣ ಮಾಧ್ಯಮದ ಶಿಕ್ಷಣ ಸಂಸ್ಥೆಗಳ ಪ್ರವೃತ್ತಿಯನ್ನು ತಡೆ ಹಿಡಿಯಲು ಡಾ. ನರಸಿಂಹಯ್ಯ ಅವರ ನೇತೃತ್ವದಲ್ಲಿ ನೇಮಿಸಿದ್ದ ತಜ್ಞರು ಸಮಿತಿಯ ಶಿಫಾರಸಿನಂತೆ ಒಂದರಿಂದ ನಾಲ್ಕನೇ ತರಗತಿಯವರೆಗೆ ಪ್ರದೇಶಿಕ ಭಾಷೆ ಅಥವಾ ಮಗುವಿನ ಮಾತೃಭಾಷೆಯಲ್ಲಿ ಶಿಕ್ಷಣ ನೀಡುವ ನಿರ್ಧಾರವನ್ನು ಕಳೆದ ವರ್ಷವೇ ಪ್ರಕಟಿಸಲಾಗಿತ್ತು. ಪ್ರಾದೇಶಿಕ ಭಾಷೆಯನ್ನು ಕಲಿಯುವುದರ ಜೊತೆಗೆ ಮಗುವಿನ ಮಾತೃಭಾಷೆಯಲ್ಲಿಯೇ ಉಚ್ಚಮಟ್ಟದ ಶಿಕ್ಷಣ ಒದಗಿಸುವಂತಾಗಬೇಕೆಂದು ಸಿಪಿಐ(ಎಂ) ಸೂಚಿಸಿತ್ತು. ಪ್ರತಿ ವಿಧಾನಸಭಾ ಕ್ಷೇತ್ರದಲ್ಲೂ ಒಂದೊಂದು ಮಾದರಿ ಕನ್ನಡ ಮಾಧ್ಯಮ ಶಾಲೆಯನ್ನು ತೆರೆಯಲು ಸರಕಾರ ಉದ್ದೇಶಿಸಿದೆ ಎಂದು ಈ ರಾಜ್ಯೋತ್ಸವದ ದಿನ ಮುಖ್ಯಮಂತ್ರಿಯವರು ಉತ್ಸಾಹದಿಂದ ಪ್ರಕಟಿಸಿದ್ದಾರೆ.

ವೀರಪ್ಪಮೊಯಿಲಿಯವರು ಶಿಕ್ಷಣ ಮಂತ್ರಿಯಾಗಿದ್ದಾಗಲೂ 4.10 ಕೋಟಿ ರೂಪಾಯಿ ಖರ್ಚಿನಿಂದ 224 ಮಾದರಿ ಕನ್ನಡ ಶಾಲೆಗಳನ್ನು ಪ್ರಾರಂಭಿಸುವ ಆಶ್ವಾಸನೆ ನೀಡಿದ್ದರು. ಅದು ಇನ್ನೂ ಸಾಧಿಸಿಲ್ಲ. ಈಗ ಹೊಸ ಮಾದರಿ ಶಾಲೆಗಳ ಬದಲಾಗಿ ಹಾಲಿ ಇರುವ ಕನ್ನಡ ಪ್ರಾಥಮಿಕ ಮಾಧ್ಯಮಿಕ ಶಾಲೆಗಳನ್ನು ರಿಪೇರಿ ಮಾಡಿ, ಆಧುನೀಕರಣಗೊಳಿಸಿ, ಮಕ್ಕಳಿಗೆ ಕೂತು ಶಿಕ್ಷಣ ಪಡೆಯಲು ಸರಿಯಾದ ವಾತಾವರಣ ಸೃಷ್ಟಿಸಿ, ಶಿಕ್ಷಕರನ್ನು ನೇಮಿಸಿ, ಆಟದ ಬಯಲುಗಳನ್ನು ನಿರ್ಮಿಸಿ ಕನ್ನಡ ಶಾಲೆಗಳು ಮಾದರಿ ಶಾಲೆಗಳಾಗುವಂತೆ ಮಾಡಿದರೆ ಮಾತ್ರ ಖಾಸಗಿ ಶಾಲೆಗಳ ಮೇಲಿನ ವ್ಯಾಮೋಹಕ್ಕೆ ಕಡಿವಾಣ ಹಾಕಬಹುದಾಗಿದೆ. ಕನ್ನಡ ಶಾಲೆಗಳಿಗೆ ಸರಿಯಾದ ಕಟ್ಟಡಗಳೂ ಇಲ್ಲ, ಪಿಠೋಪಕರಣಗಳೂ ಇಲ್ಲ, ಶಿಕ್ಷಕರೂ ಇಲ್ಲ. ಈ ಮಾದರಿಯನ್ನು ಕೊನೆಗೊಳಿಸುವ ಘೋಷಣೆಯಾಗಲಿ.

ರಾಜ್ಯದಲ್ಲಿಯ ನದಿಗಳ ನೀರಿನ ಹನಿ ಹನಿಯನ್ನು ಉಪಯೋಗಿಸಲು ಕ್ರಮ ಕೈಗೊಳ್ಳುವ ಆಶ್ವಾಸನೆ ಕೂಡ ಮುಖ್ಯಮಂತ್ರಿಯವರ ಬಾಯಿಂದ ಹೊರಬಿದ್ದಿದೆ. ವಾಸ್ತವ ಪರಿಸ್ಥಿತಿ ನೋಡಿದರೆ ಕೃಷ್ಣಾ, ಕಾವೇರಿ ನದಿಗಳ ನೀರನ್ನು ಉಪಯೋಗಿಸುವ ಕುರಿತು ರಾಜಕೀಯ ನಿರ್ಧಾರ ಮಾತ್ರ ಕಂಡು ಬರುತ್ತಿಲ್ಲ.

ಭೂಕಂಪ, ನೆರೆಹಾವಳಿಗಳ ಹಿನ್ನೆಲೆಯಲ್ಲಿ, ಕಾರ್ಖಾನೆಗಳ ಮುಚ್ಚುವಿಕೆ, ಮನೆಗಳ ದರೋಡೆ, ಮಹಿಳೆಯರ ಆತ್ಮಹತ್ಯೆಗಳ ಮಧ್ಯೆ, ಹರಿಜನ-ಗಿರಿಜನರ ಮೇಲಿನ ದೌರ್ಜನ್ಯದ ನಡುವೆ ಆಳುವ ಕಾಂಗ್ರೆಸ್ ಪಕ್ಷದಲ್ಲಿ ಭಿನ್ನಮತೀಯರ ಚಟುವಟಿಕೆ ತೀವ್ರಗೊಂಡು, ಆಡಳಿತ ಕುಸಿಯುತ್ತಿರುವ ಹಿನ್ನೆಲೆಯಲ್ಲಿ ರಾಜ್ಯೋತ್ಸವ ನಡೆದಿದೆ. ಈ ಉತ್ಸವದಲ್ಲಿ ಕರ್ನಾಟಕ ಏಕೀಕರಣಕ್ಕಾಗಿ ದುಡಿದವರನ್ನು, ಮಡಿದವರನ್ನು ಕಡೆಗಣಿಸಲಾಗಿದೆ. ಪ್ರತಿವರ್ಷದಂತೆ ಆಶ್ವಾಸನೆಗಳ ಸುರಿಮಳೆ ಸುರಿಸಲಾಗಿದೆ. ಅವುಗಳ ಅನುಷ್ಠಾನದತ್ತ ಗಮನ ಹರಿಸುವ ಸೌಜನ್ಯತೆ ಕೂಡ ಕಂಡು ಬರುತ್ತಿಲ್ಲ.

ಕರ್ನಾಟಕದ ದುಡಿಯುವ ಜನತೆ ಕನ್ನಡ ನಾಡಿಗಾಗಿ ಹೋರಾಡಿದ್ದಾರೆ. ಈಗ ನಡೆಯುತ್ತಿರುವ ರಾಜ್ಯೋತ್ಸವಗಳು ಸರಕಾರಿ ಉತ್ಸವಗಳಾಗಿ ಪರಿವರ್ತನೆಗೊಂಡಿವೆ. ದುಡಿಯುವ ಜನತೆಗೆ ಅದು ಸ್ಫೂರ್ತಿ ನೀಡುತ್ತಿಲ್ಲ. ಅವರನ್ನು ಪ್ರತ್ಯೇಕಿಸಿದೆ, ದೂರ ಮಾಡಿದೆ.

-- ಎನ್.ಕೆ. ಉಪಾಧ್ಯಾಯ

.... ಎಂದೆಂದೂ ದಾರಿ ದೀಪವಾಗಿರುತ್ತದೆ

ಪುಟ 1ರಿಂದ

ದುಡಿಯುವ ಜನಗಳಿಗೆ ಹಲವು ಹಕ್ಕುಗಳನ್ನು, ಸೌಲಭ್ಯಗಳನ್ನು ಒದಗಿಸುವಂತೆ ಒತ್ತಡ ತಂದಿತು ಎಂದು ಕಾಂ. ಸುರ್ಜಿತ್ ಅಕ್ಟೋಬರ್ ಕ್ರಾಂತಿಯ ಕಳೆದ ಏಳು ದಶಕಗಳಲ್ಲಿನ ಸಾಧನೆಗಳ ಮಹತ್ವವನ್ನು ನೆನಪಿಸಿಕೊಟ್ಟಿದ್ದಾರೆ.

ಸೈದ್ಧಾಂತಿಕ ಕೊಡುಗೆ

ಅಕ್ಟೋಬರ್ ಕ್ರಾಂತಿ ಕಾರ್ಮಿಕ ವರ್ಗದ ಸಿದ್ಧಾಂತಕ್ಕೆ ನೀಡಿದ ಕಾಣಿಕೆಗಳನ್ನು ನೆನಪಿಸಿಕೊಡುತ್ತಾ ಬಂಡವಾಳಶಾಹಿ ಸಾಮ್ರಾಜ್ಯಶಾಹಿಯ ಹಂತಕ್ಕೆ ತಲುಪಿರುವಾಗ ಅದು ತನ್ನ ವಸಾಹತುಗಳ ಶೋಷಣೆಯ ಒಂದು ಭಾಗವನ್ನು ತನ್ನ ಕಾರ್ಮಿಕ ವರ್ಗಕ್ಕೆ ರೊಟ್ಟಿ ಚೂರಿನಂತೆ ಎಸೆದು ಅದು ಸುಧಾರಣಾವಾದಿ, ಪರಿಷ್ಕರಣವಾದಿ ದೃಷ್ಟಿಕೋಣದಿಂದ ಪ್ರಭಾವಿತವಾಗುವಂತೆ ಮಾಡಿದ್ದರಿಂದ ಈ ದೃಷ್ಟಿಕೋಣದ ಸಾಮಾಜಿಕ ಪ್ರಜಾಪ್ರಭುತ್ವವಾದಿಗಳೊಂದಿಗೆ ಲೆನಿನ್ ಸಮರ ನಡೆಸಿದರು. ಸಮಾಜವಾದೀ ಕ್ರಾಂತಿಯನ್ನು ಒಂದೇ ಏಟಿಗೆ ಎಲ್ಲೆಡೆ ಮಾಡಲು ಸಾಧ್ಯವಿಲ್ಲ, ಅದು ವಿವಿಧ ದೇಶಗಳ ನಿರ್ದಿಷ್ಟ ಪರಿಸ್ಥಿತಿಗಳಿಗನುಗುಣವಾಗಿ ವಿವಿಧ ಘಟ್ಟಗಳನ್ನು ಹಾದು ಹೋಗಬೇಕಾಗುತ್ತದೆ ಎಂಬುದು ಕ್ರಾಂತಿಗೆ ಸಂಬಂಧಪಟ್ಟಂತೆ ಅಕ್ಟೋಬರ್ ಕ್ರಾಂತಿಯ ಅನುಭವ ಉತ್ತರಿಸಿದ ಇನ್ನೊಂದು ತಾತ್ವಿಕ ಪ್ರಶ್ನೆ. ಬಂಡವಾಳಶಾಹಿ ದೇಶಗಳು ಯಾವುದೇ ಯೋಚನೆಯಿಲ್ಲದೆ ಬೇಕಾಬಿಟ್ಟಿ ಬೆಳೆಯುತ್ತಿದ್ದುದಕ್ಕೆ ವ್ಯತಿರಿಕ್ತವಾಗಿ ಪಂಚವಾರ್ಷಿಕ ಯೋಜನೆಗಳ ಮೂಲಕ ಯೋಜನಾಬದ್ಧ ಅಭಿವೃದ್ಧಿಯ ಪರಿಕಲ್ಪನೆಯನ್ನು ಮೊದಲು ಜಾರಿಗೆ ತಂದುದು ಅಕ್ಟೋಬರ್ ಕ್ರಾಂತಿಸಾಧಿಸಿದ ಮೊದಲ ಸಮಾಜವಾದೀ ಪ್ರಭುತ್ವ ನೀಡಿದ ಮತ್ತೊಂದು ಕೊಡುಗೆ.

ತನ್ನ ಶೈಶವ ಕಾಲದಿಂಗಲೇ ಸಾಮ್ರಾಜ್ಯಶಾಹಿಗಳ ಹಸ್ತಕ್ಷೇಪ, ಅಂತರ್ಯುದ್ಧಗಳನ್ನು ಎದುರಿಸುತ್ತಾ ಬಂದ ನಂತರದ , ಫ್ಯಾಸಿಸ್ಟ್ ಪಿಡುಗನ್ನು ಎದುರಿಸಲಾರದೆ ಇತರ ಸಾಮ್ರಾಜ್ಯಶಾಹೀ ದೇಶಗಳು ತತ್ತರಿಸಿ ಹೋದಾಗ ಫ್ಯಾಸಿಸ್ಟರನ್ನು ಮಣ್ಣು ಮುಕ್ಕಿಸಿ ವಿಶ್ವವನ್ನು ಫ್ಯಾಸಿಸಂನಿಂದ ಉಳಿಸಿದ ಸಮಾಜವಾದೀ ಕ್ರಾಂತಿಗೆ ಸಾಮ್ರಾಜ್ಯಶಾಹಿಗಳ ಆಕ್ರಮಣ ಹೊಸತೇನೂ ಅಲ್ಲ. ಸಮಾಜವಾದೀ ಕ್ರಾಂತಿ ಇವನ್ನೆಲ್ಲಾ ಎದುರಿಸಿನಿಂತಿದಿದ್ದರೆ ವಿಶ್ವದ ನಕಾಶೆ ಈಗ ಬೇರೆಯೇ ಆಗಿರುತ್ತಿತ್ತು ಎಂದು ಕಾಂ. ಸುರ್ಜಿತ್ ತಮ್ಮ ಲೇಖನದಲ್ಲಿ ವಿವರಿಸಿದ್ದಾರೆ.

ಯಶಸ್ಸು ತಾತ್ಕಾಲಿಕ

ಕಳೆದ ಕೆಲವು ವರ್ಷಗಳ ದುರದೃಷ್ಟಕರ ಘಟನೆಗಳು ಪೂರ್ವ ಯುರೋಪಿನ ಹಿಂದಿನ ಸಮಾಜವಾದೀ ದೇಶಗಳಲ್ಲಿ ಬಂಡವಾಳಶಾಹಿಯ ಮರುಸ್ಥಾಪನೆಗೆ ಅವಕಾಶ ನೀಡಿದ್ದಷ್ಟೇ ಅಲ್ಲ, ಸೋವಿಯೆತ್ ಒಕ್ಕೂಟದ ವಿಘಟನೆಗೂ ದಾರಿಮಾಡಿಕೊಟ್ಟಿವೆ. ನಮ್ಮ ಪಕ್ಷದ 14ನೇ ಮಹಾಧಿವೇಶನ ವಿಶ್ಲೇಷಿಸಿದಂತೆ ಇದಕ್ಕೆ ಆಯಾಯ ದೇಶಗಳ ವಾಸ್ತವ ಪರಿಸ್ಥಿತಿಗಳಿಗೆ ಮಾರ್ಕ್ಸ್‌ವಾದ- ಲೆನಿನ್‌ವಾದವನ್ನು ಅನ್ವಯಿಸುವಲ್ಲಿ ನುಸುಳಿಕೊಂಡ ತಪ್ಪುಗಳು, ಚ್ಯುತಿಗಳು ಹಾಗೂ ಸಮಾಜವಾದೀ ರಚನೆಯಲ್ಲಿ, ಜನಗಳ ಭಾಗವಹಿಸುವಿಕೆಯನ್ನು ಬಲಪಡಿಸುವಲ್ಲಿ ಉಂಟಾದ ಕೊರತೆಗಳು, ತಪ್ಪುಗಳು ಕಾರಣ. ಈಗ ಸಮಾಜವಾದವಿರುವ ದೇಶಗಳು -ಚೀಣಾ, ಕ್ಯೂಬಾ, ವಿಯೆಟ್ನಾಂ ಹಾಗೂ ಉತ್ತರ ಕೊರಿಯಾ- ಹಿಂದಿನ ತಪ್ಪುಗಳಿಂದ ಪಾಠ ಕಲಿತು ತಂತಮ್ಮ ಪರಿಸ್ಥಿತಿಗಳಲ್ಲಿ ತಮಗೆ ಯೋಗ್ಯವೆಂದು ಕಂಡಂತೆ ಸೂಕ್ತ ಹಾಗೂ ಸಾಕಷ್ಟು ಬದಲಾವಣೆಗಳನ್ನು ಮಾಡಿಕೊಳ್ಳುತ್ತಿವೆ.

ಸಾಮ್ರಾಜ್ಯಶಾಹಿ ಹಿಂದಿನ ಸಮಾಜವಾದೀ ದೇಶಗಳಲ್ಲಿನ ಘಟನೆಗಳಿಗೆ, ಒಳಗಿನ ಬುಡಮೇಲು ಕೃತ್ಯಗಳಿಗೆ ಸಾಕಷ್ಟು ಪ್ರೋತ್ಸಾಹ, ನೆರವು ನೀಡಿದೆ ಎಂಬುದರಲ್ಲಿ ಸಂಶಯವಿಲ್ಲ. ಆದರೆ ಶೋಷಕ ವ್ಯವಸ್ಥೆಯ ಅನಿವಾರ್ಯ ವಾಸ್ತವ ಸಂಗತಿಗಳಾದ ಹಸಿವು ಬಡತನ, ದಾರಿದ್ರ್ಯ ತಮ್ಮನ್ನು ಕಾಡಲಾರಂಭಿಸಿರುವಾಗ ಪೂರ್ವ ಯೂರೋಪ್‌ನ, ಹಿಂದಿನ ಸೋವಿಯೆತ್ ಒಕ್ಕೂಟದ ಜನ ಹೋರಾಟದ ಕಣಕ್ಕಿಳಿದಿದ್ದಾರೆ ಎಂದು ಸುರ್ಜಿತ್ ಹೇಳಿದ್ದಾರೆ. ಸಾಮ್ರಾಜ್ಯಶಾಹೀ ಶಕ್ತಿಗಳ ಬೆಂಬಲದಿಂದ ನಡೆಯುವ ಯೆಲ್ಟ್‌ಸಿನ್‌ರ ಸರ್ವಾಧಿಕಾರಿ ಆಳ್ವಿಕೆ ಮುಂಬರುವ ದಿನಗಳಲ್ಲಿ ಹೆಚ್ಚೆಚ್ಚು ಪ್ರತಿರೋಧ ಎದುರಿಸಬೇಕಾಗುತ್ತದೆ. ಪೋಲಂಡಿನ ಚುನಾವಣೆಗಳಲ್ಲಿ ಪ್ರಗತಿಪರ ಶಕ್ತಿಗಳ ವಿಜಯ, ಇತರ ಪೂರ್ವ ಯುರೋಪ ದೇಶಗಳಲ್ಲಿ ಈ ಶಕ್ತಿಗಳು ಸಾಧಿಸಿರುವ ಮುನ್ನಡೆ ಗಮನಾರ್ಹ. ಸಾಮ್ರಾಜ್ಯಶಾಹಿಗಳ ಸತತ ಆಕ್ರಮಣಗಳಿಂದ ಕೈ ಚೆಲ್ಲಿದ್ದ ಕೂತಿದ್ದ ಪಕ್ಷಗಳೂ ಈಗ ಮತ್ತೆ ಹೊಸ ಸವಾಲುಗಳನ್ನು ಎದುರಿಸಲು ಸಜ್ಜಾಗುತ್ತಿವೆ. ಸಾಮ್ರಾಜ್ಯಶಾಹಿಯ ತಂತ್ರಗಳಿಗೆ ತಾತ್ಕಾಲಿಕ ಯಶಸ್ಸು ದೊರೆತರೂ ಅದು ದೊಡ್ಡ ಪ್ರಮಾಣದ ಪ್ರತಿ ಸವಾಲನ್ನು ಎದುರಿಸಬೇಕಾದ, ಸೋಲುಣ್ಣಬೇಕಾದ ದಿನಗಳು ಬಹಳ ದೂರವಿಲ್ಲ ಎಂದು ಸುರ್ಜಿತ್ ತಮ್ಮ ಲೇಖನದಲ್ಲಿ ಹೇಳಿದ್ದಾರೆ.

ಇತಿಹಾಸದ ಪುಟಗಳಿಂದ

ಪುಟ 2ರಿಂದ

ಎರಡನೇ ಸಾರ್ವತ್ರಿಕ ಚುನಾವಣೆಯ ಫಲಿತಾಂಶಗಳು, ಮೊದಲನೇ ಸಾರ್ವತ್ರಿಕ ಚುನಾವಣೆಯಲ್ಲಿ ನಾವುಗಳಿಸಿದ್ದ ಸ್ಥಾನಗಳಿಗೆ ಯಾವುದೇ ರೀತಿಯಲ್ಲಿ ಚ್ಯುತಿ ಬಾರದ ರೀತಿಯಲ್ಲಿ ಪ್ರಕಟಗೊಂಡವು. ಕೇರಳದಲ್ಲಿ ಮೊದಲ ಚುನಾಯಿತ ಕಮ್ಯುನಿಸ್ಟ್ ಸರ್ಕಾರ ಅಧಿಕಾರಕ್ಕೆ ಬಂದಿತು.

ಆದ್ದರಿಂದ ಆಂಧ್ರ ಚುನಾವಣೆಯಿಂದ ಉಂಟಾಗಿದ್ದ ಪರಿಸ್ಥಿತಿಯು ಈ ಚುನಾವಣೆಯಲ್ಲೂ ಪುನರಾವರ್ತಿಸಬಹುದೆಂಬ ಭಯ ನಿವಾರಣೆಯಾಯಿತು. ಆದರೆ ಭಾರತದ ಆಂತರಿಕ ಸ್ಥಿತಿಯ ಬಗ್ಗೆ ಸೋವಿಯತ್ ಪಕ್ಷದ ಅಂದಾಜಿನ ರೀತಿಯಲ್ಲೇ ಭಾರತದ ಪಕ್ಷಕ್ಕಿಂತ ಚೀಣೀ ಪಕ್ಷದ ಅಂದಾಜು ಭಿನ್ನವಾಗಿ ಮುಂದುವರಿಯಿತು.

ಈ ಅವಕಾಶವನ್ನು ಬಿಟ್ಟರೆ ಚೌರವರನ್ನೇ ಭೇಟಿ ಮಾಡುವ ಸಂದರ್ಭ ಮುಂದೆ ನನಗೆ ಒದಗಲಿಲ್ಲ. ನಂತರ ಸೋವಿಯೆತ್ ಪಕ್ಷದ 20ನೇ ಅಧಿವೇಶನದಲ್ಲಿ ಭಾಗವಹಿಸಲು ಭಾರತದ ಪಕ್ಷದ ನಿಯೋಗದಲ್ಲಿ ಅಂದು ಕೇರಳದ ಮುಖ್ಯಮಂತ್ರಿಯಾಗಿದ್ದ ನಾನು ಅಜಯ್‌ಘೋಷ್‌ರವರ ನೇತೃತ್ವದಲ್ಲಿ ಭೇಟಿ ಕೊಟ್ಟಾಗ ಚೀಣೀ ತಂಡದ ನಾಯಕರಾದ ಚೌರವರ ಜೊತೆ ಭೇಟಿ ಮಾಡಿದೆ. ಕೇರಳ ಸರ್ಕಾರದ ಕೆಲಸಗಳು, ಅನುಭವಗಳು ಹಾಗೂ ಕೇರಳ ಸರ್ಕಾರದ ವಿರುದ್ಧ ಕೇಂದ್ರ ಸರ್ಕಾರ ಮತ್ತು ಕಾಂಗ್ರೆಸ್ ಪಕ್ಷವು ನೀಡುವ ಕಿರುಕುಳದ ಬಗ್ಗೆಯೂ ನಾನು ಅವರಿಗೆ ವಿವರಿಸಿದೆ.

ಚೌರವರು ತಮ್ಮ ಸ್ನೇಹಿತರಾಗಿದ್ದ ಪ್ರಧಾನಿ ನೆಹರೂರವರ ಜೊತೆ ಈ ವಿಷಯಗಳ ಕುರಿತು ಮಾತನಾಡಿ ಬಿಕ್ಕಟ್ಟನ್ನು ತಿಳಿಗೊಳಿಸಬೇಕೆಂದು ವಿನಂತಿಸಿಕೊಂಡೆ. ಆದರೆ ಅಷ್ಟೊತ್ತಿಗೆ ಭಾರತ-ಚೀನಾ ಗಡಿ ಪ್ರಶ್ನೆಯು ತೀವ್ರ ಸ್ವರೂಪ ಪಡೆದಿದ್ದರಿಂದ ನಮ್ಮ ವಿಷಯದಲ್ಲಿ ಏನೂ ಮಾಡಲಿಕ್ಕಾಗದು ಎಂದು ಚೌರವರು ತಮ್ಮ ಅಭಿಪ್ರಾಯ ತಿಳಿಸಿದರು.

ಈ ಸಂದರ್ಭ ಬಿಟ್ಟರೆ ಚೌರವರನ್ನು ಯಾವತ್ತು ನಾನು ನೇರವಾಗಿ ಕಂಡಿಲ್ಲ. ಆದರೆ ಇವರ ಉಜ್ವಲವಾದ ಕ್ರಾಂತಿ ಜೀವನದ ಪುಟಗಳಲ್ಲಿ ನನಗೂ ಸ್ಥಾನ ಪಡೆಯಲು ಸಾಧ್ಯವಾಯಿತು. ವಿಶ್ವ ಕ್ರಾಂತಿಕಾರಿ ಚಳುವಳಿಯ ನಾಯಕತ್ವದಲ್ಲಿ ತಮ್ಮ ಉನ್ನತವಾದ ಸ್ಥಾನವನ್ನು ವ್ಯಕ್ತಪಡಿಸುವಂತ ಅನುಭವೇ ಈ ಭೇಟಿಯಾಗಿತ್ತು. ಪಕ್ಷದ ಕಾಂಗ್ರೆಸ್ ಮುಗಿದ ನಂತರ ಎರಡು ವಾರಗಳ ಕಾಲ ಚೀನಾದ ವಿವಿಧ ನಗರಗಳಿಗೆ ಭೇಟಿ ಕೊಡುವ ಸಂದರ್ಭ ನನಗೆ ಒದಗಿತ್ತು. ಒಂದು ದಿನ ಚುನ್-ಕಿಂಗ್ ಪಟ್ಟಣಕ್ಕೆ ಭೇಟಿ ಕೊಟ್ಟೆ. ಅಲ್ಲಿ ಚೌರವರು ತಮ್ಮ ಪತ್ನಿ ಸಮೇತ ಒಂದು 5 ವರ್ಷ ಕಾಲ [illegible] ಚರಿತ್ರಾರ್ಹವಾದ ಆ ಕಟ್ಟ[illegible] [illegible]ಂಚನವಾಯಿತು.

ಚೈನಾ-ಜಪಾನ್ ಯುದ್ಧದ ಸಂದರ್ಭದಲ್ಲಿ ವಿಜಯಶಾಲಿಗಳಾಗಿ ಚಿಯಾಂಗ್-ಕೈ- ಷೇಕ್ ನೇತೃತ್ವದ ಅಧಿಕೃತ ಸೈನ್ಯ ಮತ್ತು ಪಕ್ಷವು ತಮತಮಗೆ ಯುಕ್ತವಾಗಿ ಕಂಡ ಮಾರ್ಗಗಳನ್ನು ಅಂಗೀಕರಿಸಿದರು. ಚೀನಾದ ರಾಜಧಾನಿ ಆಗಿದ್ದ ಬೀಜಿಂಗ್ ಜಪಾನ್‌ನ ಅಧೀನದಲ್ಲಿತ್ತು. ಆದ್ದರಿಂದ ಸರ್ಕಾರದ ಅಧಿಕೃತ ಕಛೇರಿಯನ್ನು ಚುನ್-ಕಿಂಗ್‌ಗೆ ಸ್ಥಳಾಂತರಿಸಲಾಯ್ತು.

ಚೀನಾದ ಹಲವು ಭಾಗಗಳಲ್ಲಿ ಸರ್ಕಾರ ಮತ್ತು ಸೈನ್ಯಗಳೆರಡೂ ಕಮ್ಯುನಿಸ್ಟ್ ಪಕ್ಷದ್ದಾಗಿದ್ದವು. ಅದರ ಪ್ರತಿನಿಧಿಯಾಗಿ ಚೌ-ಎನ್.ಲಾಯ್ ಚುನ್-ಕಿಂಗ್ ಪಟ್ಟಣಕ್ಕೆ ಬಂದಿದ್ದರು. ಅಲ್ಲಿ ಅವರು ತಂಗಿದ್ದ ಸ್ಥಳವೇ ನಾನು ರೋಮಾಂಚನಗೊಳ್ಳಲು ಕಾರಣವಾಗಿದ್ದ ಕಟ್ಟಡವಾಗಿತ್ತು.

ಅಧಿಕೃತವಾಗಿ ನೋಡಿದರೆ ಚೌರವರು ಕ್ಯುಮಿಂಟಾಂಗ್‌ನ (Kuomintang) ಪ್ರತಿನಿಧಿಯಾಗಿದ್ದರು. ಆದರೆ ವಾಸ್ತವವಾಗಿ ನೋಡಿದರೆ ಇವರು ಕ್ಯುಮಿಂಟಾಂಗ್ ಸರ್ಕಾರದ ಖೈದಿಯಾಗಿದ್ದರು. ಪತ್ನಿ ಸಮೇತ ಇವರು ವಾಸಿಸಿದ ಎರಡು ಮೂರು ಕೋಣೆಗಳನ್ನು ಬಿಟ್ಟರೆ ಆ ಕಟ್ಟಡ ಸಂಪೂರ್ಣವಾಗಿ ಮಿಲಿಟರಿಯವರ ಅಧೀನದಲ್ಲಿ ಬಳಕೆಯಲ್ಲಿತ್ತು. ರೂಮನ್ನು ಬಿಟ್ಟು ಆಚೆ ಹೋಗಲು ಸಹ ಚೌ ಅವರಿಗೆ ಸಾಧ್ಯವಿರಲಿಲ್ಲ. ಮಾತಿಗೆ ಮಾತ್ರ ಸಮಾನ ಸರ್ಕಾರದ ಪ್ರತಿನಿಧಿಯಾಗಿ ವಾಸ್ತವವಾಗಿ ಖೈದಿಯಗಿ ಎರಡು-ಮೂರು ವರ್ಷಗಳ ಕಾಲ ಚುನ್-ಕಿಂಗ್‌ನಲ್ಲಿ ಕಾಲ ಕಳೆದಿದ್ದರು. ಚೌರವರ ಕ್ರಾಂತಿಕಾರಕ ಜೀವನದ ಉಜ್ವಲವಾದ ಅವಧಿಯಾಗಿ ಈ ಕಠಿಣ ಕಾಲವು ಪ್ರಜ್ವಲಿಸುತ್ತದೆ.

ಇದೇ ರೀತಿಯ ಅನುಭವದಾಧಾರದಲ್ಲಿ ಯುದ್ಧದ ಕೊನೆಯ ಸಂದರ್ಭದಲ್ಲಿ ಕ್ಯುಮಿಂಟಾಂಗ್ ಮತ್ತು ಕಮ್ಯುನಿಸ್ಟ್ ಸರ್ಕಾರಗಳೆರಡೂ ಸೇರಿ ಸರ್ಕಾರ ರಚಿಸಬೇಕೆಂಬ ಸಲಹೆಯನ್ನು ಕಮ್ಯುನಿಸ್ಟ್ ಪಕ್ಷವು ಮುಂದಿಟ್ಟಿತು. ಆ ಸಲಹೆಯನ್ನು ತಳ್ಳಿ ಹಾಕಿದ ಕ್ಯುಮಿಂಟಾಂಗ್‌ನ ವಿರುದ್ಧ ರಾಷ್ಟ್ರವ್ಯಾಪಿ ಯುದ್ಧಕ್ಕೆ ಪಕ್ಷವು ಕರೆ ಕೊಟ್ಟಿತು. ಇದರಲ್ಲಿ ಪಡೆದ ಸೈನಿಕ ವಿಜಯದೇ ಜನತಾ ಪ್ರಜಾಪ್ರಭುತ್ವ ಕ್ರಾಂತಿ. ಇದರ ಮುಂಚೂಣಿಯಲ್ಲಿ ಇದ್ದ ಚೂಟೆ, ಲಿಯೋ-ಷಾವುಕಿ, ಮಾವ್ಹೋ ಮುಂತಾದವರ ಸಾಲಿನಲ್ಲಿ ಮತ್ತೊಬ್ಬರಾಗಿದ್ದರು ಚೌ-ಎನ್-ಲಾಯ್

ಸಂಗ್ರಹ - ಭಾಷಾನುವಾದ
ಇ.ಕೆ.ಎಸ್. ರಾಜನ್

ಸಾಮ್ರಾಜ್ಯಶಾಹಿಯ

ನ್ಯಾ. ಎನ್.ಡಿ. ವೆಂಕಟೇಶ್ ಆಯೋಗದ ವರದಿ..........

ಪುಟ 1ರಿಂದ

ಇಂಥ ಗಂಭೀರ ಪರಿಸ್ಥಿತಿ ಉದ್ಭವಿಸಿದಾಗ ಅಧಿಕಾರಿಗಳು ಪರಿಸ್ಥಿತಿಯ ಬಗ್ಗೆ ಮೊದಲೇ ಆಲೋಚಿಸಬೇಕು, ದೂರದೃಷ್ಟಿ, ತಿಳುವಳಿಕೆ ಎಚ್ಚರಿಕೆಯ ಗುಣಗಳು ಕಂಡು ಬರಬೇಕಾಗಿತ್ತು. ಆದರೆ ಆಡಳಿತ ಸಾಮರ್ಥ್ಯ ಪ್ರಕಟಗೊಳ್ಳಲಿಲ್ಲ. ಬದಲಾಗಿ ಒಂದು ರೀತಿಯ "ಜಡ್ಡು" ಕಂಡು ಬಂತು ಎಂದು ಮಾತ್ರ ಆಡಳಿತ ಯಂತ್ರವನ್ನು ಆಯೋಗ ಟೀಕಿಸಿದೆ.

ಗಲಭೆಯಿಂದಾಗಿ 20 ಕೋಟಿ ರೂಪಾಯಿ ಮೌಲ್ಯದ ಸಾರ್ವಜನಿಕ ಆಸ್ತಿ, 100 ಕೋಟಿ ರೂ. ಮೌಲ್ಯದ ಖಾಸಗಿಯವರ ಆಸ್ತಿ ನಾಶವಾಯಿತೆಂದು ಹೇಳಿದ ವರದಿ, ಡಿಸೆಂಬರ್ 12ರಂದು ನಗರದ ಕೆಲವಡೆಗಳಲ್ಲಿ ಮಾತ್ರ ಸ್ವಲ್ಪ-ಸ್ವಲ್ಪ ಅಹಿತಕರ ಘಟನೆಗಳು ನಡೆದವೆಂದೂ, 13, 14 ರಂದು ಗಲಭೆ ಹಿಂಸಾಚಾರ ಸ್ಪಷ್ಟವಾಗಿ "ತಮಿಳು ವಿರೋಧಿ"ಯಾಗಿ ತಿರುಗಿತೆಂದೂ ತಮಿಳುನಾಡಿನಿಂದ ನಗರಕ್ಕೆ ವಲಸೆ ಬಂದಿರುವ ಜನ ತಮ್ಮೆಲ್ಲ ಅವಕಾಶಗಳನ್ನು ಕಸಿದುಕೊಳ್ಳುತ್ತಿದಾರೆ ಎಂದು ಕೆಲ ಸ್ಥಳೀಯರು ಭಾವಿಸಿದ್ದೆ ಹಿಂಸಾಚಾರ

> ನ್ಯಾಯಮೂರ್ತಿ ಎನ್.ಡಿ. ವೆಂಕಟೇಶ ವರದಿಯಲ್ಲಿಯ ದಾಖಲೆಗಳು 3 ದಿನಗಳ ಹಿಂಸಾಚಾರದ ಫಲ.
>
> - ಗಲಭೆ ನಗರದ 77 ಪೋಲೀಸ್ ಠಾಣೆಗಳ ಪೈಕಿ ಕೇವಲ 13 ಠಾಣೆಗಳ ವ್ಯಾಪ್ತಿಗೆ ಮಾತ್ರ ಸೀಮಿತವಾಗಿತ್ತು.
> - ಮೂರು ದಿನಗಳ ಹಿಂಸಾಚಾರದಲ್ಲಿ 193 ಪೋಲೀಸರು ಗಾಯಗೊಡರು. 2,637 ವಾಸದ ಮನೆ, ಗುಡಿಸಲುಗಳು, ಕೈಗಾರಿಕಾ ಶೆಡ್ಡುಗಳು ನಾಶವಾದವು.
> - 13 ಹೋಟೆಲ್‌ಗಳು 365 ಅಂಗಡಿಗಳು, 12 ವಿದ್ಯಾಸಂಸ್ಥೆಯ ಕಟ್ಟಡಗಳಿಗೂ ಹಾನಿಯಾಗಿದೆ.
> - ಸಂಜಯಗಾಂಧಿ ನಗರ ಕೊಳಚೆ ಪ್ರದೇಶದ ಎಲ್ಲಾ 440 ಗುಡಿಸಲುಗಳು ಸುಟ್ಟು ಭಸ್ಮವಾಗಿವೆ.
> - 145 ಪೋಲೀಸ್ ವಾಹನಗಳು ನಾಶವಾಗಿವೆ. 87 ವಾಹನಗಳಿಗೆ ಜಖಂ ಆಗಿದೆ.
> - 3 ದಿವಸಗಳಲ್ಲಿ ಒಟ್ಟು 464 ಸುತ್ತು ಗುಂಡು ಹಾರಿಸಲಾಯಿತು. 1,739 ಟಿಯರ್ ಗ್ಯಾಸ್ ಶೆಲ್‌ಗಳನ್ನು ಸಿಡಿಸಲಾಯಿತು.
> - 20 ಕೋಟಿ ಮೌಲ್ಯದ. ಸಾರ್ವಜನಿಕ ಆಸ್ತಿ 100 ಕೋಟಿ ಮೌಲ್ಯದ ಖಾಸಗಿ ಆಸ್ತಿ ನಾಶವಾಗಿದೆ.

"ತಮಿಳರ ಮೇಲೆ" ತಿರುಗಲು ಕಾರಣವೆಂದು ವರದಿಯಲ್ಲಿ ಹೇಳಿರುವುದು ಸಮಾಜ ದ್ರೋಹಿಶಕ್ತಿಗಳ, ಹೊರ ರಾಜ್ಯದವರನ್ನು ಸಂಪೂರ್ಣ ದ್ವೇಷಿಸುವ ಸಂಕುಚಿತವಾದಿಗಳ ಹಿಂಸಾಕೃತ್ಯವೆಂಬುದನ್ನು ಮರೆಮಾಚುವ ಅಂಶವಾಗಿದೆ.

ತನಿಖಾ ವರದಿಯೇ ಹೇಳುವಂತೆ ಡಿಸೆಂಬರ್ 12 ಘಟನೆಗಳ ಅಪಾಯವನ್ನು ಅರ್ಥೈಸಿಕೊಂಡು ಬಂಗಾರಪ್ಪ ಸರಕಾರ ಮುಂದಾಗಬಹುದಾದ ಗಂಡಾಂತರ ಹಿಂಸಾಚಾರದಿಂದ ತಮಿಳರನ್ನು ರಕ್ಷಿಸಲು ಪೋಲೀಸ್ ಅಧಿಕಾರಿಗಳಿಗೆ ಆದೇಶ ನೀಡಿ ತುರ್ತಿನ ಮುಂಜಾಗ್ರತಾ ಕ್ರಮ ಕೈಗೊಂಡಿದ್ದರೆ, ಜೀವ ಹಾನಿ, ಆಸ್ತಿ ಹಾನಿ ತಪ್ಪಿಸಬಹುದಿತ್ತು. ಈ ಅಂಶವನ್ನು ಆಯೋಗ ಗಮನಕ್ಕೆ ತೆಗೆದುಕೊಂಡಿದ್ದರೆ ಗೃಹ ಮಂತ್ರಿ, ಪೋಲೀಸ್ ಅಧಿಕಾರಿಗಳನ್ನು ಸಂಪೂರ್ಣ ಜವಾಬ್ದಾರರೆಂದು ಪರಿಗಣಿಸಬಹುದಿತ್ತು.

ಗೋಕಾಕ ವರದಿ, ಮಹಿಷಿ ವರದಿ, ಕಾವೇರಿ ಸಮಸ್ಯೆಗಳೆಲ್ಲ ಅಲ್ಪಭಾಷಿಕರ ಮೇಲೆ ದೌರ್ಜನ್ಯದ ಭಾವನೆಗಳನ್ನು ಮೂಡಿಸತೊಡಗಿದಾಗಲೇ ಸರಕಾರ ಅವರ ರಕ್ಷಣೆಗೆ ವ್ಯವಸ್ಥಿತ ಕಾರ್ಯಕ್ರಮ ರೂಪಿಸಿಕೊಳ್ಳಬೇಕಿತ್ತು. ಕಾಂಗ್ರೆಸ್ ಆಡಳಿತದಲ್ಲಿ ಬೇರು ಬಿಟ್ಟಿರುವ ಜಾಡ್ಯ ಮುಂಬರತಕ್ಕ ಪರಿಸ್ಥಿತಿಗಳ ಬಗ್ಗೆ ಕೈಗೊಳ್ಳಬೇಕಾದ ಕ್ರಮ ಕುರಿತು ಮುಂದಾಲೋಚನೆ ಮೂಡಿಬರುವಂತೆ ಮಾಡದಿರುವುದೇ ಈ ರೀತಿಯ ಹಿಂಸಾಚಾರ, ನಿರಪರಾಧಿಗಳ ಹತ್ಯೆಗೆ ಕಾರಣೀಭೂತವಾಗಿದೆ.

ಈ ಅಂಶವನ್ನಾದರೂ ಮೊಯಿಲಿ ಸರಕಾರ ಗಮನಿಸಬೇಕಾಗಿರುವುದು ಅತ್ಯಗತ್ಯ. ಅದರ ಜೊತೆಯಲ್ಲಿಯೇ ಭಾರತದ ಸಂವಿಧಾನದ ಪ್ರಕಾರ, ಕನ್ನಡಿಗರಿಗೆ, ತಮಿಳರಿಗೆ, ಮಲೆಯಾಳಿಗಳಿಗೆ, ಮರಾಠಿಗರಿಗೆ ಹಾಗೆಯೇ ದೇಶದ ಯಾವುದೇ ರಾಜ್ಯದಲ್ಲಿ ವಾಸಿಸುವ ಜನರಿಗೆ ಮತ್ತೊಂದು ರಾಜ್ಯದಲ್ಲಿ ನೆಲೆಸುವ, ಕೆಲಸ ಮಾಡುವ ಉದ್ಯಮ ನಡೆಸುವ ವ್ಯಾಪಾರ ಮಾಡುವ ಹಕ್ಕಿದೆಂಬುದನ್ನು ಬೇರೆ ಭಾಷಿಕರನ್ನು ದ್ವೇಷಿಸುವ ಜನರಿಗೆ, ಸಂಘ ಸಂಸ್ಥೆಗಳಿಗೆ ಮನವರಿಕೆ ಮಾಡಿಕೊಡುವುದು ಅತ್ಯಗತ್ಯ

— ಎನ್.ಕೆ. ಉಪಾಧ್ಯಾಯ

ಸಿಐಟಿಯು ರಾಜ್ಯ ಮಂಡಳಿ.........

ಪುಟ 1ರಿಂದ

ಮಾಡಿ ಧರಣಿ ಭಾಗವಹಿಸಬೇಕು ಹೊರಗಿನಿಂದ ಬಂದವರಿಗೆ ಊಟದ ಪೊಟ್ಟಣ ಒದಗಿಸಬೇಕು ಎಂದು ಹೇಳಿಕೆ ಸಿ.ಐ.ಟಿ.ಯು. ಕಾರ್ಯಕರ್ತರಿಗೆ ಸೂಚಿಸಿದೆ.

ದ.ಕ. ಜಿಲ್ಲೆಯಲ್ಲಿ ಬೆಂಗಳೂರಿನಲ್ಲಿ ನಡೆಯುವಂತೆಯೇ ಸಮಾನಾಂತರ ಧರಣೆ ನಡೆಸಬೇಕೆಂದೂ, ರಾಜ್ಯದ ಇತರೆಡೆಗಳಲ್ಲಿ ನವೆಂಬರ್ 25 ರಂದು ದೊಡ್ಡ ಪ್ರಮಾಣದ ಮತಪ್ರದರ್ಶನಗಳನ್ನು ನಡೆಸಬೇಕೆಂದೂ ರಾಜ್ಯ ಮಂಡಳಿ ಕರೆ ಕೊಟ್ಟಿದೆ.